ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Friday, 7th July 1972/Ashadha 16, 1894 (Saka)

The House met in the Assembly Chamber, Vidhana Soudha, at Twelve of the Clock.

MADAM SPEAKER (SMT. K. S. NAGARATHNAMMA) in the Chair.

TAKING UP SOME ADJOURNMENT AND CALL ATTENTION NOTICES

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷಿಣಿಯವರೇ ನಾನು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇನೆ.

ಅಧ್ಯಕ್ಷರು.—ತಮ್ಮ ನಿಲುವಳಿ ಸೂಚನೆ ಬಂದಿದೆ ಅದಕ್ಕೆ ತಮಗೆ ಉತ್ತರ ಬರುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.— ಈಗಾಗಲೇ ಮೈಸೂರಿನಲ್ಲಿ ಒಬ್ಬರು ಉಪವಾಸ ಕುಳಿತಿದ್ದಾರೆ.

ಅಧ್ಯಕ್ಷರು.—ಇದರ ವಿಚಾರದಲ್ಲಿ ಬೇಕಾದಷ್ಟು ಸಾರಿ ಬೇಕಾದಷ್ಟು ಸಮಯ ಚರ್ಚೆಯಾಗಿದೆ. ಇದನ್ನು ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ ಅಂತ ತಮಗೆ ಉತ್ತರ ಬರುತ್ತದೆ, ತಾವು ಈಗ ಕುಳಿತುಕೊಳ್ಳಿ.

SRI B. B. SAYANAK (Belgaum).—Madam, yesterday, I have given a Notice of Call Attention notice regarding submersion of villages in Malaprabha river. To-day also, it has appeared in the press that one more village has been sudmerged. I request the Government to make a statement early.

MADAM SPEAKER.—Yes ; as early as possible.

REVISED BUDGET ESTIMATES FOR 1972-73

Demands for Grants—Demand Nos : 6, 31, 31A, 30B, 32, 47, 48, and 50

(Debate Continued)

†ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).– ಮಾನ್ಯ ಅಧ್ಯಕ್ಷರೇ ಲೋಕೋಪಯೋಗಿ ಇಲಾಖೆಯ ಸಚಿವರು ಮಂಡಿಸಿರುವ ಈ ಇಲಾಖೆಯ ಬೇಡಿಕೆಯನ್ನು ನಾನು ಅತ್ಯಂತ ತೀವ್ರವಾಗಿ ವಿರೋಧಿಸುತ್ತಾ ಎರಡು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯಸಭಾಧ್ಯಕ್ಷರೇ

---

†Indicates that the remarks or speeches have not been revised by the member concerned.

(ಶ್ರೀ ಕಾಗೋಡು ತಿಮ್ಮಪ್ಪ)

ಈ ರಾಜ್ಯ ಗ್ರಾಮಾಂತರ ಪ್ರದೇಶದಿಂದ ಸೇರಿರತಕ್ಕ ರಾಜ್ಯ. ಈ ರಾಜ್ಯವನ್ನು ಸಾರ್ವತ್ರಿಕ ದೃಷ್ಟಿಯಿಂದ ಅಭಿವೃದ್ಧಿ ಪಡಿಸುವುದರಲ್ಲಿ ಈ ಲೋಕೋಪಯೋಗಿ ಇಲಾಖೆ ಸಂಪೂರ್ಣವಾಗಿ ವಿಫಲವಾಗಿದೆ ಎಂಬುದನ್ನು ನಾನು ವಿಷಾದದಿಂದ ಹೇಳಬೇಕಾಗಿದೆ. ಇನ್ನೂ ಈ ರಾಜ್ಯದ ಅನೇಕ ಗ್ರಾಮಗಳಿಗೆ ಸಂಪರ್ಕವನ್ನು ಕಲ್ಪಿಸಿಕೊಡಬೇಕಾದ ದೊಡ್ಡ ಜವಾಬ್ದಾರಿ ಈ ಸರ್ಕಾರಕ್ಕೆ ಇದೆ. ಆ ದಿಶೆಯಲ್ಲಿ ಅವರು ಇಟ್ಟುಕೊಂಡಿರತಕ್ಕ ಹಣವಾದರೂ ಕೂಡ ಬಹಳ ಕನಿಷ್ಟ ಪ್ರಮಾಣದ ಹಣವಾಗಿದೆ. ಅದರಿಂದ ಈಗ ಇರತಕ್ಕ ಪರಿಸ್ಥಿತಿಯನ್ನು ಈ ಸರ್ಕಾರದಿಂದ ಬಗೆಹರಿಸುವುದಕ್ಕೆ ಆಗುವುದಿಲ್ಲ. ಅವರ ಲೆಕ್ಕಾಚಾರದ, ಅಂಕಿ ಅಂಶದ ಪ್ರಕಾರ ಇವತ್ತಿಗೂ ಕೂಡ ಸುಮಾರು 6,245 ಹಳ್ಳಿಗಳಿಗೆ ಯಾವುದೇ ಸಂಪರ್ಕವೂ ಕೂಡ ಇಲ್ಲ. ಇವತ್ತು ಸ್ವಾತಂತ್ರ್ಯ ಬಂದು, 25 ವರ್ಷಗಳಾದರೂ ಕೂಡ ಇನ್ನೂ ಈ ರಾಜ್ಯದ 6,245 ಹಳ್ಳಿಗಳಿಗೆ ಯಾವುದೇ ಸಂಪರ್ಕ ಇಲ್ಲ ಎಂದರೆ ಇದನ್ನು ನೋಡಿ ನಾವು ನಾಚಿಕೆ ಪಡತಕ್ಕ ಪರಿಸ್ಥಿತಿ ಇವತ್ತು ಬಂದಿದೆ. ಜೊತೆಗೆ 9 ಸಾವಿರದ 865 ಹಳ್ಳಿಗಳಿಗೆ ಕೇವಲ ಸಂಪರ್ಕವನ್ನು ಕಲ್ಪಿಸಿದ್ದೇವೆ ಎಂದು ಹೇಳಿದ್ದಾರೆ. ವ್ಯವಸ್ಥಿತವಾದ ಮತ್ತು ವರ್ಷದ 12 ತಿಂಗಳೂ ಕೂಡ ಸಂಪರ್ಕವನ್ನು ಹೊಂದಿರತಕ್ಕ ರಸ್ತೆ 9865 ಹಳ್ಳಿಗಳಲ್ಲಿ ಅವರ ಅಂಕಿಅಂಶದ ಪ್ರಕಾರವೇ ಆಗಿಲ್ಲ ಎಂದರೆ ಇದು ಯಾವ ರೀತಿಯಿಂದ ಅವರು ಈ ದೇಶವನ್ನು ಕಟ್ಟತಕ್ಕದ್ದು ಮತ್ತು ಈ ದೇಶದ ಅಭಿವೃದ್ಧಿಯನ್ನು ಸಾಧಿಸುವುದು ಅನ್ನುವುದನ್ನು ಈ ಸರ್ಕಾರಕ್ಕೆ ತಮ್ಮ ಮುಖಾಂತರ ಪ್ರಶ್ನೆ ಮಾಡಬೇಕಾದ ಸಂದರ್ಭ ಇವತ್ತು ಬಂದಿದೆ. ಈ ಮಾತನ್ನು ಹೇಳುವಾಗ ಹೆಚ್ಚು ಜವಾಬ್ದಾರಿ ಇರುವ ಈ ಸರ್ಕಾರದಿಂದ ಹಳ್ಳಿಗಳಿಗೆ ಕನಿಷ್ಟ ಪಕ್ಷ ಒಂದು ರಸ್ತೆಯನ್ನು ಮಾಡಿಕೊಟ್ಟು ಎಲ್ಲಾ ಗ್ರಾಮಗಳಿಗೂ ಕೂಡ ಒಂದು ದೊಡ್ಡ ರಸ್ತೆಯ ಸಂಪರ್ಕವನ್ನು ಕಲ್ಪಿಸಿಕೊಡತಕ್ಕ ವ್ಯವಸ್ಥೆಯನ್ನು ಈ ಸರ್ಕಾರದಿಂದ ಮಾಡಲಿಕ್ಕೆ ಆಗಲಿಲ್ಲ ಎಂದರೆ ಬಹಳ ವಿಷಾದಪಡಬೇಕಾಗಿದೆ. ಮೂಲಭೂತವಾದ ಅಭಿವೃದ್ಧಿ ಕಾರ್ಯಗಳನ್ನು ಮಾಡುತ್ತೇವೆ. ಮತ್ತು ಸಮಾಜವಾದವನ್ನು ಮತ್ತು ವಿಕೇಂದ್ರೀಕರಣವನ್ನು ಸ್ಥಾಪನೆ ಮಾಡುತ್ತೇವೆ ಎಂದು ಹೇಳತಕ್ಕ ಈ ಸರ್ಕಾರದ ದೃಷ್ಟಿಯಲ್ಲಿ ಗ್ರಾಮಾಂತರ ಪ್ರದೇಶದ ವ್ಯವಸ್ಥೆಯನ್ನು ಬದಲಿಸಬೇಕಾದರೆ ಅವುಗಳಿಗೆ ಸಂಪರ್ಕವನ್ನು ಕಲ್ಪಿಸುವ ದೃಷ್ಟಿಯಿಂದ ಹೆಚ್ಚು ಹಣವನ್ನು ರೂರಲ್ ಕಮ್ಯೂನಿಕೇಷನ್ಸ್‌ಗೆ ಇಡಬೇಕಾದ್ದು ಈ ಸರ್ಕಾರದ ಆದ್ಯ ಕರ್ತವ್ಯವಾಗಿತ್ತು. ಆ ಕರ್ತವ್ಯದಿಂದ ವಿಫಲರಾಗಿದ್ದಾರೆ ಎಂಬ ಮಾತನ್ನು ನಾನು ಅತ್ಯಂತ ವಿಷಾದದಿಂದ ಹೇಳುತ್ತಾ ಇದ್ದೇನೆ. ಕಳೆದ 25 ವರ್ಷದಿಂದ ಒಂದು ಸಾಧನೆಯನ್ನು ಸಾಧಿಸಿದ್ದಾರೆ. ಏನು ಸಾಧನೆ ಎಂದರೆ ಏನೂ ಇಲ್ಲದವರಿಗೆ ಏನಾದರೂ ಸ್ವಲ್ಪ ಸೌಕರ್ಯ ಒದಗಿಸಿ ಕೊಡುವುದಕ್ಕೆ ಬದಲಾಗಿ ಕಾನ್‌ಕ್ರೀಟ್ ರೋಡುಗಳನ್ನು ಹಾಕುವುದರಲ್ಲಿ ಬಹಳ ಯಶಸ್ಸನ್ನು ಸಾಧಿಸಿದ್ದಾರೆ. ಏನೂ ಗತಿ ಇಲ್ಲದೇ ಬಿದ್ದಿರುವವನು, ಗುಡಿಸಿಲಿನಲ್ಲಿ ತೊಳಲಾಡುತ್ತಾ ಇರುವವನು ಯಾವನು ಇದ್ದಾನೆಯೋ ಅಂಥವನ ಕಡೆಗೆ ಲಕ್ಷ್ಯ ಕೊಡದೆ ಕಾನ್‌ಕ್ರೀಟ್ ರಸ್ತೆಗಳನ್ನು ಮಾಡುವುದು, ದೊಡ್ಡ ದೊಡ್ಡ ಅಶೋಕ ಹೋಟೇಲ್‌ನಂತಹ ಸೌಧಗಳನ್ನು ಕಟ್ಟುವುದರಲ್ಲಿ ಪ್ರವೀಣರು ಆಗಿದ್ದಾರೆಯೇ ಹೊರತು ಸಮಾಜದ ತಳವಲ್ಲಿ ಯಾರು ಉಳಿದಿದ್ದಾರೆ ಅವರನ್ನು ಮೇಲಕ್ಕೆ ಎತ್ತುವ ದೃಷ್ಟಿ ಅವರ ಕಡೆಗೆ ಬಿದ್ದಿಲ್ಲ. ಈಗಲಾದರೂ ಈ ದಿಶೆಯಲ್ಲಿ ಸರ್ಕಾರದವರು ಕೇವಲ ಕಾನ್‌ಕ್ರೀಟ್ ರಸ್ತೆಗಳನ್ನು, ಟಾರ್ ರಸ್ತೆಗಳನ್ನು ಮಾಡುವುದರಲ್ಲಿ ತಮ್ಮ ಪ್ರಾವೀಣ್ಯತೆಯನ್ನು ತೋರಿಸಿಕೊಳ್ಳುವುದಕ್ಕಿಂತಲೂ 15 ಸಾವಿರ ಹಳ್ಳಿಗಳಿಗೆ ಸಂಪರ್ಕವನ್ನು ಏನು ಒದಗಿಸಿ ಕೊಡಬೇಕಾಗಿದೆ ಅದರ ಕಡೆಗೆ ಹೆಚ್ಚಿನ ಹಣ ಮತ್ತು ಹೆಚ್ಚಿನ ಆಸಕ್ತಿಯನ್ನು ವಹಿಸಬೇಕೆಂದು ಈ ಸರ್ಕಾರದವರನ್ನು ಒತ್ತಾಯ ಪೂರ್ವಕವಾಗಿ ಪ್ರಾರ್ಥಿಸುತ್ತೇನೆ.

ಶ್ರೀ ಡಿ. ದೇವರಾಜ ಅರಸ್ (ಮುಖ್ಯ ಮಂತ್ರಿಗಳು).—ವಿರೋಧ ಮಾಡುತ್ತೇನೆ ಎಂದು ಶುರು ಮಾಡಿದರು ಒಂದು ವೇಳೆ ಹೆಚ್ಚು ಹಣ ಒದಗಿಸಿದರೆ ಒಪ್ಪಿಕೊಳ್ಳುತ್ತೀರೋ?

ಶ್ರೀ ಕಾಗೋಡು ತಿಮ್ಮಪ್ಪ.—ಒಪ್ಪಿಕೊಳ್ಳುತ್ತೇವೆ. ಅಂತೂ ಇದನ್ನು ಸರ್ಕಾರದವರು ಗಮನದಲ್ಲಿಟ್ಟುಕೊಳ್ಳಬೇಕು. ಇನ್ನು ಸ್ಥಳೀಯ ಸಂಸ್ಥೆಗಳಿಂದ ಸುಮಾರು 21,820 ಕಿಲೋ ಮೈಲಿ ರಸ್ತೆಗಳನ್ನು ತಮ್ಮ ಸುಪರ್ದಿಗೆ ವಹಿಸಿಕೊಂಡಿದ್ದಾರೆ. ವಹಿಸಿಕೊಳ್ಳುವುದರಲ್ಲಿ ಆಸಕ್ತಿಯನ್ನು ತೋರಿಸಿದ್ದಾರೆಯೇ ವಿನಾ ಅವುಗಳನ್ನು ಅಭಿವೃದ್ಧಿ ಪಡಿಸುವುದರಲ್ಲಿ ಅವರ ಪ್ರಯತ್ನ ಏನೂ ಆಗಿಲ್ಲ, ವಿಫಲವಾಗಿದೆ. ನನಗೆ ಗೊತ್ತಿರುವ ಹಾಗೆ ರಸ್ತೆಗಳನ್ನು ವಹಿಸಿಕೊಂಡು 4–5 ವರ್ಷಗಳಾಗಿದ್ದರೂ ಕೂಡ ಇವತ್ತಿಗೂ ಮೂರು ಕಾಸಿನ ಖರ್ಚು ಅದರ ಮೇಲೆ ಮಾಡಿಲ್ಲ. ತಾಲ್ಲೂಕು ಬೋರ್ಡಿನವರೂ ರಿಪೇರಿ ಮಾಡುವ ಹಾಗೆ ಇಲ್ಲ, ಸರ್ಕಾರದವರೂ ಏನೂ ಮಾಡಿಲ್ಲ ಹೀಗಾಗಿ ಏನಾಗಿದೆ ಇವತ್ತು ಎಂದರೆ ಹಿಂದೆ ಏನಾದರೂ ಅಲ್ಲಿ ಗಾಡಿಗಳು ಓಡಾಡುತ್ತಾ ಇದ್ದಂಥ ಕಡೆ ಈಗ

ಗಾಡಿಯೂ ಹೋಗುವುದಿಲ್ಲ, ಮನುಷ್ಯರೂ ಕೂಡ ಓಡಾಡುವುದಕ್ಕೆ ಸಾಧ್ಯವಿಲ್ಲದ ಸ್ಥಿತಿಗೆ ಬಂದಿವೆ. 21,820 ಕಿಲೋ ಮೈಲಿ ರಸ್ತೆಗಳನ್ನು ವಹಿಸಿಕೊಂಡು ಅವುಗಳ ಮೇಲೆ ಏನು ದುಡ್ಡು ಖರ್ಚು ಮಾಡಿದ್ದಾರೆ ಎಷ್ಟು ದೊಡ್ಡ ಪ್ರಮಾದವಾಗುತ್ತದೆ ಎಂಬುದನ್ನು ತಾವು ಊಹಿಸಬಹುದು.

ತಾಲ್ಲೂಕ್ ಬೋರ್ಡ್ ವತಿಯಿಂದ ಯಾವ ರಸ್ತೆಗಳನ್ನು ವಹಿಸಿಕೊಂಡಿದ್ದೀರೋ ಅವುಗಳನ್ನು ಅಭಿವೃದ್ಧಿ ಮಾಡುವ ದೃಷ್ಟಿಯಿಂದ ಹೆಚ್ಚು ಹೆಚ್ಚು ಹಣವನ್ನು ಖರ್ಚು ಮಾಡಬೇಕು ಎಂದು ಹೇಳುತ್ತೇನೆ 25 ವರ್ಷದಿಂದಲೂ ಸರ್ವೇಸಾಧಾರಣವಾಗಿ ಮುಖ ನೋಡಿ ಮಣೆ ಹಾಕುವ ಕೆಲಸ ನಡೆದಿದೆ. ಕೆಲವು ತಾಲ್ಲೂಕು ಬೋರ್ಡುಗಳು ರೆಸಲ್ಯೂಷನ್ ಮಾಡಿ ಇಂತಹ ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಯವರು ವಹಿಸಿಕೊಳ್ಳಬೇಕು ಎಂದು ತೀರ್ಮಾನ ಮಾಡಿದ್ದರೂ ಕೂಡ ಯಾವೊಂದನ್ನು ತೆಗೆದುಕೊಂಡಿಲ್ಲ. ತಾಲ್ಲೂಕು ಬೋರ್ಡ್ ಮೆಂಬರ್ ಯಾವುದೇ ರಾಜಕೀಯ ಪಕ್ಷಕ್ಕೆ ಸೇರಿದ್ದರೂ ಕೂಡ ಅದು ಪಬ್ಲಿಕ್ ಡಿಸ್ಕಷನ್ ಆಗಿ ಪಂಚಾಯಿತಿ ಮತ್ತು ತಾಲ್ಲೂಕು ಬೋರ್ಡ್‌ನಲ್ಲಿ ಅವರು ಹೇಳಿದ ರಸ್ತೆಗಳನ್ನು ಮಾತ್ರ ತೆಗೆದುಕೊಳ್ಳಬೇಕು. ಅಂಥಾ ರಸ್ತೆಗಳನ್ನು ಅಭಿವೃದ್ಧಿ ಮಾಡಬೇಕು. ಮುಖ ನೋಡಿ ಮಣೆ ಹಾಕುವ ನೀತಿ ಇರಬಾರದು. ಮತ್ತು ತಮಗೆ ಇಂಥ ರಸ್ತೆ ಪ್ರಾಮುಖ್ಯವಾದ ರಸ್ತೆ ಎಂದು ಕಂಡು ಬಂದರೆ ಆ ರಸ್ತೆಗಳನ್ನು ತೆಗೆದುಕೊಳ್ಳಬೇಕು. ವಿಲೇಜ್‌ಗೆ ಹೋಗುವ ರಸ್ತೆಗಳು ಕೆಲವು ಅದೇ ದುಸ್ಥಿತಿಯಲ್ಲಿವೆ. ಯಾವುದಾದರೂ ಒಂದು ದೊಡ್ಡ ರಸ್ತೆ ಕೆಲಸ ತೆಗೆದುಕೊಂಡರೆ ಅದು ಪೂರ್ಣವಾಗಿ ಅದರ ಗುರಿಯನ್ನು ಮುಟ್ಟಬೇಕು. ಇಲ್ಲವೇ ಹೋದರೆ ಅದು ಸೂಕ್ತವಾದ ರಸ್ತೆ ಆಗುವುದಿಲ್ಲ. ಆದುದರಿಂದ ರಸ್ತೆಗಳನ್ನು ದುರಸ್ತಿ ಮಾಡುವ ವಿಷಯದಲ್ಲಿ ಸರ್ಕಾರದವರು ಜಾಗ್ರತಿ ವಹಿಸಿ ಕೆಲವು ಹಣವನ್ನು ಇದಕ್ಕೆ ಮೀಸಲಾಗಿಡಬೇಕೆಂದು ಹೇಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಇದಕ್ಕೆಲ್ಲಾ ರಾಜಕೀಯ ಬೆರೆಸಬೇಡಿ.

ಶ್ರೀ ಕಾಗೋಡು ತಿಮ್ಮಪ್ಪ.—ಇಲ್ಲಿಯವರೆಗೂ ಅನ್ಯಾಯವಾಗುವ ರೀತಿಯಲ್ಲಿ ಕೆಲಸ ನಡೆದಿದೆ. 25 ವರ್ಷದಿಂದಲೂ ರಾಜಕೀಯ ಇತಿಹಾಸದಲ್ಲಿ ಎಷ್ಟು ಸ್ವಾರ್ಥ ಸುಧಾರಕರು ಆಗಬೇಕಾಗಿತ್ತೋ ಅಷ್ಟು ಆಗಿಬಿಟ್ಟಿದ್ದಾರೆ. ಸಾರ್ವಜನಿಕ ಕ್ಷೇತ್ರದಲ್ಲಿರುವವರೆಲ್ಲರೂ ಮುಕ್ತರಾಗಬೇಕಾಗಿದೆ ಎಂದು ಹೇಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಸದಸ್ಯರು ಹಿಂದೆ ಅನ್ಯಾಯವಾಗಿದೆ ಎಂದು ಹೇಳಿದ್ದಾರೆ. ಅದು ಏನೇ ಆಗಿರಲಿ ಮುಂದೆ ಆಗದೇ ಇದ್ದಹಾಗೆ ನೋಡಿಕೊಳ್ಳುವುದು ನಮ್ಮದು. ಆ ಭರವಸೆ ಕೊಡುತ್ತೇನೆ. ರಸ್ತೆಗಳು ಮಾಡುವುದೇ ಆಗಲಿ, ಬಾವಿ ತೋಡುವುದೇ ಆಗಲಿ, ಸ್ಕೂಲ್ ಕಟ್ಟಡ ಕಟ್ಟುವುದೇ ಆಗಲಿ ಇದರಲ್ಲಿ ರಾಜಕೀಯ ಮಾಡುವುದಾದರೆ ಯಾರಿಗೂ ಒಳ್ಳೆಯದಲ್ಲ. ನೀವು ಹೇಳಿದ ಹಾಗೆ ತಾಲ್ಲೂಕು ಬೋರ್ಡ್ ಸಂಸ್ಥೆಗಳು, ಪಂಚಾಯಿತಿಗಳು, ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕೌನ್ಸಿಲ್ ಇವು ಯಾವ ರಸ್ತೆಗಳನ್ನು ತೆಗೆದುಕೊಳ್ಳಬೇಕು ಎಂದು ತೀರ್ಮಾನ ಮಾಡುತ್ತವೆಯೋ ಅದರಂತೆ ಮಾಡೋಣ.

ಶ್ರೀ ಕಾಗೋಡು ತಿಮ್ಮಪ್ಪ.—ಇದರ ಜೊತೆಗೆ ಆಡಳಿತದ ಜವಾಬ್ದಾರಿಯನ್ನು ಹೊಂದಿರತಕ್ಕಂಥ ತಾಲ್ಲೂಕು ಬೋರ್ಡುಗಳು ಏನು ಇವೆ ಅವು ಇಂತಿಂಥ ರಸ್ತೆಗಳನ್ನು ತೆಗೆದುಕೊಳ್ಳಬೇಕೆಂದು ಅಸಿಸ್ಟೆಂಟ್ ಇಂಜನೀಯರ್‌ರನ್ನು ಕರೆಸಿ ತೀರ್ಮಾನ ಮಾಡಿದ್ದರೂ ಕೂಡ ಅವರು ಮಾಡಿದ ಶಿಫಾರಸುಗಳನ್ನು ಬಿಟ್ಟು ಲೋಕೋಪಯೋಗಿ ಇಲಾಖೆಯವರು ತಮ್ಮ ಮನಸ್ಸಿಗೆ ಬಂದಂಥ ರಸ್ತೆಗಳನ್ನು ತೆಗೆದುಕೊಂಡಿದ್ದಾರೆ. ಇಂಥಾ ನಿದರ್ಶನಗಳು ಅನೇಕ ಇವೆ. ಆದುದರಿಂದ ತಾಲ್ಲೂಕು ಬೋರ್ಡ್‌ನವರು ಮಾಡಿದ ಶಿಫಾರಸುಗಳಿಗೆ ಗಮನಕೊಟ್ಟು ಸರ್ಕಾರದವರು ಅದರ ಬಗ್ಗೆ ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತಾರೆಂದು ವಿಶ್ವಾಸದಿಂದ ಹೇಳುತ್ತೇನೆ.

ಇನ್ನು ನಮ್ಮ ಮಲೆನಾಡಿನ ಬಗ್ಗೆ ಸ್ವಲ್ಪ ವಿವರಿಸಬೇಕಾಗಿದೆ. ನಮ್ಮ ಮಲೆನಾಡಿನಲ್ಲಿ ಲಕ್ಷಾಂತರ ರೂಪಾಯಿಗಳನ್ನು ಹಾಕಿ ದೊಡ್ಡ ದೊಡ್ಡ ಅಣೆಕಟ್ಟುಗಳನ್ನು ಕಟ್ಟುವ ಪರಿಸ್ಥಿತಿಯಲ್ಲಿಲ್ಲ. ನಮ್ಮ ಕಡೆ ಖರ್ಚು ಮಾಡಬೇಕಾದರೆ 10 ಸಾವಿರ, 20 ಸಾವಿರ, 30 ಸಾವಿರ ಅತಿ ಹೆಚ್ಚು ಎಂದರೆ 50 ಸಾವಿರ ರೂಪಾಯಿಯವರೆಗೆ ಖರ್ಚು ಮಾಡಿ ಒಂದೊಂದು ಪಿಕಅಪ್ ಮಾಡಬಹುದು. ಈರೀತಿ ಖರ್ಚು ಮಾಡಿ ಒಂದು ಸಣ್ಣ ಕೆರೆಯೋ, ಒಂದು ಸಣ್ಣ ನೀರಾವರಿಯೋ ಮಾಡಿಕೊಟ್ಟರೆ ವ್ಯವಸಾಯಕ್ಕೆ ಅನುಕೂಲವಾಗುತ್ತದೆ. ಅಲ್ಲದೆ ಲಕ್ಷಾಂತರ ರೂಪಾಯಿ ಖರ್ಚು ಮಾಡಿ ದೊಡ್ಡ ದೊಡ್ಡ ನೀರಾವರಿ ಯೋಜನೆ ಮಾಡುವುದಕ್ಕೆ ಬರುವುದೂ ಇಲ್ಲ. ನಮ್ಮಲ್ಲಿ 30—40 ಸಾವಿರ ರೂಪಾಯಿ ಖರ್ಚು ಮಾಡಿ ಸಣ್ಣಪುಟ್ಟ ಅಣೆಕಟ್ಟೆಗಳನ್ನು ಕಟ್ಟಿಸಿದರೆ ಅದರಿಂದ ಅವಶ್ಯಕತೆ ಜಾಸ್ತಿ ಇರುತ್ತದೆ. ಆದುದರಿಂದ ಈ ಸಾಲಿನ ಆಯವ್ಯಯದಲ್ಲಿ ಈ ಸಣ್ಣ ಅಣೆಕಟ್ಟೆಗಳನ್ನು ಕಟ್ಟುವುದಕ್ಕೆ ಕಡಿಮೆ ಪ್ರಮಾಣದಲ್ಲಿ ಹಣವನ್ನು ಒದಗಿಸಿದ್ದೀರಿ. ಅದಕ್ಕೆ ಹೆಚ್ಚಿಗೆ ದುಡ್ಡನ್ನು ಒದಗಿಸಿಕೊಡಬೇಕೆಂದು

(ಶ್ರೀ ಕಾಗೋಡು ತಿಮ್ಮಪ್ಪ)

ಹೇಳುತ್ತೇನೆ. ನಮ್ಮ ಕಡೆಯ ಶಿವಮೊಗ್ಗ ಸರ್ಕಲ್ ಸೂಪರಿಂಟೆಂಡೆಂಟ್ ಇಂಜನೀಯರ್ ಏನು ಇದ್ದಾರೋ ಅವರು ಸಾಗರ ಡಿವಿಷನ್‌ಗೆ ದ್ರೋಹ ಮಾಡಿದ್ದಾರೆ. ನಮ್ಮಲ್ಲಿ ಶರಾವತಿ ಪ್ರಾಜೆಕ್ಟ್ ಕಟ್ಟಿದ ಮೇಲೆ ಸಾವಿರಾರು ಎಕರೆ ಮುಳುಗಡೆ ಆಯಿತು. ಲಕ್ಷಾಂತರ ಎಕರೆಗಳನ್ನು ಸಾಗುವಳಿ ಮಾಡುವುದಕ್ಕೆ ಮಲೆನಾಡಿನಲ್ಲಿ ಯಾವ ದೊಡ್ಡ ಇರ್ರಿಗೇಷನ್ ಪ್ರಾಜೆಕ್ಟ್ ಇಲ್ಲ, ಆದುದರಿಂದ ಅಲ್ಲಿ ಸಣ್ಣ ನೀರಾವರಿ ಪ್ರಾಜೆಕ್ಟನ್ನು ಮಾಡಬೇಕಾಗಿದೆ. ಯಾವ ಒಂದು ಹೊಸ ಕೆರೆ ಮಾಡಿಸುವುದಾಗಲಿ, ಒಂದು ಹೊಸ ಪಿಕ ಅಪ್ ಮಾಡಿಸುವುದಾಗಲಿ, ಒಂದು ರಸ್ತೆ ಮಾಡಿಸುವುದಾಗಲಿ, ರಸ್ತೆಗೆ ಟಾರ್ ಹಾಕಿಸುವುದಾಗಲಿ ಯಾವ ಒಂದು ಕೆಲಸವನ್ನೂ ಈ ಆಯವ್ಯಯದ ಪಟ್ಟಿಯಲ್ಲಿ ಸೇರಿಸಿಲ್ಲ. ಸಂಪೂರ್ಣವಾಗಿ ಕೈಬಿಟ್ಟು ಇಡೀ ಸಾಗರ ಡಿವಿಷನ್‌ನ್ನು ನಿರ್ಲಕ್ಷ್ಯ ಮಾಡಿದ್ದಾರೆ. ಅದುದರಿಂದ ಮಾನ್ಯ ಮಂತ್ರಿಗಳನ್ನು ಪ್ರಾರ್ಥಿಸಿಕೊಳ್ಳುತ್ತೇನೆ, ಈಗಲಾದರೂ ಇದನ್ನು ಪರಿಶೀಲನೆ ಮಾಡಬೇಕು ಇಲ್ಲದೇ ಹೋದರೆ ಬಹಳ ಕಳವಳಪಾಗುತ್ತದೆ. ನಮ್ಮಲ್ಲಿ ಕರೂರು ಹೋಬಳಿ ಎಂಬ ಒಂದು ಪ್ರದೇಶವೇ ಸಂಪೂರ್ಣ ದ್ವೀಪವಾಗಿ ಪರಿಣಮಿಸಿದೆ. ಅಲ್ಲಿ 11 ಮೈಲಿಗೆ ಟಾರ್ ಹಾಕಿಸಿದ್ದಾರೆ. ಇನ್ನೂ ಟಾರ್ ಹಾಕಿಸುವುದು 11 ಮೈಲಿ ಹಾಗೆಯೇ ಉಳಿದಿದೆ. ಈವರೆಗೂ ಹಾಕಿಸಿಲ್ಲ. ಶರಾವತಿ ಯೋಜನೆ ಕೆಲಸ ಮಾಡುವ ಗಮನದಲ್ಲಿ ಒಂದೊಂದಾಗಿ ಮರೆತುಬಿಟ್ಟರು. ಇದಲ್ಲದೆ 10—12 ಬ್ರಿಡ್ಜಸ್ ಅಪಾಯ ಸ್ಥಿತಿಯಲ್ಲಿವೆ. ಅಲ್ಲಿ 'ಹುಷಾರು' ಅನ್ನುವ ಸೂಚನೆ ಬೋರ್ಡುಗಳನ್ನು ಹಾಕಿದ್ದಾರೆ. ಈ ರೀತಿ ಇದ್ದ ಮೇಲೆ ಶರಾವತಿ ಕರ್ಮಕಾಂಡದಲ್ಲಿ ಇದೂ ಒಂದು ಭಾಗ ಎಂದು ಹೇಳಬಹುದು. ಶರಾವತಿ ಕರ್ಮಕಾಂಡದ ಇತಿಹಾಸವನ್ನು ಎಲ್ಲರೂ ಹೇಳಿದ್ದಾರೆ. ಇದರಲ್ಲಿ ಮುಖ್ಯಮಂತ್ರಿಗಳು ಶ್ರೀರಾಮನ ಪಾತ್ರವನ್ನು ವಹಿಸಿ ಅದರಲ್ಲಿ ಶ್ರೀಮಾನ್ ಚನ್ನಬಸಪ್ಪನವರನ್ನು ಅಗ್ನಿ ಪರೀಕ್ಷೆಗೆ ಒಳಪಡಿಸಿ. ಅದರಲ್ಲಿ ಅವರು ಯಶಸ್ವಿಯಾಗಿ ಬರುವುದಕ್ಕೆ ಅವಕಾಶ ಮಾಡಿಕೊಡಿ.

ಇನ್ನು ಶ್ರೀಮಾನ್ ಚೆನ್ನಬಸಪ್ಪನವರ ಕಾಲದಲ್ಲಿ ರಾಕ್‌ಫಿಲ್ ವಿಚಾರದಲ್ಲಿ $1\frac{1}{2}$ ಕೋಟಿ ರೂಪಾಯಿ ಪೋಲು ಆದಹಾಗೆ ಕಾಣುತ್ತೆ. ಒಬ್ಬ ಕಂಟ್ರಾಕ್ಟರ್ 40 ರೂಪಾಯಿ ಟೆಂಡರ್ ಹಾಕಿದರೆ ಅವನಿಗೆ ಕೊಡಲಿಲ್ಲ. ಅನಂತರ ಟೆಲಿಗ್ರಾಂ ಮಾಡಿ ಅವನನ್ನು ಕರೆಸಿ 110 ರೂಪಾಯಿ ಅಂತ ಮಾಡಿ, ಕೊನೆಗೆ ಇದು ಪಂಚಾಯಿತಿ ಆಗಿ 104 ರೂಪಾಯಿಗೆ ಕಾಂಟ್ರಾಕ್ಟ್ ನಿಗದಿ ಮಾಡಿದರು. ಅದೇ ಮಾರನೇ ವರ್ಷವೇ ಇದೇ ಕೆಲಸವನ್ನು 50 ರೂಪಾಯಿಗೆ ಕೊಟ್ಟಿರುವ ನಿದರ್ಶನಗಳು ಇವೆ. ಈ ಒಂದು ಐಟಂನಲ್ಲೇ $1\frac{1}{2}$ ಕೋಟಿ ರೂಪಾಯಿ ಪೋಲಾಗಿದೆ ಎಂದು ನನ್ನ ಭಾವನೆ. ಇಂತಹ ಒಂದೊಂದು ಟೆಂಡರ್‌ನಲ್ಲಿ ಕೋಟಿ ಕೋಟಿಗಟ್ಟಲೆ ಹಣವನ್ನು ದುರ್ವಿನಿಯೋಗ ಮಾಡಿರುವ ನಿದರ್ಶನಗಳು ಇವೆ. ಈ ಸದನದಲ್ಲಿ ಇನ್ನೂ ಒಂದು ನಿದರ್ಶನ ಕೊಡುತ್ತೇನೆ. ಇದರಲ್ಲಿ ಯಾವ ಭಾಗಕ್ಕೆ ಜಖಂ ಆಗಿದೆ ಆ ಭಾಗಕ್ಕೆ ಕೊಟ್ಟಿದ್ದಾರೆಯೇ ವಿನಃ ಉಳಿದ ಭಾಗಕ್ಕೆ ವಿವರಣೆ ಕೊಟ್ಟಿಲ್ಲ. ಈವೊತ್ತು ಡ್ಯಾಮ್‌ನ್ನು ಹೋಗಿ ನೋಡಿಲ್ಲ. ತಲಕಳಲೆ ಡ್ಯಾಮ್ ಬೇಕಾದರೆ ಹೋಗಿ ನೋಡಬಹುದು. ಅಲ್ಲಿ ಏನೇನು ನಡೆದಿದೆ ಎನ್ನುವುದನ್ನೆಲ್ಲ ನೋಡಿದ್ದೇವೆ, ಆಗಿರತಕ್ಕ ಕೆಲಸ ಸಮರ್ಪಕವಾಗಿಲ್ಲ. ಎಲ್ಲ ವಿಧದಲ್ಲಿಯೂ ಹಣದ ದುರ್ವ್ಯಯವಾಗಿದೆ. ಹಾದಿ ಬೀದಿಯಲ್ಲಿ ಹೋಗುವವರು ಲಕ್ಷಾಂತರ ರೂಪಾಯಿ ಸಂಪಾದನೆ ಮಾಡಿಕೊಂಡು ಲಕ್ಷಾಧಿಪತಿಗಳಾಗಿದ್ದಾರೆ. ನಿಮ್ಮನ್ನು ಕೂಡ ಅಲುಗಾಡಿಸುವ ಪರಿಸ್ಥಿತಿ ಇದೆ. ಅಂಥ ಪರಿಸ್ಥಿತಿ ಶರಾವತಿ ಕರ್ಮಕಾಂಡದಲ್ಲಾಗಿದೆ. ರಾಜಕಾರಣದಲ್ಲಿ, ನಾನು ಮೊದಲೇ ಹೇಳಿದ ಹಾಗೆ ಅಪಾದನೆಯಿಂದ ವಿಮುಕ್ತರಾಗಲೇ ಬೇಕು. ವೀರೇಂದ್ರ ಪಾಟೀಲರ ಹೇಳಿಕೆಯ ಆಧಾರದ ಮೇಲೆ ಅವರು ಸಂಪೂರ್ಣ ಜವಾಬ್ದಾರಿಯನ್ನು ಚನ್ನಬಸಪ್ಪನವರ ಮೇಲೆ ಹೊರಿಸುತ್ತಿದ್ದಾರೆ; ಅವರೇ ಮುಖ್ಯ ಕಾರಣರು ಎಂದು ಹೇಳುತ್ತಿದ್ದಾರೆ. ನೀವು ಅವರ ಮೇಲೆ ಹೇಳಿ, ಅವರು ನಿಮ್ಮ ಮೇಲೆ ಹೇಳಿ ಇಬ್ಬರೂ ಸೇರಿ ರಾಜ್ಯದ ಜನತೆಯನ್ನು ಗೊಂದಲದಲ್ಲಿ ಇಡುವುದಕ್ಕೆ ಹೋಗಬೇಡಿ. ಅದಕ್ಕೆ ಒಂದು ಪರಿಹಾರವನ್ನು ಸೂಚಿಸಲೇ ಬೇಕು. ಯಾರು ಅಪರಾಧಿ, ಯಾರು ನಿರಪರಾಧಿ, ಯಾರು ತಪ್ಪು ಮಾಡಿದ್ದಾರೆ, ಯಾರು ತಪ್ಪು ಮಾಡಿಲ್ಲ ಎನ್ನುವುದನ್ನು ನಿರ್ಧರಿಸುವುದಕ್ಕೆ ಅಗ್ನಿ ಪರೀಕ್ಷೆಗೆ ಒಳಗಾಗಲೇ ಬೇಕು. ಆದ್ದರಿಂದ ಒಂದು ನ್ಯಾಯಾಂಗ ವಿಚಾರಣೆಯನ್ನು ಏರ್ಪಡಿಸಿ. ಅದರಿಂದ ಪತಿವ್ರತೆಯಾಗಿ ಹೊರಗೆ ಬರಲಿ. ಚನ್ನಬಸಪ್ಪನವರದು ಏನೂ ತಪ್ಪಿಲ್ಲವೆಂದರೆ ಈ ಸಭೆಯಲ್ಲಿ ಅದನ್ನು ನಾವೆಲ್ಲ ಒಪ್ಪಿಕೊಳ್ಳುತ್ತೇವೆ. ನೀವು ಹೇಳುವ ಹಾಗೆ ಶ್ರೀ ವೀರೇಂದ್ರ ಪಾಟೀಲರು ಮತ್ತು ಶ್ರೀ ನಿಜಲಿಂಗಪ್ಪನವರು ತಪ್ಪಿತಸ್ಥರು ಎಂದಾದರೆ ಅವರನ್ನು ಗಲ್ಲಿಗೆ ಹಾಕೋಣ. ಅಲ್ಲಿ ಆಗಿರುವ ಹಣದ ದುರ್ವ್ಯಯದ ವಿಷಯದಲ್ಲಿ ಸಾಮಾನ್ಯ ಪ್ರಜ್ಞೆ ಇರುವವರು ಯಾರೂ ಸುಮ್ಮನೆ ಇರುವುದಕ್ಕಾಗುವುದಿಲ್ಲ. ಒಂದು ಬಹಿರಂಗವಾದ ವಿಚಾರಣೆಗೆ ಒಳಪಡಿಸಲೇ ಬೇಕು. ನ್ಯಾಯಾಂಗ ವಿಚಾರಣೆಗೆ ಒಳಪಡಿಸಲೇ ಬೇಕು, ತಪ್ಪಿತಸ್ಥರನ್ನು

ಮುಟ್ಟ ಹಾಕಲೇ ಬೇಕು. ಇಲ್ಲದೆ ಹೋದರೆ ಸಾರ್ವಜನಿಕವಾಗಿ ರಾಜಕಾರಣದಲ್ಲಿ ಜನರು ವಿಶ್ವಾಸ ವಿಡುವುದಕ್ಕೆ ಸಾಧ್ಯವಿಲ್ಲ. ನೀವು ಚುನಾಯಿತರಾಗಿ ಹೋದ ಮೇಲೆ ಮಂತ್ರಿಗಳಾಗುತ್ತೀರಿ, ನಿಮ್ಮ ಸ್ವಾರ್ಥ ಸಾಧನೆ ಮಾಡುತ್ತೀರಿ, ದೇಶದ ಹಣವನ್ನು ಲೂಟಿ ಹೊಡೆಯುತ್ತೀರಿ ಎಂದು ಹೇಳುತ್ತಾರೆ. ಪ್ರಾಮಾಣಿಕವಾಗಿ ರಾಜಕಾರಣ ಮಾಡಿದ್ದೇವೆ, ಪ್ರಾಮಾಣಿಕವಾಗಿ ಆಡಳಿತ ನಡೆಸಿದ್ದೇವೆ ಎಂದು ತಿಳಿಸಿದ ಮಾತ್ರಕ್ಕೆ ಜನ ಮೆಚ್ಚುವುದಿಲ್ಲ. ಆದುದರಿಂದ ಸಾರ್ವಜನಿಕವಾಗಿ, ಸಾರ್ವತ್ರಿಕವಾಗಿ, ಬಂದಿರತಕ್ಕ ಆಪಾದನೆಯಿಂದ ನಾವು ವಿಮುಕ್ತರಾಗಲೇ ಬೇಕು. ನಾವು ನೀವು ಎಲ್ಲರೂ ವಿಮುಕ್ತರಾಗಲೇ ಬೇಕು. ನಮ್ಮ ಮೇಲೆ ಏನೂ ಆಪಾದನೆ ಇಲ್ಲ, ನಾವು ಸತ್ಯವಾಗಿ, ನ್ಯಾಯವಾಗಿ ನಡೆದು ಕೊಂಡಿದ್ದೇವೆನ್ನುವುದನ್ನು ತೋರಿಸಿಕೊಡದೆ ಹೋದರೆ ಜನರು ನಿಮ್ಮ ಮೇಲೂ ಶಂಕೆ ಮಾಡುತ್ತಾರೆ. ಚನ್ನಬಸಪ್ಪನವರು ನಿಮಗೆ ಸ್ನೇಹಿತರಾಗಿರುವುದರಿಂದ ಅವರನ್ನು ರಕ್ಷಣೆ ಮಾಡುವ ದೃಷ್ಟಿಯಿಂದ ನ್ಯಾಯಾಂಗ ತನಿಖೆಗೆ ಒಪ್ಪಿಲ್ಲ ಎಂದು ಹೇಳುತ್ತಾರೆ. ನಿಮ್ಮ ತಲೆ ಮೇಲೆ ಗೂಬೆ ಕೂಡಿಸುತ್ತಾರೆ. ಆದ್ದರಿಂದ ನ್ಯಾಯಾಂಗ ವಿಚಾರಣೆಗೆ ಒಳಪಡಿಸಿದರೆ ನೀವು ಆಪಾದನೆಯಿಂದ ವಿಮುಕ್ತರಾಗುವುದಕ್ಕೆ ಸಾಧ್ಯ. ದಯವಿಟ್ಟು ಶರಾವತಿ ಕರ್ಮ ಕಾಂಡವನ್ನು ನ್ಯಾಯಾಂಗ ವಿಚಾರಣೆಗೆ ಒಪ್ಪಿಸಿ ನೀವು ಆಪಾದನೆಯಿಂದ ವಿಮುಕ್ತರಾಗಬೇಕೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಸದಸ್ಯರಾದ ತಿಮ್ಮಪ್ಪನವರು ಹೇಳಿದ್ದರಲ್ಲಿ ನಾನು ಸಭೆಗೆ ಒಂದುಮಾತು ತಿಳಿಸುವುದೇನೆಂದರೆ, ಶರಾವತಿ ಯೋಜನೆ ಬಗ್ಗೆ, ಹೊರಬಿದ್ದಿರತಕ್ಕ ಕೆಲವು ಪ್ರಕರಣಗಳು, ಅದರಿಂದ ಏನು ತೊಂದರೆಯಾಗುತ್ತದೆ ಎನ್ನುವ ವಿಚಾರವನ್ನು ತಮ್ಮ ಮುಂದೆ ಇಟ್ಟಿದ್ದಾರೆ. ಅದರ ಬಗ್ಗೆ ನಾನು ಹೋಗಿ ನೋಡಬೇಕೆಂದು ನನ್ನ ಅಭಿಪ್ರಾಯವಿದೆ. ಶ್ರೀಮಾನ್ ವೀರೇಂದ್ರ, ಪಾಟೀಲರ ಹೇಳಿಕೆಯನ್ನು ನಾನು ಓದಿದ್ದೇನೆ. ತಜ್ಞ ಇಂಜನಿಯರುಗಳು ಹೋಗಿ ನೋಡಿದ್ದಾರೆ, ಅವರ ಅಭಿಪ್ರಾಯದಂತೆ ಅಲ್ಲಿ ಹೆಚ್ಚಿಗೆ ಏನೂ ಡ್ಯಾಮೇಜಸ್ ಆದ ಹಾಗೆ ಇಲ್ಲ, 50 ಸಾವಿರ ರೂಪಾಯಿ ಖರ್ಚಿನಲ್ಲಿ ಎಲ್ಲ ರಿಪೇರಿ ಆಗುವುದಕ್ಕೆ ಸಾಧ್ಯವಿದೆ ಎನ್ನುವ ಮಾತನ್ನು ಅವರು ಹೇಳಿದ್ದಾರೆ. ಆ ರೀತಿಯಾಗಿ ಒಂದು ಕಡೆ ಜುಡಿಷಿಯಲ್ ಎನ್‌ಕ್ವೈರಿ ನಡೆಸಲೇಬೇಕು ಎಂದು ತಾವು ಹೇಳುತ್ತೀರಿ. ಇನ್ನೊಂದು ಕಡೆ ಸಣ್ಣಪುಟ್ಟ ಡ್ಯಾಮೇಜಸ್ ಆಗಿವೆ, ರಿಪೇರಿ ಮಾಡಲು ಕೇವಲ 50 ಸಾವಿರ ರೂಪಾಯಿ ಸಾಕು ಎಂದು ಅವರು ಹೇಳುತ್ತಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).—ಜುಡಿಷಿಯಲ್ ಪ್ರೋಬ್ ಮಾಡಿ ಎಂದು ಹೇಳಿದ್ದಾರೆ.

ಶ್ರೀ ಡಿ. ದೇವರಾಜ ಅರಸ್.—ಇರಬಹುದು.

Sri C. M. ARUMUGAM (K. G. F.).—In the Sharavathi affairs, Sri H. M. Channabasappa will be accuse1 No. 1 because in his time the coustruction work started ; Sri Veerendra Patil will be accused No. 2, and Sri S. Nijalingappa will be accused No. 3.

Sri D. DEVARAJ URS.—The point is this ; I remember to have read Sri Veerendra Patil's statement in the Press. What he has stated therein is that after all being a Minister sitting in the Vidhana Soudha, no Minister could know what might have happened there and so Engineers were responsible for the construction and as such Engineers' opinion has been taken into account ; that is what he says. How can the members expect me to straightaway decide whether this man is accused No. 1, that man is accused No. 2 and another person is accused No. 3 ? That apart, I am not prepared to think even that way and charge anybody because till anything is proved against a person it is presumed that he is innocent.

Sri H. D. DEVE GOWDA.—The Chief Minister has got an open mind. But the Deputy Leader of his Party wants to throw mud against somebody. He wants to become a big hero. That is the whole trouble.

Sri D. DEVARAJ URS.—Now I find Sri Kagodu Thimmappa making some statement with regard to Linganmakki dam and rock-filling in other projects. These matters have cropped up more than once on the floor of this House, and I cannot say how many times these questions were raised; but they have been discussed and the then Government had given replies to them. Let me not be accused of having gone beyond a certain limit and thereby throw dust against anybody or malign somebody. I feel this question had been given a quietus. Again you people raised the same thing. Only when we are satisfied that something has gone wrong as a result of defective work, we can take up the question. Otherwise I am afraid these things can be snowballed from time to time. Unless there is sufficient cause for us to raise this question once again it may not be proper on anybody's part to say that Linganmakki dam has gone wrong or rockfilling work has been done in such a manner as to make somebody responsible for its execution. If all of you think, I must also be included, I want to make one thing clear, particularly to my friend, the Leader of the Opposition that we are not trying to bring these skeletons from the cupboard. That is not my intention. I want to make it very clear that if people want an enquiry, even then let me satisfy myself whether there is any need. Thereafter I will tell the House why I don't want this. If it becomes necessary I will also tell the people why it is not necessary.

† ಶ್ರೀ ಎಸ್. ಎಂ. ಶಿರನಾಳಿ ಚಂದ್ರಶೇಖರ್ (ಹೊಸನಗರ).—ಮಾನ್ಯ ಸಭಾಧ್ಯಕ್ಷಿಣಿಯವರೇ, ಲೋಕೋಪಯೋಗಿ ಇಲಾಖೆಯ ಮಂತ್ರಿವರ್ಯರು ತಂದಿರತಕ್ಕ ಬೇಡಿಕೆಗಳಿಗೆ ನನ್ನ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿ ಮಾನ್ಯ ಚನ್ನಬಸಪ್ಪನವರು ಅಧಿಕಾರ ವಹಿಸಿಕೊಂಡಲಾಗಾಯ್ತು ಈ ಸಂಸ್ಥಾನದಲ್ಲಿ ಅನೇಕ ದುರಾಡಳಿತ ಅಧಿಕಾರಿಗಳಿಗೆ 'ಷಿವರಿಂಗ್ ಇನ್ ದೇರ್ ಷೂಸ್' ಎನ್ನುವಂತೆ ಆ ತರಹ ನಡುಕ ಉಂಟಾಗಿರುವುದು ಸತ್ಯ. ದಕ್ಷ ಆಡಳಿತಕ್ಕೆ ಚನ್ನಬಸಪ್ಪನವರು ಮೊದಲಿಂದಲೂ ಹೆಸರಾಗಿದ್ದಾರೆ. ವಿರೋಧ ಪಕ್ಷದ ನಾಯಕರು ಏನು ಅಪಾದನೆಯನ್ನು ಈ ಹೊತ್ತು ಮಾಡುತ್ತಿದ್ದಾರೆ ಅದು 'ಕೋತಿ ಮೊಸರನ್ನ ತಿಂದು ಮೇಕೆ ಬಾಯಿಗೆ ಒರೆಸಿತು' ಎನ್ನುವ ಹಾಗೆ ಆಗಿದೆ. 25 ವರ್ಷ ಕಾಲ ಆಡಳಿತ ನಡೆಸಿದ ಜನ ಈ ಹೊತ್ತು ಇಲ್ಲದ ಸಲ್ಲದ ಅಪಾದನೆಗಳನ್ನು ಮೂರು ತಿಂಗಳ ಶಿಶುವಿನ ಮೇಲೆ ಹೊರಿಸತಕ್ಕದ್ದು ನಾಚಿಕೆಗೇಡಿನ ವಿಚಾರ. ಇದು ಜನತೆಗೆ ಗೊತ್ತಿದೆ, ಜನ ಕಣ್ಣು ಮುಚ್ಚಿಕೊಂಡಿಲ್ಲ. ಪ್ರತಿಯೊಂದು ಹಳ್ಳಿಯಲ್ಲಿಯೂ ಪತ್ರಿಕೆಗಳನ್ನು ಓದುವವರಿದ್ದಾರೆ. ಕಲಿತವರಿದ್ದಾರೆ, ರೇಡಿಯೋ ಕೇಳತಕ್ಕ ಜನರಿದ್ದಾರೆ.

12-30 P.M.

ಇಪ್ಪತ್ತೈದು ವರ್ಷಗಳ ಕಾಲ ಅಧಿಕಾರ ಗುದ್ದುಗೆಯಲ್ಲಿ ನಿಂತು ಬಡ ಬೋರೇಗೌಡನ ಹಣವನ್ನು ಬರಿದು ಮಾಡಿದ ಜನ, ದೊಡ್ಡ ದೊಡ್ಡ ತತ್ವಗಳನ್ನು ಮಾತನಾಡಿ ಜನರನ್ನು ಮೋಸ ಮಾಡುವುದು ಅಷ್ಟು ಸುಲಭವಲ್ಲ. 25 ವರ್ಷಗಳಿಂದ ನಮ್ಮ ಜನ ಶೋಷಣೆಗೆ ಒಳಪಟ್ಟಿದ್ದರು ಎನ್ನುವ ಮಾತನ್ನು ಸಂಸ್ಥಾ ಕಾಂಗ್ರೆಸ್ಸಿನವರು ನೆನಪಿನಲ್ಲಿಟ್ಟುಕೊಳ್ಳಬೇಕು. ಶ್ರೀಮಾನ್ ಚನ್ನಬಸಪ್ಪನವರು ಅಧಿಕಾರ ವಹಿಸಿಕೊಂಡಲಾಗಾಯಿತು ಜನ ಹೆಚ್ಚಿನ ನಿರೀಕ್ಷಣೆಯನ್ನು ಮಾಡುತ್ತಿದ್ದಾರೆ. ಹಿಂದೆ ನಾವು ಹೈಸ್ಕೂಲುಗಳಲ್ಲಿ ಓದುತ್ತಿದ್ದಾಗ ಈ ಪಿ. ಡಬ್ಲ್ಯು. ಡಿ. ಇಲಾಖೆಗೆ ಪಕೋಡ, ವಡೆ, ಮತ್ತು ದೋಸೆ ಎಂಬ ಅನ್ವರ್ಥನಾಮವನ್ನು ಇಟ್ಟಿದ್ದೆವು. ಏಕೆಂದರೆ ಈ ಪಕೋಡ ದೋಸೆ ಹೇಗೆ ನುಂಗುವುದಕ್ಕೆ ಸಾಧ್ಯವೋ ಹಾಗೆ ಹಣಕಾಸನ್ನು ನುಂಗುವುದಕ್ಕೆ ಈ ಇಲಾಖೆಯಲ್ಲಿ ಮೊದಲಿನಿಂದಲೂ ಸಾಧ್ಯವಿತ್ತು. ಶ್ರೀಮಾನ್ ಚೆನ್ನಬಸಪ್ಪನವರ ದಕ್ಷ ಆಡಳಿತದಲ್ಲಿ ಇಂಜನಿಯರುಗಳು ಮೋಸ ಮಾಡಿ ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಅವರ ತಪ್ಪಿಗೆ ಶಿಕ್ಷೆಯನ್ನು ಅನುಭವಿಸಲೇಬೇಕಾಗುತ್ತದೆ. ಇದು ಸತ್ಯವಾದ ಮಾತು. ಇನ್ನು ಒಂದು ಅಂಶವನ್ನು ಮಾನ್ಯ ಮಂತ್ರಿಗಳಿಂದ

ನಿರೀಕ್ಷಿಸುತ್ತೇನೆ. ಏನಂದರೆ, ಯಾರನ್ನಾದರೂ ತಪ್ಪು ಮಾಡಿದವರನ್ನು ಹೇಗೆ ಶಿಕ್ಷೆಗೆ ಒಳಪಡಿಸುತ್ತೀರೋ ಹಾಗೆ ಸರಿಯಾದ ರೀತಿಯಲ್ಲಿ ದಕ್ಷತೆಯಿಂದ ಕೆಲಸ ಮಾಡಿದವರಿಗೆ ಶಿಫಾರಸ್ ಕೊಡುವುದು, ಬೆನ್ನು ತಟ್ಟುವುದು ಈ ಅಭ್ಯಾಸವನ್ನು ಮಾನ್ಯ ಮಂತ್ರಿಗಳು ಇಟ್ಟುಕೊಳ್ಳಬೇಕು ಎಂದು ಈ ಸಭೆಯಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಹಿಂದಿನ 25 ವರ್ಷಗಳಲ್ಲಿ ಜನತೆಯಲ್ಲಿ ಅನ್ವರ್ಥ ನಾಮ ಸರ್ಕಾರದ ಬಗ್ಗೆ ಏನು ಇತ್ತೋ ಅದನ್ನು ಕೊನೆಗಾಣಿಸಬೇಕು; ಒಬ್ಬ ಒಳ್ಳೆಯ ಇಂಜಿನಿಯರನ್ನು ಸರಿಯಾದ ರೀತಿಯಲ್ಲಿ ಪ್ರೋತ್ಸಾಹ ಮಾಡದೆಹೋದರೆ ಯಾವ ಆಡಳಿತವು ಸುಧಾರಿತ ರೀತಿಯಲ್ಲಿ ಆಗುವುದಿಲ್ಲ. ಜನತೆಗೆ ಕಲ್ಯಾಣವಾಗುವುದಿಲ್ಲ.

ಅಧ್ಯಕ್ಷರು.—ಮಾನ್ಯ ಸದಸ್ಯರು ಸಮಯವನ್ನು ಗಮನಿಸಬೇಕು.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಇನ್ನು ಒಂದೆರಡು ನಿಮಿಷಗಳಲ್ಲಿ ಮುಗಿಸುತ್ತೇನೆ. ಪಿ.ಡಬ್ಲ್ಯೂ.ಡಿ. ಇಲಾಖೆಯ ಕೆಲಸ ಜನತೆಗೆ ಗೋಚರವಾಗುವ ಕೆಲಸ. ಸರ್ಕಾರ ಏನಾದರೂ ಕೆಲಸ ಮಾಡಿತು ಎಂದರೆ ಅದು ಈ ಇಲಾಖೆಯ ಮೇಲೆ ನಿಂತುಕೊಂಡಿದೆ ಎಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಒಂದು ರಸ್ತೆ ಕಾಮಗಾರಿ ತೆಗೆದುಕೊಂಡರೆ ಜನತೆಯ ಕಣ್ಣಿಗೆ ಬೀಳುತ್ತದೆ. ಈ ಇಲಾಖೆಯಲ್ಲಿ ಹಲವಾರು, ನಾನು ಕಂಡಂಥ ಸಮಸ್ಯೆಗಳನ್ನು ಈ ಸಭೆಯ ಮುಂದಿಡಲಿಕ್ಕೆ ಬಯಸುತ್ತೇನೆ. ಕೆಲವು ಅಂತರ್ ಪಿಶಾಚಿ ರಸ್ತೆಗಳು, ಎಂದರೆ, ಐ.ವಿ.ಸಿ. ರಸ್ತೆಗಳನ್ನು ಒಂದು ಕಾಲದಲ್ಲಿ ಮಾಡಿದ್ದಾರೆ. ಈ ರಸ್ತೆಗಳಿಗೆ ಏನಾಗಿದೆ ಎಂದರೆ, ತಾಲ್ಲೂಕು ಬೋರ್ಡಿನವರು ನೋಡುವುದಿಲ್ಲ, ಪಿ.ಡಬ್ಲ್ಯೂ.ಡಿ. ಯವರು ನೋಡುವುದಿಲ್ಲ, ಅವರು ನಮಗೆ ಸೇರಿಲ್ಲ ಎಂದು ಒಂದು ರಿಪೇರಿಯನ್ನು ಮಾಡುವುದಿಲ್ಲ. ಒಂದೊಂದು ಸೇತುವೆ ಮಾಡಿದ್ದಾರೆ, ಅದು ಮರುವರ್ಷವೇ ಬಿದ್ದು ಹೋಗಿದೆ. ರಿಪೇರಿ ಮಾಡಲು ಗ್ರಾಂಟ್ ಇಲ್ಲ; ಹೀಗೆ ಮುರಿದು ಬಿದ್ದ ಸೇತುವೆಗಳು ಮಲೆನಾಡಿನಲ್ಲಿ ಇವೆ. ಅಂತರ ಪಿಶಾಚಿ ರಸ್ತೆಗಳನ್ನು ಸರ್ಕಾರದವರು, ಪಿ.ಡಬ್ಲ್ಯೂ.ಡಿ. ಗೆ ತೆಗೆದುಕೊಂಡು ಸರಿಯಾದ ರೀತಿಯಲ್ಲಿ ರಿಪೇರಿ ಮಾಡಬೇಕು. ಇನ್ನೊಂದು ಪ್ರಶ್ನೆ, ಬರುತ್ತದೆ, ನಮ್ಮ ಸರ್ಕಾರ ಬಹುತೇಕ 100ಕ್ಕೆ 70–80ಭಾಗ ಹಳ್ಳಿಯ ಜನರಿಂದ ಮತ ಪಡೆದು ಬಂದಿರತಕ್ಕ ಸರ್ಕಾರ ಆದ್ದರಿಂದ ಹಳ್ಳಿಯ ಕಡೆಗೆ ಹೆಚ್ಚಿನ ಗಮನವನ್ನು ನಮ್ಮ ಸರ್ಕಾರ ಕೊಡಬೇಕು. ಪಟ್ಟಣಗಳಲ್ಲಿ ಹೆಚ್ಚು ಹೆಚ್ಚಾಗಿ ಸಿಮೆಂಟ್ ರಸ್ತೆಗಳಿಗೆ ಖರ್ಚುಮಾಡುತ್ತೀರಿ. ಈ ಹಣವನ್ನು ಐ.ವಿ.ಸಿ. ರಸ್ತೆಗಳಿಗೆ ಖರ್ಚು ಮಾಡಬೇಕು ಎಂದು ಈ ಸಭೆಯಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಪಟ್ಟಣಗಳಲ್ಲಿ ಖರ್ಚು ಮಾಡಿದ ಹಣದಿಂದ ಸಾಮಾನ್ಯ ಜನತೆಗೆ ಉಪಯೋಗ ಆಗುತ್ತಿಲ್ಲ. ಆದ್ದರಿಂದ ಸಾಮಾನ್ಯ ಜನತೆಗೆ ಹೆಚ್ಚು ಉಪಯೋಗ ಆಗತಕ್ಕ ಕೆಲಸದ ಕಡೆಗೆ ಗಮನಕೊಡಬೇಕು. ಸ್ವಾತಂತ್ರ್ಯ ಬಂದು 25 ವರ್ಷಗಳಾದರೂ ಮಲೆನಾಡಿನ ಕಡೆ ಹೆಚ್ಚಿನ ಗಮನಕೊಟ್ಟಿಲ್ಲ. ಶಿವಮೊಗ್ಗ ಜಿಲ್ಲೆಯ ಬಗ್ಗೆ ಹೇಳುತ್ತೇನೆ. 1960ರಲ್ಲಿ ನಡೆದಂಥ ಒಂದು ದುರಂತದಿಂದ ಶ್ರೀಮಾನ್ ನಿಜಲಿಂಗಪ್ಪನವರು ಇದರ ಕಡೆ ಮಲತಾಯಿ ಧೋರಣೆ ತಾಳಿದ್ದಾರೆ. ಆ ರಾಗಾಯಿತು, ಯಾವ ಬಗೆಯ ಕೆಲಸಗಳನ್ನು ಮಾಡುತ್ತಿಲ್ಲ. ಶಿವಮೊಗ್ಗ ಜಿಲ್ಲೆಯ ಬಗ್ಗೆ ಮಂತ್ರಿ ಮಂಡಲ ಯಾವ ಒಂದು ಕೆಲಸಕಾರ್ಯಗಳನ್ನು ಆಗಲೀ ಮಾಡದೆ ಮಾತ್ಸರ್ಯ ಭಾವನೆ ಇಟ್ಟುಕೊಂಡು ಶಿವಮೊಗ್ಗ ಜಿಲ್ಲೆಯನ್ನು ಕಡೆಗಾಣಿಸಿದರು. ಈ ಸರ್ಕಾರದಿಂದ ಹೆಚ್ಚಿನ ಪ್ರಾಶಸ್ತ್ಯ ಸಿಕ್ಕುತ್ತದೆ ಎನ್ನುವ ಭಾವನೆ ಅಲ್ಲಿಯ ಜನಕ್ಕೆ ಇದೆ. ನಮ್ಮದೇ ಸರ್ಕಾರ ಎನ್ನುವ ಭಾವನೆ ಇದೆ. ರೀಜನಲ್ ಇಂಬ್ಯಾಲನ್ಸ್ ಎಂದು ಏನು ಹೇಳುತ್ತಿದ್ದಾರೋ ಅದು ಹೋಗಬೇಕು. ಯಾವ ಯಾವ ಖಾತೆಯನ್ನು ವಹಿಸಿಕೊಂಡಿರತಕ್ಕ ಮಂತ್ರಿಗಳು ಅವರವರ ಜಿಲ್ಲೆಯ ಅಭಿವೃದ್ಧಿಮಾಡಿ ಕೊಳ್ಳುತ್ತಾರೆ ಎನ್ನುವ ಅಪಾದನೆ ಇದೆ. ಆ ಅಪಾದನೆಯನ್ನು ನೀವು ಅಲ್ಲಗಳೆಯಬೇಕು. ಸರ್ವತೋಮುಖವಾದ ಭಾವನೆ ಇರಬೇಕು. ಯಾವ ಕಡೆ ಹೆಚ್ಚು ಕೆಲಸ ಕಾರ್ಯಗಳಾಗಿಲ್ಲ ಆ ಕಡೆ ಹೆಚ್ಚು ಕೆಲಸಕಾರ್ಯಗಳು ಆಗಬೇಕು ಎನ್ನುವ ವಾದವನ್ನು ನಿಮ್ಮ ಮುಂದೆ ಇಡುತ್ತೇನೆ. ಶಿವಮೊಗ್ಗ ಜಿಲ್ಲೆಯಿಂದ ದೇಶದ ಬೊಕ್ಕಸಕ್ಕೆ 60 ಪರ್ಸೆಂಟ್ ಹಣ ಒದಗಿಸುತ್ತದೆ. ಅಲ್ಲಿ ಭದ್ರಾವತಿ ಫ್ಯಾಕ್ಟರಿ ಲಿಂಗಮನಕ್ಕಿ ದೊಡ್ಡ ಜಲಾಶಯ ಇದೆ. ಇವುಗಳಿಂದ ದೇಶದ ಕಲ್ಯಾಣವಾಗುತ್ತದೆ. ಅಂತಹದರಲ್ಲಿ ಶಿವಮೊಗ್ಗ ಜಿಲ್ಲೆಗೆ ಕೊಡುವ ಕೋಟಾ ಏನು ಲೆಕ್ಕಹಾಕಿಕೊಂಡರೆ ಅದು ಬಡ್ಜೆಟ್ಟಿನಲ್ಲಿ ಸೊನ್ನೆ. ಯಾವ ಯೋಜನೆಯನ್ನೂ ಶಿವಮೊಗ್ಗ ಜಿಲ್ಲೆಗೆ ಹಾಕಿಕೊಂಡಿಲ್ಲ. ಕ್ಷಾಮ ಪೀಡಿತವಾದ 66 ಹಳ್ಳಿಗಳಿಗೆ ನೀರಾವರಿ ಮಾಡಿಕೊಡಬೇಕು ಎಂದು 5–10 ವರ್ಷಗಳಿಂದ ಸರ್ಕಾರದ ಮುಂದೆ ಬೇಡಿಕೆ ಇದೆ. ಆದರೂ ಈ ಬಡ್ಜೆಟ್ಟಿನಲ್ಲಿ ಅವನ್ನು ಸೇರಿಸಿಕೊಂಡಿಲ್ಲ. ಸೀಗೆಹಳ್ಳಿ ಪ್ರಾಜೆಕ್ಟ್ ಅಪ್ಪರ್ ತುಂಗಾ ಪ್ರಾಜೆಕ್ಟ್ ಮತ್ತು ಅಲ್ಲಿಯ ಕೆಲವಾರು ಪ್ರಾಜೆಕ್ಟ್‌ಗಳನ್ನು ಮಾಡಲೇಬೇಕು. ಇಲ್ಲದಿದ್ದರೆ ಅಲ್ಲಿ ರೈತಾಪಿ ಜನ ಏನಿದ್ದಾರೆ ಅವರು ಬೆಳೆ ಬೆಳೆಯುವುದಕ್ಕೆ ಆಗುವುದಿಲ್ಲ ಎನ್ನುವ ವಾದವನ್ನು ಸರ್ಕಾರದ ಮುಂದೆ ಇಡುತ್ತೇನೆ. ಹಿಂದಿನ ಸರ್ಕಾರ ಈ ಕಡೆ ಗಮನಕೊಟ್ಟಿಲ್ಲ.

(ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್)

ಈವೊತ್ತೂ ಕೂಡ ಬಡ್ಜೆಟ್ಟಿನಲ್ಲಿ ಕೈತಪ್ಪಿ ಹೋಗಿವೆ. ಮುಂದಿನ ಸಾರಿ ಸೇರಿಸಿಕೊಳ್ಳುತ್ತೀರಿ ಎನ್ನುವ ಭಾವನೆಯನ್ನು ವ್ಯಕ್ತ ಪಡಿಸುತ್ತೇನೆ.

ಇನ್ನೊಂದು ವಿಚಾರ, ಶರಾವತಿ ವಿದ್ಯುತ್ ಉತ್ಪಾದನೆ ಮಾಡತಕ್ಕ ಕ್ಷೇತ್ರದಲ್ಲಿಯೂ ಯಾರ್‍ಯಾರು ನೊಂದಿದ್ದಾರೆ ಅವರಿಗೆ ವಿದ್ಯುತ್ ಸ್ವಲ್ಪ ಕಡಿಮೆ ದರದಲ್ಲಿ ಕೊಡಬೇಕು ಎನ್ನುವ ವಾದವನ್ನು ತಮ್ಮ ಮುಂದಿಡುತ್ತೇನೆ. ಶರಾವತಿ ವಿದ್ಯುತ್ ಉತ್ಪಾದನೆ ಲಕ್ಷಗಟ್ಟಲೆ ಜನರ ತ್ಯಾಗದಿಂದ ಬರುತ್ತಿದೆ ಎನ್ನುವುದನ್ನು ಈ ಸಭೆ ನೆನಪಿನಲ್ಲಿ ಇಟ್ಟುಕೊಳ್ಳಬೇಕು. ಅಲ್ಲಿ ಶತಮಾನಗಳಿಂದ ವಾಸವಾಗಿರತಕ್ಕವರು ತಮ್ಮ ಊರು ಮನೆಬಿಟ್ಟು ಬೇರೆ ಕಡೆಗೆ ವಲಸೆ ಹೋಗಿದ್ದಾರೆ. ಅವರಿಗೆ ಹೆಚ್ಚಿನ ಸವಲತ್ತು ಕೊಡಬೇಕು, ನೀರಾವರಿಗೋಸ್ಕರ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿಯನ್ನು ಕಡಿಮೆ ದರದಲ್ಲಿ ಕೊಡತಕ್ಕ ಸವಲತ್ತನ್ನು ಸರ್ಕಾರ ಕೊಡಬೇಕು ಎಂದು ನಾನು ಹೇಳಲಿಕ್ಕೆ ಇಚ್ಛಿಸುತ್ತೇನೆ. ಇನ್ನೊಂದು ವಿಚಾರ, ಲಿಫ್ಟ್ ಇರಿಗೇಷನ್ ಸ್ಕೀಂನಲ್ಲಿ ನಾನು ಕೇಳಿದ್ದೇನೆ, ಸಂಸ್ಥಾನ ಮಟ್ಟದಲ್ಲಿ 70 ರಿಂದ 75 ಅಡಿಗಳಿಗೆ ಮಾತ್ರ ಅವಕಾಶ ಇದೆ. ಕೇಂದ್ರಸರ್ಕಾರದ ನೀತಿಯ ಪ್ರಕಾರ 5 ಅಡಿಗಿಂತ ಮೇಲೆ ಕೊಡುವುದಿಲ್ಲ ಎಂದು. ಇನ್‌ವೆಸ್ಟಿಗೇಷನ್ ಡಿಪಾರ್ಟಮೆಂಟಿನವರು ಹೇಳಿದರು, ಅಪ್ಪರ್ ತುಂಗಾ ಪ್ರಾಜೆಕ್ಟಿನಲ್ಲಿ ಕೇವಲ 75 ಅಡಿ ನೀರು ಬರತಕ್ಕ ಪಾಲಿಸಿ ಇಟ್ಟುಕೊಂಡರೆ ಬಹಳ ಕಡೆ ನೀರು ಹೋಗುವುದಿಲ್ಲ. 125 ಅಡಿ ಲಿಫ್ಟ್ ಇರಿಗೇಷನ್‌ಗೆ ಕೊಡತಕ್ಕ ಪಾಲಿಸಿ ಇಟ್ಟುಕೊಳ್ಳಬೇಕುಎಂದು ನಾನು ಸಲಹೆ ಮಾಡುತ್ತೇನೆ. ಶಿವಮೊಗ್ಗ ತಾಲ್ಲೂಕಿನ ಅನೇಕ ಹೋಬಳಿಗಳಲ್ಲಿ ನೀರಿನ ಮಟ್ಟ 150–200 ಅಡಿ ಎತ್ತರ ಇದೆ. 75 ಅಡಿ ಪಾಲಿಸಿ ಹಾಕಿಕೊಂಡರೆ ಅನೇಕ ಪ್ರದೇಶಗಳಿಗೆ ನೀರು ಸಿಗುವುದಿಲ್ಲ. ಇದನ್ನು ಕೂಡ ವ್ಯತ್ಯಾಸ ಮಾಡಿಕೊಳ್ಳಲೇ ಬೇಕು.

ಪಿ. ಡಬ್ಲ್ಯೂ. ಡಿ. ಇಲಾಖೆಯಲ್ಲಿರತಕ್ಕ ಅನೇಕ ನೌಕರರು 10 ವರ್ಷಗಳಿಂದ ಟೆಂಪರರಿ ಕೆಲಸ ಮಾಡಿಕೊಂಡು ಬಂದಿದ್ದಾರೆ. ನಾನು ಮಾನ್ಯ ಮಂತ್ರಿಗಳಿಗೆ ಅವರ ಅರ್ಜಿಯನ್ನು ಕೊಡಿಸಿದ್ದೇನೆ. 10 ವರ್ಷಗಳ ಕಾಲ ಟೆಂಪರರಿ ಕೆಲಸ ಮಾಡಿಕೊಂಡು ಬಂದು 11ನೇ ವರ್ಷದಲ್ಲಿ ಅವರನ್ನು ರಿಲೀವ್ ಮಾಡಿದ್ದಾರೆ. ಮುಖ್ಯಮಂತ್ರಿಗಳು ಅಗ ಕಾಂಗ್ರೆಸ್ ಅಧ್ಯಕ್ಷರಾಗಿದ್ದರು ಅವರ ಹತ್ತಿರ ಈ ನೌಕರರನ್ನು ಕರೆದುಕೊಂಡು ಬಂದಿದ್ದೆ.

ಅಧ್ಯಕ್ಷರು.— ತಾವು ಜಾಸ್ತಿ ಹೊತ್ತು ತೆಗೆದುಕೊಂಡರೆ ಇನ್ನೊಬರ ಸಮಯ ತೆಗೆದುಕೊಂಡಂತಾಗುತ್ತದೆ, ಇನ್ನೂ ಎಷ್ಟೋ ಜನ ಸದಸ್ಯರು ಮಾತನಾಡುವವರು ಇದ್ದಾರೆ. ತಾವು ಜಾಗ್ರತೆ ಭಾಷಣವನ್ನು ಮುಗಿಸಬೇಕು.

†ಶ್ರೀ ಬಿ. ಪುಟ್ಟಸ್ವಾಮಯ್ಯ (ರಾಮನಗರಂ). —ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ, ನಮ್ಮ ಮುಂದೆ ರಾಜ್ಯದ ಮಾನ್ಯ ಮರಾಮತ್ ಶಾಖಾ ಸಚಿವರು ಮಂಡಿಸಿರತಕ್ಕ 8 ಬೇಡಿಕೆಗಳನ್ನು ತೀವ್ರವಾಗಿ ವಿರೋಧಿಸಿ ಈ ಸಂದರ್ಭದಲ್ಲಿ ಕೆಲವು ಸೂಚನೆಗಳನ್ನು ಕೊಡುವುದಕ್ಕೆ ಬಯಸುತ್ತೇನೆ. ವಯೋವೃದ್ಧರು, ಆಡಳಿತ ಅನುಭವವುಳ್ಳವರು ಅನೇಕಸಾರಿ ಮಂತ್ರಿಗಳಾಗಿದ್ದಂಥ ಶ್ರೀಮಾನ್ ಚೆನ್ನಬಸಪ್ಪನವರು ಈ ರಾಜ್ಯಕ್ಕೆ ಮುತ್ತಿನಂಥ ಮೂರು ಮಾತುಗಳನ್ನು ಆಡಿದ್ದಾರೆ. ಮೊದನೆಯದಾಗಿ ಈ ರಾಜ್ಯದಲ್ಲಿ ಇದ್ದಂಥ ಒಂದು ತೊಟ್ಟು ಹನಿಯನ್ನು ಶೇಖರಿಸದೇ ಬಿಡುವುದಿಲ್ಲ. ಎರಡನೆಯದಾಗಿ ಪ್ರತಿ ತಾಲ್ಲೋಕಿನಲ್ಲಿ 50 ಮೈಲಿ ರಸ್ತೆಯನ್ನು ನನ್ನ ಇಲಾಖೆಯ ಮುಖಾಂತರ ಮಾಡುತ್ತೇನೆ ಮತ್ತು ಮೂರನೆಯದಾಗಿ ಲಂಚಗುಳಿತನ ಬಹುಮಟ್ಟಿಗೆ ಕಡಿಮೆ ಮಾಡುತ್ತೇನೆ ಎಂದು. ಈ ಮೂರು ಮಾತುಗಳನ್ನು ಅವರ ವಯಸ್ಸು, ಜ್ಞಾನ ಮತ್ತು ಅನುಭವದಿಂದ ಹೇಳಿದ್ದಾರೆ. ನಾನು ಒಂದು 4 5 ಜನ ವಯಸ್ಸಾದವರು ಅನುಭವಸ್ತರು ಮಂತ್ರಿಗಳನ್ನು ನೋಡಿದಾಗ ಅವರ ಬಾಯಿಂದ ಗಂಭೀರವಾದ ಮಾತು ಬರುತ್ತದೆ, ಈ ಮಾತನ್ನು ಸಭೆ ಮತ್ತು ರಾಜ್ಯದ ಜನತೆ ನಂಬಬೇಕು ಮತ್ತು ಹಿಂಬಾಲಿಸಬೇಕು ಎಂದು ತಿಳಿದುಕೊಂಡಿದ್ದೇನೆ. ಆದರೆ ತಾವು ಮಂಡಿಸಿರತಕ್ಕ ಬೇಡಿಕೆಯಲ್ಲಿ ನೀವು ಆಡಿರತಕ್ಕ ಮಾತುಗಳನ್ನು ಉಳಿಸಿಕೊಳ್ಳತಕ್ಕ ಲಕ್ಷಣವಿಲ್ಲ. ನಿಮ್ಮ ಇಲಾಖೆಯಲ್ಲಿ ರಸ್ತೆಗಳಲ್ಲಿ ನಿಂತಿರುವ ಮೇಸ್ತ್ರಿಯಿಂದ ಹಿಡಿದು ಸೂಪರ್ ಇಂಜಿನೀಯರ್‌ವರೆಗೆ 90–95 ಭಾಗ ಜನ ಲಂಚಕೋರರಿರುವಾಗ ನಿಮ್ಮ ಇಲಾಖೆಯನ್ನು ಶುದ್ಧೀಕರಣ ಮಾಡುತ್ತೇವೆಂದು ಯಾವ ಅಂತರಾತ್ಮದಿಂದ ಹೇಳಿದ್ದೀರಿ ಎಂದು ಕೇಳುತ್ತೇನೆ. ಇಂಥ ಇಲಾಖೆಯಲ್ಲಿ ಕೇವಲ ಕೆಲವು ಮಂದಿ ಆರಿಸಿ ಶಿಕ್ಷೆ ಮಾಡಿದ್ದೇವೆ ಎಂದು ಹೇಳಿದ್ದೀರಿ. ನಿಮ್ಮ ಬಗ್ಗೆ ಅಪಾರವಾದ ವೈಯುಕ್ತಿಕವಾಗಿ ಗೌರವ ಇಟ್ಟುಕೊಂಡಿರತಕ್ಕವರಲ್ಲಿ ನಾನು ಒಬ್ಬ. ಇವೊತ್ತಿನ ದಿವಸ ನಿಮ್ಮನ್ನು ಪ್ರಶ್ನೆ ಮಾಡಬೇಕಾಗುತ್ತದೆ. ಮೈಸೂರು ರಾಜ್ಯದ ಜನತೆ ನಿಮ್ಮನ್ನು

ಎಷ್ಟು ಲಘುವಾಗಿಕಾಣುತ್ತಾರೆ. ಆಸ್ಪತ್ರೆಗಳಲ್ಲಿ, ಹೋಟೆಲುಗಳಲ್ಲಿ ರಸ್ತೆಗಳಲ್ಲಿ ಜಟಕಾಗಾಡಿಯಲ್ಲಿ ಮಂತ್ರಿಗಳ ಬಗ್ಗೆ ಲಘುವಾಗಿ ಹೇಳಿಕೊಳ್ಳುತ್ತಿದ್ದಾರೆ. 4-5 ಜನ ಮಂತ್ರಿಗಳ ಬಗ್ಗೆ ಅಪಾರವಾದ ನಂಬಿಕೆ ವಿರೋಧಪಕ್ಷದಲ್ಲಿ ಇದೆ. ಇಂಥ ನಂಬಿಕೆ ಇಟ್ಟುಕೊಂಡ ವಯೋವೃದ್ಧರು ಉಳ್ಳ ಮಂತ್ರಿಗಳು ಇದ್ದಾಗ್ಯೂ ಕೂಡ ನಾನು ಪ್ರಶ್ನೆಮಾಡಬೇಕಾಗಿದೆ. ಆ ಪಕ್ಷ ಈ ಪಕ್ಷ ಎಂದು ಟೀಕೆ, ಪ್ರತಿ ಟೀಕೆ, ಆರೋಪ, ಪ್ರತಿಆರೋಪ ಮಾಡುವುದರಿಂದ ರಾಜ್ಯಕ್ಕೆ ಕಲ್ಯಾಣ ಆಗುವುದಿಲ್ಲ. ಶ್ರೀಮಾನ್ ಚನ್ನಬಸಪ್ಪನವರು ಹೇಳಿದ ಮಾತು ತೀರ್ಮಾನಕ್ಕೆ ಬರಬೇಕಾಗುತ್ತದೆ. ನೀವು ಇಟ್ಟಿರತಕ್ಕ ದುಡ್ಡಿನಿಂದ ಏನು ಮಾಡುವುದಕ್ಕೂ ಸಾಧ್ಯವಾಗುವುದಿಲ್ಲ. ಆದ್ದರಿಂದ ಇದನ್ನು ಸ್ಪಷ್ಟವಾಗಿ ವಿರೋಧಿಸಬೇಕಾಗುತ್ತದೆ. ಮುಖ್ಯಮಂತ್ರಿಗಳು ಹೇಳಿದ್ದು ಕೇಳಿದ್ದೇನೆ. ಅವರು ನಾಲಗೆಯಿಂದ ಅಡಿವಂತ ಮಾತನ್ನು ಉಳಿಸಿಕೊಂಡು ಅವರ ವ್ಯಕ್ತಿತ್ವ ಬೆಳೆಸಿಕೊಳ್ಳಲಿ ಎಂದು ಹೇಳುತ್ತೇನೆ. ಸಾಮಾನ್ಯ ಮನುಷ್ಯ ಆಡಬಹುದು, ಒಬ್ಬ ಸದಸ್ಯ ಆಡಬಹುದು. ಅದರಂತೆ ನಡೆಯದೆ ಇರಬಹುದು ಆದರೆ ಮಾನ್ಯ ಮಂತ್ರಿಗಳು, ಮಾನ್ಯ ಮುಖ್ಯಮಂತ್ರಿಗಳು ಆಡತಕ್ಕ ಮಾತನ್ನು ಉಳಿಸಿಕೊಳ್ಳಬೇಕು ಎಂದು ಚಿಕ್ಕವನಾದ ನಾನು ನಮ್ರತೆಯಿಂದ ಸೂಚಿಸುವುದಕ್ಕೆ ಇಚ್ಛೆಪಡುತ್ತೇನೆ. ತಾವು ನಾಯಕರು ಅನೇಕ ಜನ ಆರ್ ಕಾಂಗ್ರೆಸ್ ಓ ಕಾಂಗ್ರೆಸ್ ಎಂದು ಯಾಕೆ ಜಗಳವಾಡುತ್ತಿದ್ದೀರಿ ಎಂದು ಹೇಳುತ್ತಾರೆ, ನೀವು ಕೌರವರೇ, ಹಾಗಾದರೆ ನಾವು ಪಾಂಡವರಾಗಿ ಉಳಿಯುತ್ತೇವೆ. ಕೌರವರು ಮತ್ತು ಪಾಂಡವರ ಮಧ್ಯೆ ಸಭಾಧ್ಯಕ್ಷಿಣಿಯವರು ನೀವು ಕೃಷ್ಣನಾಗಿ ಉಳಿಯಬೇಕು. ಧರ್ಮ ಸಂಸ್ಥಾಪನೆ ಆಗಬೇಕಾದರೆ ಧರ್ಮ ಯುದ್ಧ ಆಗಬೇಕು. ಶಾಂತಿಯುದ್ಧ ನಡೆದರೆ ಶ್ರೀಮಾನ್ ದೇವರಾಜ್ ಅರಸ್‌ರವರು ಮುಟ್ಟಿದರೆ ನಾನು ಬಿದ್ದು ಹೋಗುತ್ತೇನೆ.

ಒಬ್ಬ ಸದಸ್ಯರು:—ಯುದ್ಧ ಮುಗಿದು ಹೋಯಿತು.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಧರ್ಮ ಸಂಸ್ಥಾಪನೆ ಆಗುವವರೆಗೆ ಯುದ್ಧ ನಡೆಯುತ್ತದೆ. ಜನ ತೀರ್ಮಾನ ಮಾಡಬೇಕು. ನಿಮ್ಮ ಲಕ್ಷಣ, ನಿಮ್ಮ ಮಾತು, ನಮ್ಮ ಲಕ್ಷಣ ನಮ್ಮ ಮಾತುಗಳು, ನಿಮ್ಮ ಆಚಾರ ವ್ಯವಹಾರ, ನಮ್ಮ ಆಚಾರ ವ್ಯವಹಾರ ಇವನ್ನು ನೋಡಿ ಜನತೆ ತೀರ್ಮಾನ ಮಾಡಬೇಕು. ಧರ್ಮ ಯುದ್ಧದಲ್ಲಿ ಐದು ವರ್ಷಗಳು ಸಭಾಧ್ಯಕ್ಷಿಣಿಯವರು ಕೃಷ್ಣನಾಗಿ ಉಳಿಯಬೇಕು. ರಾಜ್ಯದ ಅನೇಕ ಬಡಜನ, ಅನ್ನ ಬಟ್ಟೆ ಇಲ್ಲದ ಜನ, ನೊಂದ ಜನ ಉದ್ಯೋಗವಿಲ್ಲದೆ ಬೀದಿ ಭಿಕಾರಿಯಾದವರಿಗೆ ರಕ್ಷಣೆ ಮಾಡುತ್ತಾರೆ ಎಂದು ನಿಮ್ಮ ಮುಖಂಡರನ್ನು ನಂಬಿದರು. ಮೈಯನ್ನು ಮುಚ್ಚಬಲ್ಲ ಕಂಬಳಿ ಆಗಬಲ್ಲರು ಎಂದರೆ, ನೀವು ಕರಡಿ ಆದಿರಿ. ರಾಜ್ಯದ ರಕ್ಷಣೆ ಮಾಡತಕ್ಕ ಕಂಬಳಿ ಹೊದಿಕೆ ಆಗತಕ್ಕವರು ಮುಳ್ಳಾಗಿ ಕರಡಿ ಆಗಿ ರೈತರನ್ನು ಪರಚುವುದಕ್ಕೆ ಹೊರಟಿದ್ದೀರಿ. ಬಡ ಜನ ಉಳಿಯುವುದಿಲ್ಲ ಗೌರವದಿಂದ ಮಾತನಾಡತಕ್ಕ ಸತ್ಯವಂತ ಅಧಿಕಾರಿಗಳನ್ನು ನಿಷ್ಕಾರಣವಾಗಿ ತೊಂದರೆ ಕೊಡುತ್ತಿದ್ದೀರಿ. ನೀವು ಒಳ್ಳೆ ಕೆಲಸ ಮಾಡಿ ನಾವು ಸಂತೋಷಪಡುತ್ತೇವೆ. ನಮ್ಮನ್ನು ನಿಮ್ಮ ಸಹೋದರರು ಎಂದು ಭಾವಿಸಿ. ನಾವು ಸಹಕಾರ ಕೊಡುತ್ತೇವೆ. ನೀವು ಒಳ್ಳೆಯ ಕೆಲಸ ಮಾಡಿದರೆ ಅದಕ್ಕೆ ಶಹಬಾಸ್‌ಗಿರಿ ಮಾಡಿ ಹೊಗಳುತ್ತೇವೆ, ನೀವು ಒಳ್ಳೆಯವರೆಂದು ದೇಶಕ್ಕೆ ಸಾರುತ್ತೇವೆ. ಬಡವರು ಬಟ್ಟೆ ಹಾಕಿಕೊಂಡು ಬೀದಿಯಲ್ಲಿ ತಿರುಗುವ ಹಾಗಿಲ್ಲ. ನೀವು ಮಾಡಿದ ಪಾಪಕ್ಕೆ ನಿರಪರಾಧಿಗಳು ಬಯಿಸಿಕೊಳ್ಳಬೇಕಾಗಿದೆ.

ಶ್ರೀ ಬಿ. ಬಸವಲಿಂಗಪ್ಪ (ನಗರಾಡಳಿತ ಶಾಖೆಯ ಮಂತ್ರಿಗಳು).—ಜನತೆ ಈ ಬಗ್ಗೆ ಆಗಲೇ ತೀರ್ಮಾನ ಕೊಟ್ಟು ಬಿಟ್ಟಿದ್ದಾರೆ ಪುನಃ ಅದನ್ನೇ ಮಾತನಾಡುತ್ತೀರಿ ?

ಶ್ರೀ ಬಿ. ಪುಟ್ಟಸ್ವಾಮಯ್ಯ.—ದಾರಿ ದಾರಿಯಲ್ಲಿ ಬನ್ನಿ. ಅದು ಏನು ಎಂದು ಏನು ಕಾಣುತ್ತದೆ ? ಜನ ನನ್ನ ದಾರೀಲಿ ಬಂದರೆ ಸಿಕ್ಕುತ್ತಾರೆ. ಅಧ್ಯಕ್ಷರ ಅನುಮತಿ ಪಡೆದು ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಕೆಲವು ಬೇಡಿಕೆಗಳನ್ನು ಮಂತ್ರಿಗಳ ಮುಂದೆ ಇಡುತ್ತೇನೆ. ರಾಮನಗರದಲ್ಲಿ 2 ರಸ್ತೆಗಳನ್ನು ಪಿಡಬ್ಲ್ಯೂಡಿ ಇಲಾಖೆಯವರು ವಹಿಸಿಕೊಂಡು ಟೆಂಡರು ಕರೆದು ಕಂಟ್ರಾಕ್ಟುದಾರರು ಟೆಂಡರ್ ಹಾಕಿ ಆ ಕೆಲಸ ಪ್ರಾರಂಭವಾಗುವಾಗ ಎಮರ್ಜೆನ್ಸಿ ಬಂದ ಕಾರಣ ರಸ್ತೆ ಕೆಲಸ ಆಗದೆ ನಿಂತುಹೋಯಿತು. 2 ರಸ್ತೆಗಳು, ಪ್ರಾಮುಖ್ಯವಾದ ರಸ್ತೆಗಳು ಇವನ್ನು ಮಾಡಿಸಿಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ಇನ್ನು ಮಂಚನಬೆಲೆ ಪಿಡಿಯಂ ಪ್ರಾಜೆಕ್ಟ್ ಅದರ ಬಗ್ಗೆ ರಾಮನಗರ ಚನ್ನಪಟ್ಟಣ ಎರಡು ತಾಲ್ಲೋಕಿನ ಜನ ಸಂಕಟಕ್ಕೆ ಒಳಗಾಗಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಸಭೆಯಲ್ಲಿ ಹೇಳಿದರು ಕಾವೇರಿ ವ್ಯಾಲಿಯಲ್ಲಿ ಇರತಕ್ಕ ಕೆಲಸಗಳಿಗೆ ಎಷ್ಟು ಬೇಕಾದರೂ ದುಡ್ಡು ಕೊಡುತ್ತೇವೆ ಎಂದು ಹೇಳಿದರು. ನನಗೆ ಸಂತೋಷ ಆಯಿತು. ಈ ಮಾತು ಉಳಿಸಿಕೊಡಿ ಎಂದು ಕೈ ಜೋಡಿಸಿ ಪ್ರಾರ್ಥನೆ ಮಾಡುತ್ತೇನೆ. ಕೊನೆಯದಾಗಿ ಅಧ್ಯಕ್ಷರು, ಕೌರವ ಮತ್ತು ಪಾಂಡವರ ಮಧ್ಯೆ ಕೃಷ್ಣನಾಗಿ ಉಳಿಯಬೇಕೆಂದು ಹೇಳಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಮಲ್ಲಿಕಾರ್ಜುನ್ (ಗುರುಮಿಟ್‌ಕಲ್).—ಮಾನ್ಯ ಅಧ್ಯಕ್ಷರೇ, ಮಾನ್ಯ ಲೋಕೋಪಯೋಗಿ ಮಂತ್ರಿಗಳು ಮಂಡಿಸಿದ ಡಿಮ್ಯಾಂಡ್‌ಗಳನ್ನು ಸ್ವಾಗತ ಮಾಡುತ್ತಾ ನಾನು ಇವೊತ್ತಿನ ದಿವಸ ನಾಲ್ಕು ಮಾತುಗಳನ್ನು ಹೇಳಬಯಸುತ್ತೇನೆ. ಈಗಾಗಲೇ ಈ ಬೇಡಿಕೆಗಳ ಮೇಲೆ ಹಿರಿಯ ಸದಸ್ಯರು ಚರ್ಚೆ ಮಾಡಿದ್ದಾರೆ. ಈ ಇಲಾಖೆಯಲ್ಲಿ ಮಿಸ್-ಮ್ಯಾನೇಜ್‌ಮೆಂಟ್ ಇದೆ, ಕರಪ್ಷನ್ ಇದೆ ಮತ್ತು ಬೆಳೆಯುತ್ತಿದೆ ಎಂಬ ಬಗ್ಗೆ ಯಾರು ಕಾರಣರು ಎಂಬುದನ್ನು ನಾವು ವಿಚಾರ ಮಾಡಬೇಕಾಗಿದೆ. ಈ ಸರ್ಕಾರ ಆಡಳಿತ ವಹಿಸಿಕೊಂಡು ಕೇವಲ 3 ತಿಂಗಳಾಗಿದೆ. ಆದರೂ ಈ ಸರ್ಕಾರದ ಮೇಲೆ ವಿರೋಧಪಕ್ಷದ ಹಿರಿಯರು ದೊಡ್ಡ ಅಪಾದನೆ ಇಡುತ್ತಿದ್ದಾರೆ. ಅದಕ್ಕಾಗಿ ನನಗೆ ದುಃಖವಾಗುತ್ತಿದೆ. ಕಳೆದ ಮೂರು ತಿಂಗಳಲ್ಲಿ ನಮ್ಮ ಸರ್ಕಾರ ಏನು ತಪ್ಪು ಮಾಡಿದೆ ಎಂಬುದನ್ನು ಕಂಡುಹಿಡಿದು ಅದಕ್ಕೆ ಬೇಕಾದ ಸೂಚನೆಗಳನ್ನು ಕೊಟ್ಟಿದ್ದರೆ ನಾವು ಒಪ್ಪಬಹುದಾಗಿತ್ತು. ಅದನ್ನು ಬಿಟ್ಟು ಈ ಸರ್ಕಾರದವರು ಅವರನ್ನು ವರ್ಗ ಮಾಡಿದರು, ಲಂಚ ಬೆಳೆಯುತ್ತಿದೆ, ಎಂಬುದಾಗಿ ವಿರೋಧಪಕ್ಷದ ನಾಯಕರು ಹೇಳಿದರು. ಕಳೆದ 10 ವರ್ಷಗಳಲ್ಲಿ ಈ ಇಲಾಖೆಯ ಮಂತ್ರಿಗಳಾಗಿ ಯಾರು ಇದ್ದರು, ರಾಜ್ಯದ ಮುಖ್ಯಮಂತ್ರಿಗಳಾಗಿ ಯಾರು ಇದ್ದರು, ಕಳೆದ ಹತ್ತು ವರ್ಷಗಳಲ್ಲಿ ಲಂಚ ಎಂಬುದು ಎಷ್ಟು ರೀತಿಯಲ್ಲಿ ಬೆಳೆದಿದೆ ಎಂಬುದನ್ನು ಅವರೇ ಪ್ರಶ್ನೆಯನ್ನು ಸ್ವಂತಕ್ಕೆ ಹಾಕಿಕೊಂಡರೆ, ಉತ್ತರ ಅವರಿಗೆ ಸಿಗುತ್ತದೆ. ಶ್ರೀಮಾನ್ ವೀರೇಂದ್ರ ಪಾಟೀಲ್ ಅವರು ಮುಖ್ಯಮಂತ್ರಿಗಳಾಗುವುದಕ್ಕೆ ಮುಂಚೆ ಅವರ ಆಸ್ತಿ ಆ ಕಾಲಕ್ಕೆ 40 ಎಕರೆ ಜಮೀನು ಮಾತ್ರ ಇತ್ತು. ಆ ಜಮೀನನ್ನು ಅವರ ಅಣ್ಣನಾದ ಶ್ರೀ ಶರಣಪ್ಪನವರೊಡನೆ ಪಾರ್ಟಿಷನ್ ಡೀಡ್ ಮಾಡಿಕೊಂಡಾಗ ಇವರ ಪಾಲಿಗೆ 20 ಎಕರೆ ಜಮೀನು ಬಂತು. ಆದರೆ ಇಂದು ಗುಲ್ಬರ್ಗದಲ್ಲಿ ಎರಡು ಲಕ್ಷ ರೂಪಾಯಿ ಬೆಲೆ ಬಾಳುವ ಒಂದು ಬಂಗಲೆ ಇದೆ. ಇದು ಎಲ್ಲಿಂದ ಬಂತು ? ಇವೊತ್ತಿನದಿವಸ ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡಿ ಬೆಂಗಳೂರಿನಲ್ಲಿ ಮನೆ ಕಟ್ಟಿಸುತ್ತಿದ್ದಾರೆ. ಈ ಹಣ ಎಲ್ಲಿಂದ ಬಂತು ಎಂಬುದನ್ನು ವಿರೋಧಪಕ್ಷದವರು ವಿಚಾರ ಮಾಡಬೇಕು. ಏಕೆಂದರೆ ವಿರೋಧಪಕ್ಷದವರು ಅವರ ಜೊತೆಯಲ್ಲಿಯೇ ಇದ್ದವರು. ಹಿಂದಿನ ಸರ್ಕಾರದವರು ದೊಡ್ಡ ದೊಡ್ಡ ಕಂಟ್ರಾಕ್ಟ್‌ದಾರರನ್ನು ಹಿಡಿದು ಅವರ ಮೂಲಕ ಆಡಳಿತ ನಡೆಸಿದರು. ಆದರೆ ಇಂದು ಕಾರ್ಮಿಕರು, ಹಿಂದುಳಿದ ಜನರು ಮತ್ತು ಬಡವರು ಈ ಸರ್ಕಾರವನ್ನು ರಚನೆ ಮಾಡುವುದಕ್ಕೆ ಸಹಾಯ ಮಾಡಿದ್ದಾರೆ. ಆದ್ದರಿಂದ ಈ ಸರ್ಕಾರದವರು ಕಂಟ್ರಾಕ್ಟರ್ಸ್ ಮತ್ತು ಇಂಜಿನಿಯರ್ಸ್ ಹೇಳಿದ ಹಾಗೆ ಕೇಳುವುದಿಲ್ಲ, ಆ ರೀತಿ ಏನಾದರೂ ಕೇಳಿದರೆ ಅಥವಾ ವರ್ತನೆ ಮಾಡಿದರೆ ಸಂಸ್ಥಾ ಕಾಂಗ್ರೆಸ್‌ನವರಿಗೆ ಆದ ಶಿಕ್ಷೆಯೇ ಇವರಿಗೂ ಆಗುತ್ತದೆಂದು ಹೇಳುತ್ತೇನೆ. ನಾವು ಯಾವುದನ್ನು ಮಾತನಾಡುವಾಗಲೂ ವಿಚಾರ ಮಾಡಿ ಮಾತನಾಡಬೇಕು. ಹಿಂದಿನ ಸರ್ಕಾರದವರು ಮಾಡಿದ ತಪ್ಪುಗಳನ್ನು ಈ ಸರ್ಕಾರದ ಮೇಲೆ ಹೊರಿಸುವುದು ಎಷ್ಟರಮಟ್ಟಿಗೆ ಯೋಗ್ಯ ಎಂಬುದನ್ನು ವಿರೋಧಪಕ್ಷದವರು ವಿಚಾರ ಮಾಡಬೇಕು. ಇವೊತ್ತಿನದಿವಸ ನಮ್ಮ ಸರ್ಕಾರಕ್ಕೆ ಒಂದು ಮನವಿ ಮಾಡಿಕೊಳ್ಳುತ್ತೇನೆ, ಏನೆಂದರೆ, ಒಂದು ಎನ್‌ಕ್ವೈರಿ ಕಮಿಟಿಯನ್ನು ನೇಮಕ ಮಾಡಿ ಸೂಪರ್‌ವೈಸರ್‌ನಿಂದ ಹಿಡಿದು ಚೀಫ್ ಇಂಜಿನಿಯರ್‌ವರೆಗೆ ಅವರು ಕೆಲಸಕ್ಕೆ ಸೇರುವಾಗ ಎಷ್ಟು ಆಸ್ತಿ ಇತ್ತು, ಇಂದು ಎಷ್ಟು ಆಸ್ತಿ ಇದೆ ಎಂಬುದನ್ನು ಆ ಕಮಿಟಿಯವರಿಂದ ತನಿಖೆ ಮಾಡಿಸಿ ಅದರ ಒಂದು ವರದಿಯನ್ನು ಈ ಸದನದ ಮುಂದೆ ಇಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಅದರಲ್ಲಿ ಮಂತ್ರಿಗಳದ್ದನ್ನು ಸೇರಿಸಬೇಕು.

ಶ್ರೀ ಮಲ್ಲಿಕಾರ್ಜುನ್.—ಎರಡನೆಯದಾಗಿ ಶ್ರೀಮಾನ್ ವೀರೇಂದ್ರ ಪಾಟೀಲರ ಕ್ಷೇತ್ರದಲ್ಲಿ ಹಳ್ಳಿಹಳ್ಳಿಗೂ ರಸ್ತೆಗಳಾಗಿವೆ ಮತ್ತು ಎಲ್ಲ ಹಳ್ಳಿಗಳಿಗೂ ವಿದ್ಯುಚ್ಛಕ್ತಿ ಸೌಕರ್ಯವನ್ನು ಮಾಡಿಕೊಡಲಾಗಿದೆ. ಆದರೆ ಹರಿಜನ ವಾರ್ಡ್‌ಗಳಿಗೆ ಮಾತ್ರ ವಿದ್ಯುಚ್ಛಕ್ತಿಯನ್ನು ಒದಗಿಸಿಲ್ಲ. ಹರಿಜನರ ಓಣಿಗಳಲ್ಲಿ ಲೈಟ್ ಹಾಕಿಸಿಲ್ಲ. ಇದಕ್ಕೆ ಯಾರು ಕಾರಣರು ? ನಾವು ಯಾರನ್ನು ಕೇಳಬೇಕು ? ಇದು ಈ ಸರ್ಕಾರದ್ದು ತಪ್ಪೋ ಅಥವಾ ಹಿಂದಿನ ಸರ್ಕಾರದ್ದು ತಪ್ಪೋ ? ಇಷ್ಟೇ ಅಲ್ಲದೆ ಗುಲ್ಬರ್ಗದಲ್ಲಿ ಕಂಟ್ರಾಕ್ಟ್ ಕೆಲಸಗಳನ್ನು ತಮಗೆ ಬೇಕಾದವರಿಗೆ ಕೊಟ್ಟು, ಬಡ್ಜೆಟ್ ಎಸ್ಟಿಮೇಟನ್ನು ಕಂಟ್ರಾಕ್ಟರ್‌ಗಳಿಗೆ ಅನುಕೂಲ ಮಾಡಿಕೊಡಲು ಎರಡು ಮೂರು ಸಲ ಬದಲಾವಣೆ ಸಹ ಮಾಡಿಸಿರುವುದು ಉಂಟು. ಏಕೆಂದರೆ ಇವರುಗಳು ಚುನಾವಣೆಯ ಸಮಯದಲ್ಲಿ ರೊಕ್ಕ ಕೊಡುತ್ತಿದ್ದರು. ಆ ಜಿಲ್ಲೆಯಲ್ಲಿರುವ ಗುರುಪಾದಪ್ಪ ಮತ್ತು ಚಂದ್ರಶೇಖರ್ ಎನ್ನುವ ಇಂಜಿನಿಯರ್‌ಗಳು ಸಾವಿರಾರು ರೂಪಾಯಿಗಳನ್ನು ಕಲೆಕ್ಟ್ ಮಾಡುತ್ತಿದ್ದಾರೆ. ಆದರೆ ಇದನ್ನು ಯಾರೂ ಒಪ್ಪುವುದಕ್ಕೆ ತಯಾರಿಲ್ಲ. ಇದನ್ನು ಸರ್ಕಾರದವರು ವಿಚಾರಣೆ ಮಾಡಿಸಬೇಕು.

ಇನ್ನು ಜೇವರ್ಗಿ ತಾಲ್ಲೂಕ್‌ನಲ್ಲಿ ಕೇವಲ 11 ಪರ್ಸೆಂಟ್ ರೂರಲ್ ಎಲೆಕ್ಟ್ರಿಫಿಕೇಷನ್ ನಡೆದಿದೆ. ಹಿಂದಿನ ಸರ್ಕಾರದವರು ತಮಗೆ ಬೇಕಾದ ಕಡೆಗಳಲ್ಲಿ ಸೆಂಟ್ ಪರ್ಸೆಂಟ್ ರೂರಲ್ ಎಲೆಕ್ಟ್ರಿಫಿಕೇಷನ್

ಮಾಡಿಸಿಕೊಂಡಿದ್ದಾರೆ. ಇನ್ನು ಮುಂದೆ ನಮ್ಮ ಸರ್ಕಾರದವರು ಎಲ್ಲ ಕ್ಷೇತ್ರಗಳಲ್ಲಿಯೂ, ಅದು ವಿರೋಧಪಕ್ಷದ ಕ್ಷೇತ್ರವೇ ಆಗಿರಲೀ, ಆಡಳಿತ ಪಕ್ಷದ ಕ್ಷೇತ್ರವೇ ಆಗಿರಲಿ, ಪ್ರತಿಯೊಂದು ಹಳ್ಳಿಗೂ ನ್ಯಾಷನಲ್ ರೂರಲ್ ಎಲೆಕ್ಟ್ರಿಫಿಕೇಷನ್ ಸ್ಕೀಮನ್ನು ಯಾವ ರೀತಿ ಇಂಪ್ಲಿಮೆಂಟ್ ಮಾಡುತ್ತೀರೋ ಅದೇ ರೀತಿಯಲ್ಲಿ ಪ್ರತಿಯೊಂದು ತಾಲ್ಲೂಕ್‌ಗೂ ಇಂಪ್ಲಿಮೆಂಟ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಲೋಕೋಪಯೋಗಿ ಇಲಾಖೆಯಲ್ಲಿ ಲಂಚವಿದೆ, ಕರಪ್ಷನ್ ಇದೆ ಎಂಬ ಮಾತನ್ನು ನಾನು ಒಪ್ಪುತ್ತೇನೆ. ಈಗ ಕಂಟ್ರಾಕ್ಟರ್ಸ್ ಸೂಪರ್‌ವೈಜರ್‌ಗೆ 3 ಪರ್ಸೆಂಟ್, ಇಂಜಿನಿಯರ್‌ಗೆ 5 ಪರ್ಸೆಂಟ್‌ನಂತೆ ಕೊಟ್ಟುಕೊಂಡು ಹೋಗುತ್ತಿದ್ದಾರೆ. ಇದನ್ನು ತೆಗೆದುಹಾಕುವುದಕ್ಕೆ ನಾವು ಧೈರ್ಯ ಮಾಡಬೇಕು. ಏಕೆಂದರೆ ಎಲ್ಲಿಯವರೆಗೆ ಈ ಪರ್ಸೆಂಟೇಜ್ ಎಂಬುದು ಹೋಗುವುದಿಲ್ಲವೋ ಅಲ್ಲಿಯವರೆಗೆ ಕನ್‌ಸ್ಟ್ರಕ್ಷನ್‌ನಲ್ಲಿ ಡಿಫೆಕ್ಟ್ ಎಂಬುದು ಹೋಗುವುದಿಲ್ಲ. ಈ ದಿಶೆಯಲ್ಲಿ ಈಗಾಗಲೇ ಮಾನ್ಯ ಮಂತ್ರಿಗಳಾದ ಶ್ರೀಮಾನ್ ಚೆನ್ನಬಸಪ್ಪನವರು ಕೆಲವರನ್ನು ಸಸ್ಪೆಂಡ್ ಮಾಡಿದ್ದಾರೆ. ಇದೇ ರೀತಿಯ ಕ್ರಮವನ್ನು ಇನ್ನು ಮುಂದೆಯೂ ತೆಗೆದುಕೊಂಡು ಈ ಪದ್ಧತಿ ಹೋಗುವಂತೆ ಮಾಡಬೇಕಲ್ಲದೆ ಒಳ್ಳೆಯ ರೀತಿಯಿಂದ ಕಾರ್ಯಗಳನ್ನು ನಡೆಸಿಕೊಂಡು ಹೋಗಬೇಕೆಂದು ಕೇಳಿಕೊಳ್ಳುತ್ತೇನೆ.

ಈಗ ನಮ್ಮ ಯಾದಗಿರಿ ತಾಲ್ಲೂಕಿನಲ್ಲಿ 56 ಹಳ್ಳಿಗಳಿಗೆ ಅಪ್ರೋಚ್ ರೋಡುಗಳು ಇಲ್ಲ. ಸುಮಾರು 88 ಹಳ್ಳಿಗಳಿಗೆ ಎಲೆಕ್ಟ್ರಿಫಿಕೇಷನ್ ಆಗಿಲ್ಲ. ಈ ರೀತಿ ನಮ್ಮ ಕ್ಷೇತ್ರ ಬಹಳ ಹಿಂದುಳಿದಿದೆ ಅದಕ್ಕೋಸ್ಕರ ನಮ್ಮ ಕ್ಷೇತ್ರಕ್ಕೆ ಸರ್ಕಾರದವರು ಹೆಚ್ಚಿನ ಸಹಾಯ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

1·00 P. M.

ಮೂರನೆಯದಾಗಿ ನಮ್ಮ ಭಾಗದಲ್ಲಿ ಮುಖ್ಯವಾಗಿ ಅಪ್ಪರ್‌ಕೃಷ್ಣಾ ಪ್ರಾಜೆಕ್ಟ್‌ಗೆ ಸಾಕಷ್ಟು ಹಣವನ್ನು ಒದಗಿಸಿಲ್ಲ ಆದ್ದರಿಂದ ಕಾರ್ಯ ಬಹಳ ನಿಧಾನವಾಗಿ ನಡೆಯುತ್ತಾಇದೆ. ಮೀಡಿಯಂ ಇರಿಗೇಷನ್‌ನಿಗೆ ಸಂಬಂಧಪಟ್ಟಹಾಗೆ ಕಾರಂಜಾ ಯೋಜನೆ, ಬೆಣ್ಣೆತೊರೆ ಯೋಜನೆ ಇತ್ಯಾದಿ ಯೋಜನೆಗಳಿಗೆ ಸಾಕಷ್ಟು ಹಣವನ್ನು ಒದಗಿಸಿ ಈ ಯೋಜನೆಗಳನ್ನು ಬೇಗ ಕಾರ್ಯಗತ ಮಾಡಬೇಕು. ಇಲ್ಲದೇ ಹೋದರೆ ಆ ಭಾಗದ ಜನಗಳಿಗೆ ನೀರಾವರಿ ಸೌಲಭ್ಯ ದೊರೆಯುವುದು ಕಷ್ಟವಾಗುತ್ತದೆ. ನನ್ನ ಕ್ಷೇತ್ರದಲ್ಲಿ ಸಣ್ಣ ಸಣ್ಣ 6 ಕೆರೆಗಳ ಎಸ್ಟಿಮೇಟ್ ಆಗಿದೆ. ಆ ಕೆರೆಗಳ ಕೆಲಸವನ್ನು ಆದಷ್ಟು ಜಾಗ್ರತೆ ಮಾಡಿಕೊಡಬೇಕೆಂದು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

† **Sri C. M. ARUMUGAM** (K. G. F.).—Madam Speaker, much has been said about the Public Works Department and the connected Demands laid before the House yesterday. The Leader of the Opposition made a very eloquent speech, brought to the notice of the House several irregularities of the department and also pointe l out officials of the department who have amassed wealth and who have been unduly promoted by the present Government, particularly the Engineer-in-Chief —I do not know the terminology, whether Chief Engineer-in-Chief or Engineer-in-Chief, but he was every time saying Super-Engineer. I entirely agree with him. He would have retired before the General Elections if the Veerend a Patil Ministry had been continued in power. They wanted to retire him when he completed 25 years of service or at the age of 50. Unfortunately, first of all there was defection and subseqently there was election, and the poor Veerendra Patil Ministry washed away in the big floods of Indira Gandhi. When the Chief Minister was replying to the General Administration Demand, I stated that this Engineer when he was working as Superintending Engineer in the Sharavathi Valley Project had given his property as nil in 1959-60 or 1960-61. Within 12 years of time, one has to asses what is his

(Sri C. M. Arumugam)

property. To my knowledge and information, he has got plenty of land in the Tungabhadra Project area, he has got 2-3 houses and very recently he has purchased an estate, about 16 miles away from Bangalore. He was also Chairman of the Bangalore Water Supply and Sewerage Board and even now he continues to be in charge of this Board. This Water Supply Board is a Statutory Body constituted by an Act and follows certain procedures of the P. W. D. Under the P. W. D. Act, a contractor has no right to sub let a contract. In the Water Board contract for laying Pipe lines from Shimsha to Bangalore, the contractors are Messrs. Engineering Construction Corporation of Madras. For earth excavation the rate of contract is Rs. 9 and odd per cubic metre. This firm, Engineering Construction Corporation of Madras, have sub-let this work of earth excavation to another company at Rs. 2.40 per cubic metre. This sub-letting of contract should not be allowed as per rules, but it has been allowed. What for this has been done ? It is because some finance was given to the political parties for election purposes under the very nose of the Government and under the very nose of the Super-Engineer or the Chairman of this Board. I hold the present Government responsible for this; they must take the entire burden.

Sri D. DEVARAJ URS.—The hon. member has certain information, well and good, and he is going to place it before the House. He has been told or he has got material to say that such a thing has happened, and when that matter comes up before the Government there is occasion for us to verify and find out what it is. I would like to clarify one thing. I request the hon. member to make it more explicit in the sense—whether that allegation is true or not, that apart let it not appear that we have gone on winking at this, because he made a reference just now that a political party must have received funds. I would like to know whether this order was made when we were in power or whether that political party happens to be ourselves or some other party. Please clarify this point. When he makes an allegation, I think the least I should expect is that he will oblige me so much.

Sri C. M. ARUMUGAM.—Most certainly. It is easy for the Chief Minister and the Minister in charge to get this information. There are Account Books and income-tax payment is there, which can be verified. This is done in order to help a few individuals, to become a good man in the eyes of the Government and in the eyes of some individuals. This Super-Engineeer has been leading a sort of Moghul or Sultan way of life, which everybody knows. Yet, he has been brought to this position. Therefore, this necessarily needs an investigation. Somebody suggested a probe in the Sharavathy deal. I suggest that it is very necessary to proble into the functioning of this Board also. Sri Katwey, who retired six years ago, has now been appointed a Member of the Water Board and is made the Chief Engineer. Is the Board empowered to

appoint him as the Chief Engineer ? The Board, under the Act, have no power to appoint a Chief Engineer without consulting the Government. This has been done purposely. Subsequently, the Act was amended in 1966.

The Act says that the appointments of Chief Engineer, the Executive Engineer and the Water Supply Engineer shall be made after consultation with the State Government. This is an addition which has been added to the Act in 1966. The appointment of Sri Katwey is wrong. He has been appointed just to cover the acts of omission and commission of the Super Engineer. Sri Katwey was the Chief Engineer in-charge of Quality Control in Sharavati. The Quality Control was introduced by Sri Channabasappa for the first time in Sharavati and the credit goes to him. The Public Works Department is a divided house today. The appointment of Sri Katwey is illegal.

A statement has been made that the Cauvery water will be brought in December 1973. Some such statament was also made by Sri Channabasappa that Sharavati project will be completed by the end of December 1973. Water can be brought by pump or bullock-carts not necessarily through pipelines. The Chairman of the Water Board has been appointed as Additional Secretary to Government, P.W.D. This Chairman is leading the life of a Sultan of Mysore State. He has got a Stenographer. Wherever he goes he takes him along with him.

SRI D. DEVARAJ URS.—Let us have some healthy tradition in this House. It is not as if I am trying to make out a case for such a healthy tradition just now or during this session. Even in the past, the tradition was that whenever we talk of officers, the members have every right to criticise the officer's work if things have gone wrong. Perhaps it would not be in good taste nor is it in conformity with healthy traditions to attack an officer as an individual because everybody will agree that such officers will not be here to defend themselves ; in which event it may not be sportive to say the least we will be taking undue advantage in attacking individuals. Secondly, I also submit, if there are allegations, let the allegations be made not that I am against it, but I would appeal to the hon. Members not to come to conclusions based on those mere allegations. I have seen in this very House that allegations have been made but no allegations have been attended to. I can promise if there are allegations, whether you make it on the floor of the House or outside or write to me, I will leave it to the good sense of the individual member, I am not going to insist, that if allegations are there, this Government will certainly not hesitate to go into those allegations and if they are proved; such erring officers will have to take the course of law and get punishnd. Merely because some X has said something or Y says something may be an allegation, but till they are proved we cannot take cognisance of it. I would again and again appeal not to come to conclusion on those allegations and do not make references to individual officers personally. This is all my appeal.

MADAM SPEAKER.—Let us avoid making personal references to individual officers.

Sri H. D. DEVE GOWDA.—I would like to draw the attention of the hon. Chief Minister when discussions were held in the same house against Sri N.D.M. Appa, the then Chairman of the MSEB. The way in which the deliberations have gone on in this House are still found in the proceedings. It has not gone from the memory of our minds. Please go through the proceedings. The tradition which you are now pleading for was not adopted during the course of the debate that took place in connection with Sri Appa. Now you want that good tradition should be built up in this House. I want to ask why the same good tradition was not observed when the discussion went on, when allegations were made against the then Chairman of MSEB. Whether those allegations were befitting the dignity or the decorum of the House? You had not opened your lips then. You please go through those proceedings. I have no objection if you want to set up healthy traditions that officers should not be attacked personally. But when such an allegation was made against Sri Appa, you did not suggest anything of this sort?

Sri D. DEVARAJ URS.—What is the reference or background my Hon. Leader of the Opposition refers to? I am not in a position to understand. Even now I apologise if I am a party to such things. I do not hesitate to say so. I do not think that I have ever opened my lips either for or against certain members. I have never relished such attacks in the past nor I wish to relish now. Whether it was in good taste or not, I do not like to probe into it now and it is not necessary either. At least now Sri Devegowda, who I think, has taste for good traditions, in order to be fair also to individuals, let us adopt this healthy procedure. Apart from the rules and regulations, I do not want to go into those things.

ಶ್ರೀ ಎಚ್. ಎಸ್. ಸಿದ್ದಪ್ಪ (ಅರಸೀಕೆರೆ).—ಈಗ ಹೊಸದಾಗಿ ಬಂದಿರುವ ಸದಸ್ಯರ ಪರಿಸ್ಥಿತಿ ಏನಾಗಿದೆ ಎಂಬುದನ್ನು ಸ್ವಲ್ಪ ತಾವು ಗಮನವಿಟ್ಟು ಕೇಳಬೇಕು. ಈಗ ಇವರು ಹಳೆಯ ಸದಸ್ಯರಾಗಿರುವುದರಿಂದ ಅವರ ಮೇಲೆ ಆರೋಪಣೆ ಮಾಡುವುದು. ಅವರು ಇವರ ಮೇಲೆ ಆರೋಪಣೆ ಮಾಡುವುದು ಹೀಗೆ ಆಗಿ ನಮ್ಮ ಪಾಡು ಹೇಳತೀರದು. ಮಾನ್ಯ ಮುಖ್ಯಮಂತ್ರಿಯವರು ವೈಯಕ್ತಿಕವಾಗಿ ಯಾವ ಆಫೀಸರನ್ನೂ ಅಟ್ಯಾಕ್ ಮಾಡಬಾರದು ಎಂದು ಏನು ಹೇಳಿದರು, ಅದು ಸಾಧುವಾದುದಾಗಿದೆ. ಆದ್ದರಿಂದ ಈ ರೀತಿ ಮಾಡುವುದರ ಬದಲು ಹೊಸದಾಗಿ ಬಂದಿರುವ ಸದಸ್ಯರಿಗೆ ನೀವಿಬ್ಬರೂ ಸೇರಿ ಒಂದು ಒಳ್ಳೆಯ ಟ್ರೆಡಿಶನ್ ಉಂಟು ಮಾಡಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

Sri C. M. ARUMUGAM.—The officers concerned, are very much protected by the Government and the Government have right to protect them. I was saying about one section of officers. Our Chief Minister has taken interest to protect some of the officers.

Sri D. DEVARAJ URS.—I am really anxious to protect officers who need protection and who are not here to defend themselves. But at the same time I can assure you and I am second to none in taking action against those who err.

Sri C. M. ARUMUGAM.—We welcome it. An additional Secretary has been re-appointed. A Superintending Engineer who was working somewhere has been brought here and kept in a high position. As Superintending Engineer he had amassed wealth and he paid visits to United Kingdom, U.S.A. and some foreign capitals. This man has been placed in a high position ignoring the claims of the lower officers in the same Department. There is one Public Health Superintending Engineer who has put in 15 years of service in Bangalore itself. He is a bachelor. He has got 2 houses in Kumara Park and one in Vaiyali Kaval. He has amassed wealth. Inspite of this he has been allowed to continue here in Bangalore. With what intention he has been kept here? Excepting 11 months interval this man is continued as Superintending Engineer in Bangalore with 3 houses. No action has been taken to transfer him out. Such a person has not been suspended or dismissed. There is one Executive Engineer who is in Bangalore since 4½ years. He has got an estate at Magadi and the extent of which is about 10 acres. He has got a house in Lower Orchard. He got his house constructed by a contractor. There is an Assistant Engineer in his Division. He has got an Estate and 3 houses in Bangalore. He has constructed a house for one Chief Engineer and that house fetches, Rs. 2,000 rent. Sri H. M. Channabasappa is very loyal and intelligent too I hope he will probe into the matter. The present set up in P. W. D. have grouped themselves. From the Secretary level to the level of Assistant Engineers there is a clique, I request the Minister to look into that. I was very happy no sooner this Government came into power then the six Engineers of the Corporation were suspended without giving notice. The Government has got wide powers. The total strength of the Corporation is 203. The Accounts Officers are there; Assistant Engineers are there and the Executive Engineers are there. The suspension is only with regard to the P. W. D. officials, six Executive Engineers and one Superintending Engineer were suspended. You allowed these people to amass wealth and you allowed them for forming a clique. You allowed Sri Chickodi to form a clique in P. W. D. The majority of officers suspended belong to one community. Pressure was brought on the P. W. D. Minister to take action against these people. The Minister for P. W. D. yielded to their pressure in the end. There was a proposal to suspend an officer belonging to Finance Department. I was told the Finance Minister did not agree to suspend. Therefore he is free. The Accounts Section of the Corporation has been entrusted with the work of framing the working rules. So far they are following the Corporation Act. But so far as framing the rules by the Accounts Section is concerned, no action has been taken. Without framing the rules how can you take action against the officers of P. W. D. who should also be treated on par with the regular Corporation officials in the eyes of law? You must take action according to the Corporation Act and the rules framed thereunder.

Regarding construction of Cold Storage in Lalbagh, I want to speak one or two words. This construction of Cold Storage was started in

(SRI C. M. ARUMUGAM)

1966 and it was given to a contractor and he did the work and handed over the building. Subsequently they wanted to have high voltage in the building. Therefore tenders were called for. Three tenders came. The work was changing the low voltage to high voltage and fixing the transformer. The highest tenderer was recommended to the Government. The Government asked the Chief Engineer why the highest tenderer has been recommended. Then the negotiations took place. Do you know what had happened? The Chief Engineer was directed to negotiate with a particular contractor who comes from Madras. I do not know from what level this direction has come to the Chief Engineer. Then it was recommended that this man might be given that work. I do not mind who gets it. I am just bringing to the notice of this Hon. House how things are taking shape at the highest level. If the work is completed, the Horticulture Department will save Rs. 7,000 per month. The Department is anxious to commission the Cold Storage. Still this has not been commissioned just because some portion of work is yet to be done. That is because, as I have already told you, some sort of clique is working; some groups are there. The whole P.W.D. is a divided House, a divided body. Two groups are working. As you know, during the President's Rule, the Secretaries were given Ministerial powers and that power, they still continue to have. So, what I want to submit is that as far as the P.W.D. is concerned, there is inordinate delay in the implementation of projects. There has to be departmental sanction, technical sanction, and so on. The Cold Storage is there without completion with all the materials, because of the actions of the Government or the concerned Secretaries.

1-30 P.M.

Before I finish, I must touch upon one or two points about Sharavathi Hydro Electric Project. It is here that, for the first time in the history of the P.W.D. in Mysore State, a project was given to the contractors. Sharavathi Valley was the first project in which the execution of work was given to the contractors. Before that, we have constructed several dams but the work was being undertaken by the department. On Page 10 of the Statement made by the Minister for P.W.D. on 18th December 1959, it is stated : 'To give some samples, works like Krishnarajasagar and Bhadra were or are being executed over periods ranging from 12 to 20 years. Sharavathi Project with a masonry construction programme of over 6.73 crores c.ft. which is as big as that of K.R. Sagar, Thunga Bhadra and Bhadra dams put together is to be completed in less than 3 years from now'. Therefore, it was given to the contractors. Further, it is said that in the department, there is no experienced hand and while giving it, the rate has been enhanced more than 100 to 200 per cent. There was sand available at a distance of 1-2 miles near Sharavathi. The contractors

said they would bring sand from Shimoga, which is 80 miles from Sharavathi, but they have used that sand only. The introduction of arbitration clause in the agreement is another thing. By that alone, lakhs of rupees were given to the contractors. The contractors were intelligent. They took money from the Government even before the work was completed. Earnest money was returned to some contractors even before the works were completed. I submit there is something very defective in the Sharavathi Valley Project. There is no guarantee for the Project. For wrist watches we get one year's guarantee and even for chappals we get guarantee, but there is no guarantee for this Project.

Sri D. DEVARAJ URS.—This kind of statement will not give credit either to us or to the country. Suppose the hon. Member were to say: 'There is no guarantee for the dam', all the industrialists will have to run away from Mysore State. I would really like to know who that Engineer is, who said that there is no guarantee for the dam.

Sri C. M. ARUMUGAM.—You talk about socialism. You are defending contractors and defending everything.

On account of this arbitration clause, a lot of money was paid to the contractors. They completed only in 1964; they took two years more. The rates were enhanced. They said everything they did was right. Mr. Veerendra Patil, who was the Minister placed the white paper after 1964 and defended everything. Now he pleads for a judicial probe and says Mr. H. M. Channabasappa is the first accused. Mr. Channabasappa was the first accused and Mr. Veerendra Patil was the second accused.

Madam, Stalin ruled Russia for 30 years. He developed the country and he was given an honourable burial in the Kremlin. But, subsequently, Government found that there was something wrong with his administration that he was not able to implement an effective agricultural policy and that he was not able to grow more food and increase agricultural production. Then, his dead body was removed and thrown out. Another thing that happened in Sharavathi was that a Chief Engineer was given an extension for three years. The people of Mysore State will not spare any one. Even if they are dead and gone, they will dig up their bones and demand a judicial probe in Sharavathi.

Madam, the Public Works Department is a divided house and there are two groups, one working against the other, right from the Secretary down to the Assistant Engineers and Junior Engineers and therefore, I feel that this amount will not be properly spent. 95 per cent of Engineers own houses in Bangalore—right from the Chief Engineer downwards. In these circumstances, I feel the demand should not be accepted.

†ಶ್ರೀ ಬಿ. ಸುಬ್ಬಯ್ಯಶೆಟ್ಟಿ (ಸುರತ್ಕಲ್).—ಅಧ್ಯಕ್ಷರೇ, ಪಿ. ಡಬ್ಲ್ಯು.ಡಿ. ಇಲಾಖೆ ಮಂತ್ರಿಗಳು ಮಂಡಿಸಿದ ಬೇಡಿಕೆಯನ್ನು ನಾನು ಸ್ವಾಗತಿಸುತ್ತೇನೆ. ಈ ಕೇಳಿಕೆ ಬಗ್ಗೆ ಮಾತನಾಡುವಾಗ ವಿರೋಧ ಪಕ್ಷದ ನಾಯಕರು ನಮ್ಮ ಲೋಕೋಪಯೋಗಿ ಇಲಾಖೆ ಸಚಿವರು ಕೆಲವು ಆಫೀಸರುಗಳ ವಿರುದ್ಧ ಕೈಕೊಂಡ ಕ್ರಮದ ಬಗ್ಗೆ ಮಾತನಾಡುತ್ತಾ ಅವರು ಕೈಕೊಂಡ ಕ್ರಮಗಳಿಂದಾಗಿ ನಮ್ಮ ಪಿ ಡಬ್ಲ್ಯುಡಿ ಆಫೀಸರುಗಳಲ್ಲಿ ಡೀಮಾರಲೈಜೇಷನ್ ಆಗಿದೆ ಎಂದು ಹೇಳಿದ ಸಂಗತಿ ಎಲ್ಲರಿಗೂ ತಿಳಿದಿದೆ. ನಿಜವಾಗಿಯೂ ಡೀಮಾರಲೈಜೇಷನ್ ಅಲ್ಲ, actually by these actions, the Department has been moralised ಎಂದು ಹೇಳುತ್ತೇನೆ. ಇನ್ನೂ ಹೆಚ್ಚು ಹೆಚ್ಚಾಗಿ ಯಾರು ಕರಪ್ಟ್ ಅಫಿಷಿಯಲ್ಸ್ ಇದ್ದಾರೋ ಅವರ ಮೇಲೆ ಸೂಕ್ತ ಕ್ರಮ ಕೂಡಲೆ ಕೈಕೊಳ್ಳಬೇಕೆಂದು ನಮ್ಮ ಮಂತ್ರಿಗಳಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

ಇನ್ನೊಂದು ವಿಚಾರ ಹೇಳುವುದೇನೆಂದರೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಕೊಡಗು ಈ ಪ್ರಾಂತದಲ್ಲಿ ವರ್ಷಕ್ಕೆ ಸುಮಾರು 200 ಇಂಚು ಮಳೆಯಾಗುವುದು. ಇಂಥ ಪ್ರದೇಶದಲ್ಲಿ ಮೆಟಲಿಂಗ್ ರಸ್ತೆ ಮಾಡಿದರೆ ಮಳೆಗಾಲದ ನಂತರ ಅದು ಹಾಳಾಗಿ ಮತ್ತೆ ಆ ರಸ್ತೆಗೆ ಹೆಚ್ಚು ಖರ್ಚುಮಾಡಬೇಕಾಗುವುದು. ಆದುದರಿಂದ ಸಲಹೆ ಮಾಡುವುದು ಈ ಪ್ರದೇಶದಲ್ಲಿ ಎಲ್ಲಿ 200 ಇಂಚು ಮಳೆಯಾಗುವುದೋ ಅಂಥ ಕಡೆ ರಸ್ತೆಗೆ ಬ್ಲ್ಯಾಕ್‌ಟಾಪ್ ಮಾಡಿದರೆ ಬಹಳ ಎಕನಾಮಿಕಲ್ ಆಗುವುದು ಎಂದು ಸಲಹೆಮಾಡುತ್ತೇನೆ.

ಇನ್ನೊಂದು ವಿಚಾರ. ನಮ್ಮ ಮೈಸೂರು ರಾಜ್ಯದ ಕರಾವಳಿ ಸಾಧಾರಣವಾಗಿ 200 ಮೈಲಿ ಉದ್ದವೇ ಇದೆ ಅಲ್ಲಿ 21 ಬಂದರುಗಳಿವೆ. ಆದರೆ ನಮ್ಮಲ್ಲಿ ಡೀಪ್ ಸೀ ಹಾರ್ಬರ್ ಇಲ್ಲದಿರುವುದು ಶೋಚನೀಯ ವಿಚಾರ. ಇದರ ಅಗತ್ಯ ನಮ್ಮ ರಾಜ್ಯದಲ್ಲಿ ಬಹಳವಾಗಿದೆ.

ಇದು ಗೊತ್ತಿರುವ ವಿಷಯ. ನಮ್ಮ ದೇಶದ ಕೈಗಾರಿಕೆಗಳ ಬೆಳವಣಿಗೆಗೆ ಇದು ನಾಂದಿಯಾಗಿದೆ. ಇದನ್ನು ಮಂಗಳೂರಿನಲ್ಲಿ ಮಾಡಬೇಕು. ನಮ್ಮ ಇಂಡಿಯಾ ಸರಕಾರ ಈಗಾಗಲೇ ಮಂಗಳೂರು ಬಂದರಿನ ಕೆಲಸ ಮಾಡುತ್ತಿದೆ. ಆದಷ್ಟು ಬೇಗ ಈ ಡೀಪ್ ಸೀ ಹಾರ್ಬರ್ ಆಗುವ ಹಾಗೆ ಕೇಂದ್ರ ಸರಕಾರದ ಮೇಲೆ ಒತ್ತಾಯ ಮಾಡಬೇಕು ಎಂದು ವಿನಂತಿ ಮಾಡುತ್ತೇನೆ. ನನಗೆ ತಿಳಿದಮಟ್ಟಿಗೆ ಮಂಗಳೂರು ಬಂದರು ನಮ್ಮ ರಾಜ್ಯದ ಪಶ್ಚಿಮದ ಹೆಬ್ಬಾಗಿಲು. ಅಷ್ಟೇ ಅಲ್ಲ, ಇಂಡಿಯಾ ದೇಶದ ಪಶ್ಚಿಮದ ಹೆಬ್ಬಾಗಿಲು ಕೂಡ ಆಗಿದೆ. ಈ ಹೆಬ್ಬಾಗಿಲನ್ನು ಈಗ 30 ಅಡಿ ಡ್ರಾಫ್ಟ್‌ಗೆ ನಿಲ್ಲಿಸಬೇಕೆಂಬ ಆಲೋಚನೆ ಇದೆ. ಆದರೆ ಹೀಗೆ ಅಷ್ಟಕ್ಕೆ ನಿಲ್ಲಿಸಬಾರದು. ಹಾಗೆ ನಿಲ್ಲಿಸಿದರೆ ನಮ್ಮ ರಾಜ್ಯಕ್ಕೆ ಉಪಯೋಗವಾಗುವುದಿಲ್ಲ. ಆದುದರಿಂದ ಈ ಬಂದರನ್ನು ಮೊದಲು ಯೋಚಿಸಿದ್ದ ಹಾಗೆ, ಯೋಜನೆಯಲ್ಲಿ ಮೊದಲಿದ್ದ ಹಾಗೆ 50 ಅಡಿ ಡ್ರಾಫ್ಟ್ ಮಾಡಿದರೆ, ಅದಕ್ಕೆ ಫೌಂಡೇಷನ್ ಹಾಕಿದರೆ ಅನುಕೂಲವಾಗುವುದು, ಹಾಗೆ ಮಾಡಲು ಒತ್ತಾಯ ಮಾಡಬೇಕು ಎಂದು ಸಚಿವರಲ್ಲಿ ವಿನಂತಿ ಮಾಡುತ್ತೇನೆ. ಈಗ ಮಂಗಳೂರು ಬಂದರಿನಲ್ಲಿ 39 ಅಡಿ ಡ್ರ್ಯಾಫ್ಟ್‌ಗೆ ಬೇಕಾದ ದೊಡ್ಡ ಹಡಗು ಇವೆ. ಮುಂದೆ ಮಂಗಳೂರು ಸರ್ವಋತು ಬಂದರಾದ ಮೇಲೆ ಈಗ ಬರುವ ಹಡಗುಗಳು ಕೂಡ ಮಂಗಳೂರಿಗೆ ಬರುವುದಕ್ಕಾಗುವುದಿಲ್ಲವೆಂದು ಹೇಳಿದರೆ ಹಾಸ್ಯಾಸ್ಪದವಾಗುವುದು. ಈಗ ಇಡೀ ಜಗತ್ತಿನಲ್ಲಿ ಸಣ್ಣಸಣ್ಣ ಹಡಗುಗಳನ್ನು ನಿಲ್ಲಿಸುತ್ತಿದ್ದಾರೆ. ನಮ್ಮ ದೇಶದಲ್ಲೂ ದೊಡ್ಡ ದೊಡ್ಡ ಹಡಗುಗಳನ್ನು ಕಟ್ಟುತ್ತಾ ಇದ್ದಾರೆ. ಆದುದರಿಂದ ದೊಡ್ಡ ದೊಡ್ಡ ಹಡಗುಗಳನ್ನು ನಮ್ಮ ದೇಶದಲ್ಲಿ ಕಟ್ಟಿದರೂ ಈ ಬಂದರಿಗೆ ಅವು ಬಾರದಿದ್ದರೆ ಅದು ಶೋಚನೀಯವಾದ ವಿಚಾರವೆಂದು ಹೇಳಬೇಕು. ನಮ್ಮ ಸರಕಾರದವರು ಇದನ್ನು ಗಮನಿಸಿ ಮಂಗಳೂರು ಬಂದರಿಗೆ 50 ಫೀಟ್ ಡ್ರ್ಯಾಫ್ಟ್ ಹಾಕಿ ವಾರ್ ಫುಟಿಂಗ್‌ನಲ್ಲಿ ಡೀಪ್‌ಸೀ ಬಂದರನ್ನು ಮಾಡುವಂತೆ ಸರ್ವ ಪ್ರಯತ್ನ ಮಾಡಬೇಕೆಂದು ಸಲಹೆಮಾಡುತ್ತೇನೆ.

ಇತ್ತೀಚೆಗೆ ಕುದುರೆ ಮುಖದಲ್ಲಿ ಬಹಳ ದೊಡ್ಡ ಪ್ರಮಾಣದ ಕಬ್ಬಿಣದ ಅದುರು ಇದೆ ಎಂದು ತಿಳಿದು ಮ್ಯಾಗ್ನಟೈಟ್ ಓರನ್ನು ಇಂಡಿಯಾದೇಶದಿಂದ ಹೊರಕ್ಕೆ ರಫ್ತು ಮಾಡುವುದಕ್ಕೆ ಒಂದು ಯೋಜನೆ ಮಾಡಿದ್ದಾರೆ. ಈಗಿರುವ ಯೋಜನೆಯ ಪ್ರಕಾರ ಕುದುರೆಮುಖದ ಅದುರನ್ನು ಪೈಪ್ ಮೂಲಕ ಕುದುರೆಮುಖದಿಂದ ಸಾಗಿಸಿ, ಸಮುದ್ರದಲ್ಲಿ ಹತ್ತು ಮೈಲಿ ಸ್ಲರಿ ಕ್ಯಾರಿಯರ್ ಮೂಲಕ ಸಾಗಿಸಿ ಜಪಾನ್, ಅಮೇರಿಕ ಮುಂತಾದ ಕಡೆಗಳಿಗೆ ಕಳಿಸುವ ಯೋಜನೆ ಮಾಡಬೇಕು. ಈ ಯೋಜನೆ ದೇಶದ ಹಿತದೃಷ್ಟಿಯಿಂದ ಒಳ್ಳೆಯದು. ಹಾಗೆ ಮಾಡದಿದ್ದರೆ ನಮ್ಮ ಬಂದರಿನಿಂದ ಅಭಿವೃದ್ಧಿ ವಿಚಾರದಲ್ಲಿ ಅನುಕೂಲವಾಗಲು ಸಾಧ್ಯವಿಲ್ಲ. ಇಂಥ ಒಂದು ಯೋಜನೆ ಕಾರ್ಯಗತವಾದರೆ ನಮ್ಮ ಕುದುರೆ ಮುಖದ ಓರ್ ಸುಲಭವಾಗಿ ರಫ್ತಾಗುವುದು. Japan will monopolise the entire export of Iron ore from kudremukh. ಹೀಗೆ ಮಾಡದಿದ್ದರೆ

ನಮ್ಮ ದೇಶದ ಕಬ್ಬಿಣದ ಅದಿರು ಸರಿಯಾಗಿ ಮಾರಾಟವಾಗುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ಈ ಅನಾಹುತವನ್ನು ತಪ್ಪಿಸಬೇಕು. We should not lay all the eggs in one basket. ಅದಿರನ್ನು ಸಾಗಿಸಲು ನಾನು ತಿಳಿಸಿದಂತೆ ಮಾಡಲು ನಮ್ಮ ಸರಕಾರ ಕೇಂದ್ರ ಸರಕಾರವನ್ನು ಒತ್ತಾಯಮಾಡಬೇಕು. ಮಂಗಳೂರಿನಲ್ಲಿ ಪೆಲೆಟೈಸೇಷನ್ ಪ್ಲಾಂಟ್ ಸ್ಥಾಪನೆ ಮಾಡಿ ಅದರ ಮೂಲಕ ಅದಿರನ್ನು ಪ್ಯಾಲಟೈಜ್ ಮಾಡಿ ಬೇರೆ ಬೇರೆ ದೇಶಗಳಿಗೆ ರಫ್ತು ಮಾಡುವ ಯೋಜನೆ ಮಾಡಬೇಕು. ಇದರಿಂದ ಬಂದರು ಅಭಿವೃದ್ಧಿಯಾಗುವುದಕ್ಕೂ ಅನುಕೂಲವಾಗುವುದು ಮತ್ತು ಷಿಪ್ ಇಂಡಸ್ಟ್ರಿಗೂ ಉತ್ತೇಜನ ಕೊಟ್ಟಂತಾಗುತ್ತದೆ. ಪ್ಯಾಲಟೈಜೇಷನ್ ಪ್ಲಾಂಟನ್ನು ಸ್ಥಾಪಿಸುವುದರಿಂದ ಸೆಲ್ಫ್ ರಿಲಯನ್ಸ್ ಎಂದೇನು ಸ್ಲೋಗನ್ ಇದೆ ಅದಕ್ಕೆ ಬೆಂಬಲ ಕೊಟ್ಟಂತಾಗುವುದು. ಇದರಿಂದ ಅನೇಕರಿಗೆ ಕೆಲಸ ಸಹ ಸಿಕ್ಕುವುದು. ಮಂಗಳೂರಿನಲ್ಲಿ ಒಂದು ಸ್ಟೀಲ್ ಪ್ಲಾಂಟನ್ನು ಸಹ ಕೊಡಬೇಕು ಎಂದು ಒತ್ತಾಯಮಾಡುತ್ತೇನೆ. ಮಂಗಳೂರಿನಲ್ಲಿ ಪ್ಯಾಲಟೈಜೇಷನ್ ಪ್ಲಾಂಟನ್ನು ಹಾಕಿ ಮಂಗಳೂರು ಬಂದರನ್ನು ವಯಬಲ್ ಯೂನಿಟ್ ಎಂದು ಮಾಡಬಹುದು. ಇದರಿಂದ ಅನುಕೂಲವಾಗುವುದರಿಂದ ಈ ವಿಚಾರದಲ್ಲಿ ಒತ್ತಾಯಮಾಡಬೇಕು.

ಮಂಗಳೂರು ಹಾರ್ಬರ್ ವಿಷಯ ಮಾತನಾಡುವಾಗ, ಅದನ್ನು ಇನ್ನೂ 50 ಅಡಿ ಆಳ ಮಾಡಬೇಕೆಂದು ಹೇಳುತ್ತೇನೆ. ಆ ರೀತಿ ಮಾಡುವುದರಿಂದ ಮಂಗಳೂರು ಹಿಂಟರ್ ಲ್ಯಾಂಡ್ ಡೆವಲಪ್ ಆಗುವುದಕ್ಕೆ ಅವಕಾಶ ಇದೆ. ಅದೂ ಅಲ್ಲದೆ when it is naturally built the industries of Bangalore, the capital of the State, could be legitimately oriented. ಈಗ ಏನಾಗಿದೆ ಎಂದರೆ ನಮ್ಮ ರಾಜ್ಯದ ಇಂಪೋರ್ಟ್ಸ್ ಮತ್ತು ಎಕ್ಸ್‌ಪೋರ್ಟ್ಸ್ ಮದ್ರಾಸ್, ಬೊಂಬಾಯಿ ಮತ್ತು ಗೋವಾ ಬಂದರದ ಮೂಲಕ ಮಾಡುತ್ತಾ ಇದ್ದೇವೆ. ಅದಕ್ಕಿಂತ ಎಕನಾಮಿಕಲ್ ಆಗಿ ಮಂಗಳೂರಿನ ಬಂದರಿನ ಮೂಲಕ—ಅದನ್ನು ಡೀಪ್ ಸೀಹಾರ್ಬರ್ ಆಗಿ ಮಾಡಿದ್ದೇ ಆದರೆ—ಮಾಡಲಿಕ್ಕೆ ಸಾಧ್ಯ ಉಂಟು. ಆದ್ದರಿಂದ ಇದನ್ನು ಮಾಡಬೇಕೆಂದು ಒತ್ತಾಯವಾಗಿ ಹೇಳಲಿಕ್ಕೆ ಇಷ್ಟಪಡುತ್ತೇನೆ. ಇನ್ನೊಂದು ನ್ಯಾಚ್ಯುರಲ್ ಹಾರ್ಬರ್ ನಮ್ಮಲ್ಲಿ ಇರತಕ್ಕದ್ದು ಮಲ್ಪೆ. ಇದನ್ನು ಷಿಪ್ ಬಿಲ್ಡಿಂಗ್ ಬಂದರನ್ನಾಗಿ ಮತ್ತು ಫಿಷಿಂಗ್ ಬಂದರನ್ನಾಗಿ ಮಾರ್ಪಡಿಸಲಿಕ್ಕೆ ಕೇಂದ್ರದ ಸಹಾಯವನ್ನು ಪಡೆದು ತ್ವರಿತಗತಿಯಿಂದ ಮಾಡಲು ಪ್ರಯತ್ನ ಮಾಡಬೇಕೆಂದು ಸಲಹೆಯನ್ನು ಕೊಟ್ಟು ನನಗೆ ಮಾತನಾಡಲು ಈ ಒಂದು ಸಂದರ್ಭವನ್ನು ಒದಗಿಸಿ ಕೊಟ್ಟದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತನು ಮುಗಿಸುತ್ತೇನೆ.

† ಶ್ರೀ ಕೆ. ಎನ್. ವೀರಪ್ಪಗೌಡ (ಶೃಂಗೇರಿ).—ಮಾನ್ಯ ಅಧ್ಯಕ್ಷರೇ, ನಾನು ಈ ದಿವಸ ಪಿ. ಡಬ್ಲ್ಯು. ಡಿ. ಮತ್ತು ಇತರ ಐಟಂಗಳು ಏನು ನಮ್ಮ ಮುಂದೆ ಬಂದಿವೆ ಇವನ್ನು ಸಂಪೂರ್ಣವಾಗಿ ಸ್ವಾಗತಿಸಿ ಪ್ರಾಮುಖ್ಯವಾಗಿರತಕ್ಕ ಕೆಲವು ವಿಷಯಗಳನ್ನು ಮಾನ್ಯ ಪಿ. ಡಬ್ಲ್ಯು. ಡಿ. ಮಂತ್ರಿಗಳ ಗಮನಕ್ಕೆ ತರಬೇಕೆಂದು ಇಚ್ಛೆಪಟ್ಟಿದ್ದೇನೆ. ಇದರಲ್ಲಿ ಮುಖ್ಯವಾಗಿ ತಿಳಿದುಕೊಳ್ಳಬೇಕಾಗಿರತಕ್ಕ ಒಂದು ಪ್ರಶ್ನೆ ಇದೆ. ಕಂಟ್ರಾಕ್ಟ್ ಕೊಡತಕ್ಕ ವಿಷಯದಲ್ಲಿ ಶ್ರೀಮಾನ್ ಚನ್ನಬಸಪ್ಪನವರು ಹಿಂದೆ ಮಂತ್ರಿಗಳಾಗಿದ್ದಾಗಲೋ ಯಾವಾಗಲೋ ಸರಿಯಾಗಿ ನನಗೆ ನೆನಪಿಲ್ಲ ಸಾಲ್ವೆನ್ಸಿ ಸರ್ಟಿಫಿಕೇಟು, ಇನ್‌ಕಂ ಟ್ಯಾಕ್ಸ್, ಸೇಲ್ಸ್ ಟ್ಯಾಕ್ಸ್ ಇತರ ಕ್ಲಿಯರೆನ್ಸ್ ಸರ್ಟಿಫಿಕೇಟುಗಳನ್ನು ಹಾಕಿದಂತಹವರಿಗೇ ಕಾಂಟ್ರಾಕ್ಟ್ ಕೊಡಬೇಕೆಂದು ಮಾಡಿದ್ದಾರೆ. ಇವತ್ತು ಸಮಾಜವಾದದ ಮಾತನ್ನು ಏನು ಆಡುತ್ತಾ ಇದ್ದೇವೆ ಅದಕ್ಕೆ ತದ್ವಿರುದ್ಧವಾದ ಕೆಲಸ ಆಗುತ್ತಾ ಇದೆ. ಫಸ್ಟ್ ಕ್ಲಾಸ್ ಕಂಟ್ರಾಕ್ಟರ್ ಆಗಬೇಕಾಗಿದ್ದರೆ ಯಾರು ಸಾಲ್ವೆನ್ಸಿ ಮತ್ತು ಇತರ ಸರ್ಟಿಫಿಕೇಟುಗಳನ್ನು ಕೊಡುತ್ತಾನೋ ಅಂತಹವನಿಂದಲೇ ಸಾಧ್ಯ ಬಾಕಿಯವರೆಲ್ಲರೂ ಆತನ ಕೆಳಗೆ ಥರ್ಡ್ ಕ್ಲಾಸ್, ಫೋರ್ತ್ ಕ್ಲಾಸ್ ಕಂಟ್ರಾಕ್ಟರ್ಸ್ ಆಗಿ ಕೆಲಸ ಮಾಡಬೇಕು. ಕೆಲಸ ಇಲ್ಲದೇ ಬೇರೆ ಯಾವ ಅವಕಾಶಗಳೂ ಇಲ್ಲದೇ ಇರತಕ್ಕ ಒಂದು ಸಂದರ್ಭದಲ್ಲಿ ಅನೇಕ ಜನರಿಗೆ ಇದರಿಂದ ಬಹಳ ಅನಾನುಕೂಲವಾಗಿದೆ. ರಿಜಿಸ್ಟ್ರೇಷನ್ ಆಗಿರಬೇಕು, ಸಾಲ್ವೆನ್ಸಿ ಸರ್ಟಿಫಿಕೇಟ್ ತಹಸೀಲ್ದಾರರಿಂದ ತೆಗೆದುಕೊಂಡು ಹಾಕಿರಬೇಕು, ಇದರಿಂದ ಈ ಕಾಂಟ್ರಾಕ್ಟ್ ಸಿಕ್ಕುವವರೆಲ್ಲರೂ ಶ್ರೀಮಂತರು, ಕುಳಿತಲ್ಲೇ ಸಂಪಾದನೆ ಮಾಡುವುದಕ್ಕೆ ಅವಕಾಶವಾಗಿದೆ. ಇದನ್ನು ಮಾರ್ಪಾಡು ಮಾಡಿ ಸಣ್ಣ ಕಂಟ್ರಾಕ್ಟರುಗಳಿಗೂ ಕೂಡ ಒಂದು ಅವಕಾಶ ಮಾಡಿಕೊಡುವುದರ ಕಡೆಗೆ ಮಾನ್ಯ ಮಂತ್ರಿಗಳು ಗಮನ ಕೊಡಬೇಕೆಂದು ಹೇಳುತ್ತೇನೆ. ಒಂದು ಉದಾಹರಣೆಯನ್ನು ಕೊಡುವುದಾದರೆ ಚಿಕ್ಕಮಗಳೂರಿನಲ್ಲಿ ದಾಸರಹಳ್ಳಿ ಕೆರೆ ಅಂತ ಇದೆ, ಮೂರೂವರೆ ಲಕ್ಷದ್ದು ಹದಿನೈದು ಲಕ್ಷ ಆಯಿತು. ಇದು ನಡೆದದ್ದು ಹೇಗೆ ಎಂದರೆ ಯಾರು ಸರ್ಕಾರ ನಡೆಸುತ್ತಾ ಇದ್ದಾರೆ ಅವರ ಸಂಬಂಧಿಗಳು ಒಬ್ಬರು ಕಂಟ್ರಾಕ್ಟ್ ತೆಗೆದುಕೊಂಡು ಬೆಂಗಳೂರಿನಲ್ಲೇ ಕುಳಿತುಕೊಂಡು 35 ಪರ್ಸೆಂಟು ತಿಂದುಹಾಕಿದ್ದಾರೆ. ಅಲ್ಲಿ ನೀರು ಇದೆಯೋ ಇಲ್ಲವೋ ಎಂಬುದನ್ನು ವಿಚಾರ ಮಾಡಿಸಬೇಕು, ಅದೇ ರೀತಿ ಜಂಬದ ಹಳ್ಳಿ ವಿಷಯ ಕೂಡ ಹೇಳಿದ್ದ

(ಶ್ರೀ ಕೆ. ಎನ್. ವೀರಪ್ಪಗೌಡ)

ಇವುಗಳನ್ನೆಲ್ಲಾ ಕೂಡಲೇ ವಿಚಾರಣೆ ಮಾಡಿಸಿ, ಈ ರೀತಿ ಬರೇ ಒಂದು ಇನ್‌ಫ್ಲೂಯನ್ಸ್‌ಗೆ, ರೆಕಮಂಡೇಷನ್ ಮೇಲೆ ಕಾಂಟ್ರಾಕ್ಟ್ ಕೊಟ್ಟು ಕೆಲಸ ಮಾಡಿಸಿ ಸರಿಯಾಗಿ ಕೆಲಸ ನಡೆಸದೇ ಹೋದರೆ ಅದಕ್ಕೆ ಯಾರು ಹೊಣೆ ಅಂತ ನಿಗದಿ ಮಾಡುವುದು ಒಳ್ಳೆಯದು ಅದರಿಂದ ಅನುಕೂಲ ವಾಗುತ್ತದೆ. ಮತ್ತು ಸಣ್ಣ ಕಂಟ್ರಾಕ್ಟುದಾರರುಗಳಿಗೆ ಅನುಕೂಲವಾಗತಕ್ಕ ರೀತಿಯಲ್ಲಿ ಈ ಪದ್ಧತಿ ಯನ್ನು ಮಾರ್ಪಾಡು ಮಾಡಿ ಕೆಲಸ ಇಲ್ಲದೇ ಇರತಕ್ಕ ನಿರುದ್ಯೋಗಿಗಳಿಗೆ ಒಂದು ಅವಕಾಶ ಮಾಡಿ ಕೊಡಬೇಕೆಂದು ತಮ್ಮ ಮೂಲಕ ಪಿ. ಡಬ್ಲ್ಯು. ಡಿ. ಮಿನಿಸ್ಟರನ್ನು ಕೇಳಿಕೊಳ್ಳುತ್ತೇನೆ.

ಇನ್ನು ಮಲೆನಾಡಿನ ವಿಷಯದಲ್ಲಿ ಸ್ವಲ್ಪ ಮಾತನಾಡಬೇಕಾಗಿದೆ. ಮಲೆನಾಡಿನಲ್ಲಿ ಯಾವದೇ ಕೆಲಸ ಮಾಡಿದರೂ ಕೂಡ ಅದು ಖರ್ಚಿನ ಬಾಬು ಅಂತ ಯೋಚನೆ ಇಟ್ಟುಕೊಳ್ಳಬೇಕಾಗಿಲ್ಲ. ಮಲೆನಾಡಿನ ಅರಣ್ಯ ಸಂಪತ್ತು ಸುಮ್ಮನೆ ಹಾಳಾಗಿ ಹೋಗುತ್ತಾ ಇದೆ. ಸರಿಯಾದ ಕಮ್ಯೂನಿ ಕೇಷನ್ ಇಲ್ಲದೇ ಸಾಗುವಳಿಗೆ ಯೋಗ್ಯವಾಗಿರತಕ್ಕ ಭೂಮಿಯನ್ನು ಯಾರೂ ಸಾಗುವಳಿ ಮಾಡುತ್ತಾ ಇಲ್ಲ. ಇಂತಹ ಲಕ್ಷಾಂತರ ಎಕರೆ ಭೂಮಿ ಇದೆ ಎಂದು ಮೊನ್ನೆ ಗವರ್ನರ್‌ರವರ ಸ್ಟೇಟ್‌ಮೆಂಟಿನಲ್ಲಿ ಓದಿದೆ. ಮಲೆನಾಡು ಇಂಪ್ರೂವ್‌ಮೆಂಟ್ ಕಮಿಟಿ ಅಂತ ಇದೆ ಅದರ ಸಲಹೆ ಪ್ರಕಾರ ಮಲೆನಾಡಿನ ಇಂಪ್ರೂವ್‌ಮೆಂಟ್ ಮಾಡಬೇಕಾದ್ದು ಬಹಳ ಅಗತ್ಯ. ಆ ಡಿಸ್ಟ್ರಿಕ್ಟ್‌ಗೆ ಜಾಸ್ತಿ ಆಯಿತು, ಈ ಡಿಸ್ಟ್ರಿಕ್ಟ್‌ಗೆ ಕಮ್ಮಿ ಆಯಿತು ಎಂಬ ಮನೋಭಾವವನ್ನು ಇಟ್ಟುಕೊಳ್ಳಬಾರದು. ಮಲೆನಾಡಿಗೆ ಎಷ್ಟು ಖರ್ಚು ಮಾಡಿದರೂ ಅಷ್ಟೇ ಅರಣ್ಯಸಂಪತ್ತು ಬರುತ್ತದೆ. ಹಾಳಾಗುವುದಿಲ್ಲ.

ಇನ್ನು ರಸ್ತೆಗಳನ್ನು ಟಾರ್ ಮಾಡುವ ವಿಷಯ ಮಾನ್ಯ ಸದಸ್ಯರು ಮಾತನಾಡಿದರು. ತಮಗೆ ಚೆನ್ನಾಗಿ ಗೊತ್ತಿದೆ ಮಲೆನಾಡಿನಲ್ಲಿ ಕನ್‌ಸಾಲಿಡೇಷನ್ ಮಾಡಿ ಒಂದು ವರ್ಷ ಬಿಟ್ಟರೆ ಅದು ಪುನಃ ಯಾವ ಪ್ರಯೋಜನಕ್ಕೂ ಬರದೆ ಹೊಸದಾಗಿ ಕನ್‌ಸಾಲಿಡೇಷನ್ ಮಾಡಿ ಟಾರ್ ಮಾಡಬೇಕಾಗುತ್ತದೆ. ಆದ್ದರಿಂದ ಕನ್‌ಸಾಲಿಡೇಟ್ ಮಾಡಿ ಕೆಲವು ದಿವಸಗಳ ನಂತರ ಟಾರ್ ಮಾಡಿದರೆ ಆ ರಸ್ತೆ ಪರ್ಮನೆಂಟಾಗಿ ಉಳಿಯುತ್ತದೆ. ಮತ್ತು ಪುನಃ ಹಣ ಖರ್ಚು ಮಾಡಬೇಕಾಗುವುದಿಲ್ಲ. ಆ ರೀತಿ ಮಾಡುವುದಕ್ಕೆ ಹೆಚ್ಚಿನ ಗಮನ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಸಣ್ಣ ಮೋರಿ, ಸೇತುವೆಗಳ ವಿಷಯದಲ್ಲಿ ಹೇಳುವುದಾದರೆ, ಅವುಗಳನ್ನು ಮಾಡದೆ ರಸ್ತೆಗಳು ದುಸ್ಥಿತಿಗೆ ಬರುತ್ತಾ ಇವೆ. ತಮ್ಮ ಗವರ್ನ್‌ಮೆಂಟ್ ಆರ್ಡರ್ ಪ್ರಕಾರ ತಾಲ್ಲೂಕು ಬೋರ್ಡಿನವರು 50 ಪರ್ಸೆಂಟ್ ಕೊಡಬೇಕೆಂದು ಇದೆ. ಅವರಿಂದ ಒಂದು ರಸ್ತೆ ಮಾಡುವುದಕ್ಕೆ ಸಾಧ್ಯವಿಲ್ಲ ಅಂದ ಮೇಲೆ ಸೇತುವೆಗೆ 50 ಪರ್ಸೆಂಟ್ ಕೊಡಿ ಎಂದರೆ ಸಾಧ್ಯವೇ ? ಆದ್ದರಿಂದ ಆ ಆರ್ಡರನ್ನೂ ಕೂಡ ತಾವು ವಿತ್‌ಡ್ರಾ ಮಾಡಿಕೊಳ್ಳದಿದ್ದರೆ ತಾವು ಏನು ರಸ್ತೆಗಳನ್ನು ಮಾಡುತ್ತೀರಿ ಅವು ಯಾವ ಪ್ರಯೋಜನಕ್ಕೂ ಬರುವುದಿಲ್ಲ ಎಂಬುದನ್ನು ತಮ್ಮ ಗಮನಕ್ಕೆ ತಂದು ಆ ಬಗ್ಗೆ ಸಾಕಾದಷ್ಟು ಹೆಚ್ಚಿನ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ಹೇಳುತ್ತೇನೆ.

ಇನ್ನು ಸರ್ಕ್ಯೂಟ್ ಹೌಸ್‌ಗಳ ಬಗ್ಗೆ ನಾನು ಎಸ್ಟಿಮೇಟ್ ಕಮಿಟಿ ಮೆಂಬರಾಗಿದ್ದೆ, ಆಗಲೂ ಕೂಡ ಹೇಳಿದ್ದೇನೆ. ಮತ್ತು ಅನೇಕ ಕಡೆ ಹೊಸ ಮೈಸೂರಿನ ಭಾಗಗಳಲ್ಲಿ ಹೋಗಿ ನೋಡಿದ್ದೇನೆ. ಅಲ್ಲಿ ಈ ಸರ್ಕ್ಯೂಟ್ ಹೌಸ್‌ಗಳನ್ನು ಬಹಳ ಚೆನ್ನಾಗಿ ಕಟ್ಟಿದ್ದಾರೆ. ಅದೇ ಹಳೇ ಮೈಸೂರಿನಲ್ಲಿ ಹಳೇ ಕಾಲದ ಕಟ್ಟಡಗಳು ಬಂಗಲೆಗಳು ಎಂದು ಏನು ಹೇಳುತ್ತೇವೆ ಅವನ್ನೇ ರಿಪೇರಿ ಮಾಡಿ ಇಟ್ಟು ಕೊಂಡಿರುವುದನ್ನು ನೋಡುತ್ತಾ ಇದ್ದೇವೆಯೇ ಹೊರತು ಅವಶ್ಯಕತೆಗೆ ತಕ್ಕಂತೆ ಮಾಡಿಲ್ಲ ಎಂದು ಹೇಳುತ್ತೇನೆ. ಆದಷ್ಟು ಜಾಗ್ರತೆ ಈ ಕಡೆಗೆ ಗಮನ ಕೊಟ್ಟು ಈಗಿರತಕ್ಕ ಸ್ಥಿತಿಯನ್ನು ಸರಿಪಡಿಸ ಬೇಕೆಂದು ಹೇಳುತ್ತೇನೆ. ಶ್ರಿಂಗೇರಿ ತಾಲ್ಲೂಕು ಆಫೀಸು ಬಿಲ್ಡಿಂಗ್ ಇದೆ. ಹಳೇ ಕಾಲದ ಬಿಲ್ಡಿಂಗ್, ತಾಲ್ಲೂಕು ಆಫೀಸು, ಟ್ರಜರಿ ಪ್ರತಿಯೊಂದೂ ಅಲ್ಲೇ ನಡೆಯಬೇಕು. ಈ ವಿಷಯದಲ್ಲಿ ಸಾಕಾದಷ್ಟು ತಮ್ಮ ಗಮನಕ್ಕೆ ತಂದು ಆಗಿದೆ. ಆದಷ್ಟು ಜಾಗ್ರತೆ ಇದಕ್ಕೆ ಸರಿಯಾದ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ.

ಮಾನ್ಯ ಸ್ನೇಹಿತರು ಹೇಳುತ್ತಾ ಇದ್ದರು ಯಾವ ಯಾವ ಭಾಗದ ಮಂತ್ರಿಗಳು ಇದ್ದಾರೋ ಅವರು ಆಯಾ ಭಾಗದ ಕೆಲಸಗಳನ್ನೇ ಹೆಚ್ಚಾಗಿ ತೆಗೆದುಕೊಳ್ಳುತ್ತಾರೆ ಎಂದು. ಉದಾಹರಣೆಗೆ ರಸ್ತೆಗಳನ್ನು ತೆಗೆದುಕೊಂಡರೆ ಹಾಸನದಲ್ಲಿ 175 ಮೈಲಿ ತೆಗೆದುಕೊಂಡಿದ್ದಾರೆ, ಚಿಕ್ಕಮಗಳೂರಿನಲ್ಲಿ 74 ಮೈಲಿ ತೆಗೆದುಕೊಂಡಿದ್ದಾರೆ. ಹಾಸನಕ್ಕೂ, ಚಿಕ್ಕಮಗಳೂರಿಗೂ ಇರತಕ್ಕ ವ್ಯತ್ಯಾಸವೇನು ? ಚಿಕ್ಕಮಗಳೂರು ಇಂಟೀರಿಯರ್ ಮಲೆನಾಡು ಎಂದು ಗೊತ್ತಿದ್ದರೂ ಕೊಪ್ಪ ತಾಲ್ಲೂಕಿನಲ್ಲಿ ಒಂದು ರಸ್ತೆಯನ್ನೂ ಕೂಡ ಪಿ. ಡಬ್ಲ್ಯು. ಡಿ. ನವರು ತೆಗೆದುಕೊಂಡಿಲ್ಲ. ಆದ್ದರಿಂದ ಈ ರೂರಲ್

ಕಮ್ಯೂನಿಕೇಷನ್ ರೋಡ್ಸ್‌ನ್ನು ಮಾಡುವುದರ ಕಡೆಗೆ ಸ್ವಲ್ಪ ಹೆಚ್ಚಿನ ಗಮನವನ್ನು ಕೊಟ್ಟು ಮಲೆನಾಡಿನ ಅಭಿವೃದ್ಧಿಗೆ ಅನುಕೂಲ ಮಾಡಿಕೊಡಬೇಕೆಂದು ತಮ್ಮ ಮೂಲಕ ಸರ್ಕಾರದವರಿಗೆ ವಿನಂತಿ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಜೈ ಹಿಂದ್.

2-00 P.M.

† ಶ್ರೀ ಕೆ. ಯಂಕಪ್ಪ (ಶಿಕಾರಿಪುರ)—ಸನ್ಮಾನ್ಯ ಅಧ್ಯಕ್ಷಿಣಿಯವರೇ, ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್‌ಗೆ ಖರ್ಚು ಮಾಡತಕ್ಕಂಥ ಒಂದು ಹಣದ ಮುಂಗಡದ ಕೇಳಿಕೆಯನ್ನು ನಾನು ಪೂರ್ಣವಾಗಿ ಸ್ವಾಗತಿಸಿ ನನಗೆ ತಿಳಿದಿರತಕ್ಕಂಥ ವಿಚಾರದಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿರ ತಕ್ಕಂಥ ತೊಂದರೆಗಳನ್ನು ಮಾನ್ಯ ಮಂತ್ರಿಗಳ ಮುಂದೆ ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಶ್ರೀಮಾನ್ ವೀರಪ್ಪಗೌಡರು ಮಲೆನಾಡಿನ ಬಗ್ಗೆ ಸಾಕಷ್ಟು ರೀತಿಯಲ್ಲಿ ಹೇಳಿದ್ದಾರೆ. ನಾನು ನನ್ನ ಕಾನ್ಸಿಟ್ಯೂಯನ್ಸಿಗೆ ಸೇರಿದ ಒಂದೆರಡು ಅಂಶಗಳನ್ನು ಮಾತ್ರ ಹೇಳುತ್ತೇನೆ. ಮೊದಲನೆಯ ದಾಗಿ ನನ್ನ ಕಾನ್ಸಿಟ್ಯೂಯನ್ಸಿಗೆ ಸೇರಿದ ಬೆಳಕನಹಳ್ಳಿ ಪ್ರಾಜೆಕ್ಟ್‌ಗೆ 4 ಲಕ್ಷ ಚಿಲ್ಲರೆ ಎಸ್ಟಿಮೇಟ್ ಆಗಿದೆ. 1969-70ರ ಆಯವ್ಯಯ ಪುಸ್ತಕದಲ್ಲಿ ಅದರ ಹೆಸರು ಇತ್ತೇ ವಿನಃ ಕೆಲಸ ಮಾತ್ರ ಪ್ರಾರಂಭವಾಗಲಿಲ್ಲ. ಇದರ ಬಗ್ಗೆ ಯಾವ ಒಂದು ಸೂಚನೆಯನ್ನೂ ತೋರಿಸಿಲ್ಲ. ಇದನ್ನು ನೋಡಿದರೆ ಶ್ರೀಮಾನ್ ವೀರಪ್ಪಗೌಡರು ಹೇಳಿದ ಹಾಗೆ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್‌ನವರು ರೋಡುಗಳ ಕೆಲಸವನ್ನು ತೆಗೆದುಕೊಳ್ಳಬೇಕಾದರೆ ಮಳೆಗಾಲದಲ್ಲಿ ಪ್ರಾರಂಭ ಮಾಡಿಸುತ್ತಾರೆ. ಆರೀತಿ ಮಳೆಗಾಲದಲ್ಲಿ ಪ್ರಾರಂಭ ಮಾಡಿದ ರೋಡುಗಳು ಅದು ಮಳೆಯಲ್ಲೇ ಕೊಚ್ಚಿಕೊಂಡು ಹೋಗಿ ಅನಂತರ ಅದಕ್ಕೆ ಪ್ಯಾಚ್ ಮಾಡುತ್ತಾರೆ. ಈ ಒಂದು ಇಲಾಖೆಯಲ್ಲಿ ಆರೀತಿ ಹಣ ವೆಚ್ಚ ಮಾಡಿದರೆ ಯಾವರೀತಿಯಾಗಿಯೂ ಉಳಿಸಲಿಕ್ಕೆ ಸಾಧ್ಯವಿಲ್ಲ. ಆದುದರಿಂದ ಮಲೆನಾಡಿನಲ್ಲಿ ರಸ್ತೆ ಕಾಮಗಾರಿಗಳ ಕೆಲಸವನ್ನು ಮಾಡಿಸಿದರೆ ತಕ್ಷಣವೇ ಕೊಚ್ಚಿಕೊಂಡು ಹೋಗುವುದರಿಂದ ಅದಕ್ಕೆ ಆಸ್ಫಾಲ್ಟ್ ರೋಡನ್ನು ಮಾಡಿಸಬೇಕು ಎಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಇರ್ರಿಗೇಷನ್ ಬಗ್ಗೆ ಹೇಳುವುದಾದರೆ ಅಂಜನಾಪುರ ರಿಸರ್ವಾಯರ್‌ನಲ್ಲಿ ಸ್ವಲ್ಪ ಹಣ ಖರ್ಚುಮಾಡಿದರೂ ಕೂಡ ಸುಮಾರು 10 ಸಾವಿರ ಎಕರೆ ನೀರಾವರಿ ಆಗುತ್ತದೆ. ಅದಕ್ಕೆ ಇನ್ನೊತ್ತು ಹೆಚ್ಚು ಹಣವನ್ನು ಒದಗಿಸಿದರೆ 22 ಸಾವಿರ ಎಕರೆಗೆ ನೀರಾವರಿ ಕೊಡತಕ್ಕಂಥ ರಿಸರ್ವಾಯರ್. ಆದುದರಿಂದ ಸರ್ಕಾರದವರು ಇಲ್ಲಿ ತಜ್ಞ ಇಂಜನೀಯರ್‌ಗಳನು ಕಳುಹಿಸಿ ವಿಚಾರ ಮಾಡಿ ಇದಕ್ಕೆ ಹಣ ಖರ್ಚು ಮಾಡಿದರೆ ಇದರಿಂದ ಬರತಕ್ಕ ಆದಾಯ ಎಷ್ಟು ಎಂದು ಪರಿಶೀಲಿಸುವುದಾದರೆ ಅದು ಕಡಿಮೆ ಖರ್ಚಿನಲ್ಲಿಯೇ ಆಗಿ ಹೆಚ್ಚು ಉತ್ಪನ್ನ ಕೊಡುತ್ತದೆ. ಇದು ಬಹಳ ಉತ್ತಮವಾದ ಯೋಜನೆ. ನಾನು ಇದರ ಬಗ್ಗೆ ತಜ್ಞ ಇಂಜನೀಯರುಗಳಿಗೆ ಸವಾಲು ಮಾಡುತ್ತೇನೆ. ಏತಕ್ಕೆಂದರೆ ಮೈಸೂರು ರಾಜ್ಯದಲ್ಲಿ ಎಕನಾಮಿಕ್ ಆಗಿ ಈ ಯೋಜನೆ ಮಾಡು ವುದಾದರೆ ಮಿಕ್ಕೆಲ್ಲ ಯೋಜನೆಗಳಿಗಿಂತ ಇದು ಕಡಿಮೆ ಖರ್ಚಿನಲ್ಲಿ ಆಗುತ್ತದೆ ಎಂದು ಹೇಳುತ್ತೇನೆ. ಆದರೆ ತಜ್ಞ ಇಂಜನಿಯರುಗಳು ಇದರ ಬಗ್ಗೆ ರಿಪೋರ್ಟ್ ಬರೆದು ಕಳುಹಿಸಬೇಕಾದರೆ ಇದು ಹಾಗಾಗುತ್ತದೆ, ಅದು ಹೀಗಾಗುತ್ತದೆ, ಇದು ಫೀಸಬಲ್ ಅಲ್ಲ ಎಂದು ರಿಪೋರ್ಟ್ ಬರೆಯು ವುದಾದರೆ ಪ್ರಯೋಜನವಿಲ್ಲ. ಆದುದರಿಂದ ಮಾನ್ಯ ಮಂತ್ರಿಗಳು ಇದರ ಬಗ್ಗೆ ಗಮನ ತೆಗೆದು ಕೊಂಡು 2 ವರ್ಷದಲ್ಲಿ ಈ ಕಾರ್ಯವನ್ನು ಮುಗಿಸಕೊಡಬೇಕೆಂದು ಹೇಳುತ್ತೇನೆ.

ಇನ್ನು ಅಂಬಲಹೊಳೆ ಜಲಾಶಯದ ಬಗ್ಗೆ ಹೇಳುವುದಾದರೆ ಇದರಲ್ಲೂ ಅಷ್ಟೆ ತಕ್ಷಣವಾಗಿ ಕೆಲಸ ವನ್ನು ತೆಗೆದುಕೊಂಡರೆ ಒಂದು ಸಾವಿರ ಎಕರೆಗೆ ನೀರಾವರಿಯಾಗುತ್ತದೆ. ಇದರಿಂದ ಸಂಪೂರ್ಣ ವಾಗಿ ನೀರನ್ನು ಒದಗಿಸಿ ಕೊಡುವುದಾದರೆ 5-6 ಸಾವಿರ ಎಕರೆಗೆ ನೀರಾವರಿಯಾಗುತ್ತದೆ. ಇದರ ಬಗ್ಗೆಯೂ ಕೂಡ ತಜ್ಞ ಇಂಜನೀಯರುಗಳನ್ನು ಕಳುಹಿಸಿ ಅವರ ರಿಪೋರ್ಟ್ ಬಂದ ಮೇಲೆ ಮಾಡುತ್ತೇವೆ ಎಂದು ಹೇಳಿದರೆ ಪ್ರಯೋಜನವಿಲ್ಲ. ಅವರು ಇದರಲ್ಲಿ ಹಾಗೆ ಇದೆ, ಹೀಗೆ ಇದೆ ಎಂದು ರಿಪೋರ್ಟ್ ಬರೆದು ಕಳುಹಿಸಿದರೆ ಪ್ರಯೋಜನವಿಲ್ಲ. ಆದುದರಿಂದ ನಾನು ನೌಕರ ವರ್ಗದ ವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಏನೆಂದರೆ ಅವರು ಯಾರೇ ಇರಲಿ, ಎಲ್ಲೇ ಇರಲಿ ಇದರ ಬಗ್ಗೆ ಸರಿಯಾದ ರೀತಿಯಲ್ಲಿ ರಿಪೋರ್ಟ್ ಬರೆದು ಕಳುಹಿಸಿದರೆ ತಮ್ಮ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸುತ್ತಾರೆ ಎಂದು ಹೇಳುತ್ತೇನೆ.

(ಶ್ರೀ ಕೆ. ಯಂಕಪ್ಪ)

ಇನ್ನು ಕಲ್ಲುಕುಟ್ಟಿ ಪ್ರಾಜೆಕ್ಟ್ ಬಗ್ಗೆ ಮಾನ್ಯ ಮಂತ್ರಿಗಳಿಗೆ ಈಗಾಗಲೇ ತಿಳಿಸಿದ್ದೇನೆ. ಇದಕ್ಕೆ 1956ನೇ ಇಸವಿಯಲ್ಲಿ 51.8 ಲಕ್ಷಕ್ಕೆ ಅಂದಾಜು ಆಗಿ ಅದರ ರಿಪೋರ್ಟ್ ಸರ್ಕಾರಕ್ಕೆ ಬಂದಿದೆ. ಸರ್ಕಾರ ಇದಕ್ಕೆ ಹಣ ಇಲ್ಲ ಎಂದು ವಾಪಸ್ ಕಳುಹಿಸಿದ್ದಾರೆ. ಸರ್ಕಾರದವರ ಹತ್ತಿರ ಆ ವರ್ಷ ಹಣ ಇಲ್ಲದೇ ಹೋಗಿದ್ದರೆ ಮಾರನೆಯ ವರ್ಷ ಆ ತಜ್ಞ ಇಂಜನೀಯರುಗಳು ರಿಪೋರ್ಟನ್ನು ಕಳುಹಿಸ ಬೇಕಾಗಿತ್ತು. 1966 ರಿಂದ 1972 ರವರೆಗೂ ಈ ರೀತಿ ಪೆಂಡಿಂಗ್ ಇರುವುದು ಬೇಕಾದಷ್ಟು ಇದೆ. ಆದುದರಿಂದ ನಾನು ಮಾನ್ಯ ಮಂತ್ರಿಗಳಲ್ಲಿ ಕಳಕಳಿಯಿಂದ ಹೇಳುತ್ತಿದ್ದೇನೆ. ಪಬ್ಲಿಕ್ ಡಿಪಾರ್ಟ್ ಮೆಂಟ್‌ಗೆ ಒಂದು ಲಂಪ್‌ಸಂ ಗ್ರ್ಯಾಂಟ್‌ಕೊಟ್ಟರೆ ಆ ಇಲಾಖೆಯವರು ಪ್ಯಾಚ್ ಮುಚ್ಚುವ ಕೆಲಸ ಮಾಡುತ್ತಾರೆ. ಈವೊತ್ತು ಚೀಫ್ ಇಂಜನೀಯರ್ ಆಫೀಸಿಗೆ ಹೋಗಿ ಇಂಥಾ ಕೆಲಸಕ್ಕೆ ಇಷ್ಟು ಬಡ್ಜೆಟ್ ಬಂದಿದೆ ಅದರ ವರದಿಯನ್ನು ಸರ್ಕಾರಕ್ಕೆ ಕಳುಹಿಸಿ ಕೊಡಿ ಎಂದು ಹೇಳಿದರೆ ಸರ್ಕಾರ ದಿಂದ ಆದೇಶ ಬರುವವರೆಗೂ ನಾವು ಕಳುಹಿಸುವ ಹಾಗೆ ಇಲ್ಲ ; ಎಂದು ಹೇಳುತ್ತಾರೆ. ಹಾಗಾದರೆ ಇವರು ಹೇಳಬೇಕು ಅವರು ಬರೆಯಬೇಕು ಎಂದರೆ ಇದರಲ್ಲಿ ಅರ್ಥವಿಲ್ಲ. ಆದುದರಿಂದ ಸರ್ಕಾರ ದವರು ಅವರಿಗೆ ಆದೇಶ ಕಳುಹಿಸಿಕೊಡಬೇಕು ಏನೆಂದರೆ ತಮಗೆ ಬಂದಿರತಕ್ಕಂಥ ಬಡ್ಜೆಟ್ಟನ್ನು ಓದಿ ಅದರ ಬಗ್ಗೆ ಸರ್ಕಾರಕ್ಕೆ ವರದಿಯನ್ನು ಕಳುಹಿಸಿ ಕೊಡಿ ಎಂದು. ಈ ಕೆಲಸವನ್ನು ಶೀಘ್ರವಾಗಿ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ನಮ್ಮ ಕಡೆ 6 ಪ್ರೈವೇಟ್ ಬಸ್ಸುಗಳು ಓಡಾಡುತ್ತಿವೆ. ಆ ಬಸ್ಸಿನ ಮಾಲೀಕರು ಕೇಳಿದರೆ ನಾವು ಸರ್ಕಾರಕ್ಕೆ ಕಟ್ಟಬೇಕಾದ ಟ್ಯಾಕ್ಸ್ ಏನು ಇದೆಯೋ ಅದನ್ನು ಒಂದು ವರ್ಷ ಬಿಟ್ಟು ಬಿಟ್ಟರೆ ನಾವೆ ಆ ಹಣದಿಂದ ಆಸ್‌ಫಾಲ್ಟ್‌ರೋಡ್ ಮಾಡಿಸಿ ಕೊಳ್ಳುತ್ತೇವೆ ಎಂದು ಹೇಳುತ್ತಾರೆ. ನಮ್ಮ ಕಡೆ ಇನ್ನೂ ಅಸ್‌ಫಾಲ್ಟ್ ರೋಡ್ ಆಗಿಲ್ಲ. ಅಲ್ಲದೆ ಯಾವ ರಸ್ತೆಗಳನ್ನೂ ಸಹ ಸರಿಯಾಗಿ ಮೆಂಟೇನ್ ಮಾಡಿಲ್ಲ. ಜೋಡಿ ಊರಿನಿಂದ ಷಿಕಾರಿಪುರಕ್ಕೆ ಹೋಗುವ ರಸ್ತೆಯನ್ನು ಇದೇ ವರ್ಷ ದಲ್ಲಿ ಆಸ್‌ಫಾಲ್ಟ್ ರೋಡ್ ಮಾಡಿಸಿ ಕೊಡಬೇಕು ಎಂದು ಹೇಳುತ್ತೇನೆ. ಮತ್ತು ಮಲೆನಾಡಿಗೆ ಸಾರಿಗೆ ಸಂಪರ್ಕದ ಬಗ್ಗೆ ಹೆಚ್ಚಿನ ಒಂದು ಸೌಲಭ್ಯವನ್ನು ಮಾಡಿಕೊಡಬೇಕು ಎಂದು ಹೇಳುತ್ತೇನೆ.

ಇನ್ನು ಶಿವಮೊಗ್ಗಾ ಜಿಲ್ಲೆಯಿಂದ ಬರುವ ಉತ್ಪನ್ನ ನನಗೆ ತಿಳಿದಮಟ್ಟಿಗೆ ಮತ್ತಾವ ಜಿಲ್ಲೆಯಲ್ಲೂ ಬರುವುದಿಲ್ಲ. ಇಷ್ಟೊಂದು ಉತ್ಪನ್ನ ಇದ್ದರೂ ಕೂಡ ಶಿವಮೊಗ್ಗಾ ಜಿಲ್ಲೆಯನ್ನು ಕಡೆಗಣಿಸಿರುವುದು ಏತಕ್ಕೆ ? ಕಾರಣ ಏನು ? ನಮ್ಮಲ್ಲಿ ಶರಾವತಿ ಇದ್ದು ನಮ್ಮ ಜಿಲ್ಲೆಯಲ್ಲಿರತಕ್ಕಂಥ ಹಳ್ಳಿಗಳಿಗೆ ವಿದ್ಯುಚ್ಛಕ್ತಿ ಸಿಕ್ಕುತ್ತಾ ಇಲ್ಲ ಎಂದರೆ ಬಹಳ ವಿಶಾದಪಡಬೇಕಾಗುತ್ತದೆ ಹಿಂದೆ ಮಾನ್ಯ ಮಂತ್ರಿಗಳನ್ನು ಭೇಟಿ ಆದಾಗ ಅವರು ಒಂದು ಆಶ್ವಾಸನೆ ಕೊಟ್ಟಿದ್ದರು. ನೀವು ಎಲೆಕ್ಟ್ರಿಸಿಟಿ ಬೋರ್ಡ್ ಛೇರ್ಮನ್‌ರವರನ್ನು ಹೋಗಿ ನೋಡಿ, ಅವರು ಮಾಡಿಕೊಡುತ್ತಾರೆ ಎನ್ನುವ ನಂಬಿಕೆ ನನಗೂ ಇದೆ, ಹೋಗಿ ನೋಡಿ ಎಂದು ಹೇಳಿದರು. ಅನಂತರ ಛೇರ್ಮನ್‌ರವರನ್ನು ಹೋಗಿ ಕೇಳಿದರೆ ನಾವು ಸೆಕ್ರೆಟರಿಯವರಿಗೆ ಒಂದು ಪತ್ರವನ್ನು ಬರೆದಿದ್ದೇನೆ, ಅದುವರೆಗೆ ಸ್ವಲ್ಪ ಕಾದು ನೋಡಿ ಎಂದು ಹೇಳಿದರು. He says you wait until futher communication. ನಾವು ಕೂಡ ಅವರು ಹೇಳಿದಂತೆ ಕಾದು ನೋಡಿದೆವು. ಒಂದು ವಾರ ಆಯಿತು, ಒಂದು ತಿಂಗಳು ಆಯಿತು, 1 ವರ್ಷ ಆಯಿತು, 5 ವರ್ಷವೂ ಆಯಿತು. ಕೊನೆಗೆ ಈ ಸದನ ಬಿಟ್ಟು ಹೋಗುವ ತನಕವೂ ಹೋಗಿ ಕೇಳಿದರೆ ನಾವು ಬರೆದು ತರಿಸಿಕೊಡುತ್ತೇವೆ ಎಂದು ಹೇಳಿದರೇ ವಿನಃ ಕೊನೆಯವರೆಗೂ ಬರಲಿಲ್ಲ. ಆದುದರಿಂದ ಮಾನ್ಯ ಮಂತ್ರಿಗಳು ಈಗಲಾದರೂ ಕೂಡಾ ಒಂದು ಸಬ್ ಟ್ರಾನ್ಸ್‌ಮಿಷನ್ ಲೈನ್ ಹಾಕಿ ಈ ಕಾರ್ಯವನ್ನು ಮುಗಿಸಿಕೊಡಬೇಕೆಂದು ಕೇಳಿಕೊಳ್ಳು ತ್ತೇನೆ.

ಇನ್ನು ಲಿಫ್ಟ್ ಇರಿಗೇಷನ್ ವಿಷಯ. ನಮ್ಮ ತಾಲ್ಲೂಕಿನಲ್ಲಿ 3 ಹೋಬಳಿಗಳು ಇವೆ. ಈಗ ವಿಶ್ವಬ್ಯಾಂಕ್‌ನಿಂದ ಬರತಕ್ಕಂಥ ಸೌಲಭ್ಯವನ್ನು ಉಪಯೋಗಿಸಿಕೊಂಡಾದರೂ ನಮ್ಮ ತಾಲ್ಲೂಕಿಗೆ ಸಾಕಷ್ಟು ಲಿಫ್ಟ್ ಇರ್ರಿಗೇಷನ್ ಸೌಲಭ್ಯಗಳನ್ನು ಒದಗಿಸಿ ಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ಇಷ್ಟು ಹೇಳಿ ಮಾನ್ಯ ಅಧ್ಯಕ್ಷರು ನನಗೆ ಮಾತನಾಡಲು ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಕೆ. ಎಚ್. ಹನುಮೇಗೌಡ (ಹಾಸನ).—ಸನ್ಮಾನ್ಯ ಅಧ್ಯಕ್ಷರೇ, ಕಾಮಗಾರಿ ಸಚಿವರು ಮಂಡಿಸಿರತಕ್ಕ ಬೇಡಿಕೆಯನ್ನು ನಾನು ವಿರೋಧಿಸಿ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಗ್ರಾಮಾಂತರ ಪ್ರದೇಶದ ಅಭಿವೃದ್ಧಿಗಾಗಿ ಅದರಲ್ಲೂ ಕೆರೆಗಳ ರಿಪೇರಿ ಮತ್ತು

ನಿರ್ಮಾಣ ಮತ್ತು ಗ್ರಾಮಾಂತರ ಪ್ರದೇಶಗಳ ರಸ್ತೆಗಳ ನಿರ್ಮಾಣ ಮತ್ತು ರಸ್ತೆಗಳ ರಿಪೇರಿ ಮಾಡುವ ಬಗ್ಗೆ ಸಾಕಷ್ಟು ಹಣವನ್ನು ಈ ಬೇಡಿಕೆಯಲ್ಲಿ ಒದಗಿಸದೇ ಇರುವುದರಿಂದ ನಾನು ಅದನ್ನು ವಿರೋಧಿಸಿ ಮಾತನಾಡುತ್ತೇನೆ.

ಸರ್ಕಾರಕ್ಕೆ ಬರತಕ್ಕ ಹೆಚ್ಚು ತೆರಿಗೆಗಳು ಗ್ರಾಮಾಂತರ ಪ್ರದೇಶದಿಂದ ಬರುತ್ತವೆ. ಬೇರೆ ಬಾಬುಗಳಿಂದ ಗ್ರಾಮಾಂತರ ಪ್ರದೇಶಕ್ಕೆ ಹೆಚ್ಚು ಅನುಕೂಲ ಮಾಡುವುದಕ್ಕೆ ಆಗದೆ ಹೋದರೂ ಕೂಡ, ಕಾಮಗಾರಿ ಸಚಿವರು ಮನಸ್ಸು ಮಾಡಿದರೆ ಹೆಚ್ಚಿನ ಅನುಕೂಲವನ್ನು ಕಲ್ಪಿಸಬಹುದಾಗಿತ್ತು. ದೇಶದಲ್ಲಿ ಅರ್ಧ ಭಾಗ ಪ್ರತಿ ವರ್ಷವೂ ಕೂಡ ಕ್ಷಾಮಕ್ಕೆ ಸಿಕ್ಕಿ ತೊಂದರೆಯಾಗುತ್ತಿದೆ. ಈ ಪ್ರದೇಶಕ್ಕೆ ದೊಡ್ಡ ದೊಡ್ಡ ಜಲಾಶಯಗಳಿಂದ ನೀರನ್ನು ಒದಗಿಸುವುದಕ್ಕೆ ಆಗುತ್ತಿಲ್ಲ. ಈ ಕಾರಣದಿಂದಲಾದರೂ ಕೂಡ ಕೊನೇ ಪಕ್ಷ ಹಳ್ಳಿಗಾಡಿನಲ್ಲಿರುವ ಕೆರೆಗಳ ರಿಪೇರಿ ಆದ್ಯತೆಯ ಮೇಲೆ ನಡೆಯಬೇಕಾಗಿದೆ. ಕಳೆದ 25 ವರ್ಷಗಳಿಂದ ಗ್ರಾಮಾಂತರ ಪ್ರದೇಶಗಳ ಕೆರೆಗಳ ರಿಪೇರಿ ನಡೆಯುತ್ತಿದೆಯಾದರೂ ಕೂಡ ಒಡೆದು ಹೋದ ಕೆರೆಗಳಲ್ಲಿ ಕಾಲು ಭಾಗ ಕೂಡ ರಿಪೇರಿ ಆಗಿಲ್ಲ. ಗ್ರಾಮಾಂತರ ಪ್ರದೇಶದಲ್ಲಿ ಮಳೆ ಇಲ್ಲದೆ ಹೋದಾಗ ತೊಂದರೆಯನ್ನು ಅನುಭವಿಸಿದರೂ ಕೂಡ ಜೀವ ಸಹಿತ ಇರಬೇಕಾದರೆ ಇಂಥ ಕೆರೆಗಳು ಅವಶ್ಯಕ. ಎರಡು ಮೂರು ಇಂಚು ಮಳೆ ಆದಾಗ ಕೆರೆಗಳಿಗೆ ನೀರು ಬರುತ್ತದೆ. ಕೆರೆ ಹಿಂದೆ ಇರತಕ್ಕ ಬಯಲಿನಲ್ಲಿ ಒಂದೆಕೆರೆ, ಅರ್ಧ ಎಕರೆ ಜಮೀನಿರತಕ್ಕ ರೈತರು ತಮ್ಮ ಜೀವನಕ್ಕೆ ಬೇಕಾದುದನ್ನು ಬೆಳೆದುಕೊಳ್ಳುವುದಕ್ಕೆ ಅವಕಾಶವಿದೆ. ಕೆರೆಗೆ ನೀರು ಬಂದಾಗ ಅದರ ಹಿಂಭಾಗದಲ್ಲಿರುವ ತೋಟಗಳಿಗೆ, ವಾಟರ್ ಟೇಬಲ್ ಮೇಲೆ ಬಂದು ಅನುಕೂಲವಾಗುತ್ತದೆ. ಈ ದೃಷ್ಟಿಯಿಂದ ಕೆರೆ ರಿಪೇರಿಗೆ ಸರ್ಕಾರ ಆದ್ಯತೆ ಕೊಟ್ಟು ಎಲ್ಲ ಕೆರೆಗಳನ್ನೂ ರಿಪೇರಿ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಈ ಮೂಲಕ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಇದಕ್ಕೆ ಸಮಗ್ರವಾದ ಒಂದು ಯೋಜನೆಯನ್ನು ಮಾಡಿ ಒಂದು ಕಾಲ ನಿಗದಿ ಮಾಡಿ ಅಷ್ಟರೊಳಗೆ ಎಲ್ಲ ಕೆರೆಗಳ ರಿಪೇರಿ ಮಾಡುವ ಹಾಗೆ ವ್ಯವಸ್ಥೆ ಮಾಡಿದರೆ ದೊಡ್ಡ ನೀರಾವರಿಯಿಂದ ಅನುಕೂಲ ಪಡೆಯದೆ ಇರತಕ್ಕ ಪ್ರದೇಶದ ರೈತರು ಕೂಡ ನೆಮ್ಮದಿಯಿಂದ ಜೀವನ ಮಾಡುವುದಕ್ಕೆ ಅನುಕೂಲವಾಗುತ್ತದೆ.

ಕೆರೆಗಳ ರಿಪೇರಿಗೆ ಅಸಿಸ್ಟೆಂಟ್ ಇಂಜಿನಿಯರು ಮತ್ತು ಎಕ್ಸಿಕ್ಯೂಟಿವ್ ಇಂಜಿನಿಯರ್‌ಗೆ ಕೆಲವು ಪವರ್ಸ್ ಕೊಟ್ಟಿದ್ದರು. ಇತ್ತೀಚಿನ ಸರ್ಕಾರದ ಆರ್ಡರ್ ಪ್ರಕಾರ ಯಾವ ಯಾವ ಕೆಲಸವಾಗಬೇಕು ಎಂದು ಒಂದು ಪಟ್ಟಿಯನ್ನು ಅಸಿಸ್ಟೆಂಟ್ ಇಂಜನಿಯರು ಎಕ್ಸಿಕ್ಯೂಟಿವ್ ಇಂಜಿನಿಯರ್‌ಗೆ ಕಳುಹಿಸಬೇಕು, ಅವರು ಅದನ್ನು ಸೂಪರಿಂಟೆಂಡಿಂಗ್ ಇಂಜಿನಿಯರ್ ಅವರಿಗೆ ಕಳುಹಿಸಬೇಕು. ಅವರು ಇಂಥ ಕೆಲಸಗಳನ್ನು ತೆಗೆದುಕೊಳ್ಳಿ ಎಂದು ಆದೇಶ ಕೊಡಬೇಕು. ಇದರಿಂದ ಕಾಲ ವ್ಯಯವಾಗುತ್ತದೆ. ಆಡಳಿತ ವಿಕೇಂದ್ರೀಕರಣವಾಗಬೇಕು ಎನ್ನುವುದು ಸರ್ಕಾರದ ನೀತಿಯಾಗಿರುವುದರಿಂದ ಆಯಾ ಸ್ಥಳವಲ್ಲಿಯೇ ರೈತರ ಮತ್ತು ಜನಗಳ ಕೆಲಸ ಆಗಬೇಕೆಂದು ಹೇಳುವಾಗ ಎಲ್ಲ ಅಧಿಕಾರವನ್ನೂ ಕೆಲವೇ ಅಧಿಕಾರಿಗಳ ಕೈಗೆ ಕೊಡುತ್ತಿರುವುದರ ಔಚಿತ್ಯವನ್ನು ನಾನು ಪ್ರಶ್ನೆ ಮಾಡುತ್ತೇನೆ. ಕನಿಷ್ಟಪಕ್ಷ 20 ಸಾವಿರಕ್ಕೆ ಒಳಪಟ್ಟಿರತಕ್ಕ ಅಂದಾಜುಗಳನ್ನು ಮಂಜೂರು ಮಾಡುವ ಅಧಿಕಾರವನ್ನು ಎಕ್ಸಿಕ್ಯೂಟಿವ್ ಇಂಜಿನಿಯರಿಗೆ ಕೊಡಬೇಕು ಎಂದು ಒತ್ತಾಯ ಮಾಡುತ್ತೇನೆ.

ಹೆಚ್ಚು ಮಳೆ ಬಿದ್ದು ಕೆರೆಗಳು ಒಡೆದು ಹೋದರೆ ಅವುಗಳ ರೀಪೇರಿ ಕಾರ್ಯವನ್ನು ತೆಗೆದುಕೊಳ್ಳುವುದಕ್ಕೆ ಅಸಿಸ್ಟೆಂಟ್ ಇಂಜಿನಿಯರ್ ಅಥವಾ ಎಕ್ಸಿಕ್ಯೂಟಿವ್ ಇಂಜಿನಿಯರ್ ಅವರಿಗೆ ಅಧಿಕಾರವಿಲ್ಲ. ಅದಕ್ಕೆ ಸೂಪರಿಂಟೆಂಡಿಂಗ್ ಇಂಜಿನಿಯರ್ ಅನುಮತಿ ಕೊಡಬೇಕು. ನನ್ನ ಕ್ಷೇತ್ರದ ಒಂದು ಉದಾಹರಣೆ ಹೇಳುವುದಾದರೆ ಸಪ್ಪಿಗನಕೊಪ್ಪಲ್‌ನ ತಾವರೆಕಟ್ಟೆ ಒಡೆದುಹೋಗಿ ಎರಡು ವರ್ಷವಾಗಿದೆ. ಎಕ್ಸಿಕ್ಯೂಟಿವ್ ಇಂಜಿನಿಯರನ್ನು ವಿಚಾರಿಸಿದರೆ ಸೂಪರಿಂಟೆಂಡಿಂಗ್ ಇಂಜಿನಿಯರ್ ಅವರಿಗೆ ಬರೆದಿದ್ದೇವೆ, ಇನ್ನೂ ಆರ್ಡರ್ ಬಂದಿಲ್ಲವೆಂದು ಹೇಳುತ್ತಾರೆ. ಕೆರೆ ರಿಪೇರಿ ಮುಂತಾದ ಸಣ್ಣಪುಟ್ಟ ಕೆಲಸಗಳ ಬಗ್ಗೆ ಕೂಡ ಎಲ್ಲ ಅಧಿಕಾರವನ್ನೂ ಒಬ್ಬ ಮನುಷ್ಯನಿಗೆ ಕೊಡುವುದರಲ್ಲಿ ಅರ್ಥವಿಲ್ಲ. ಆದ್ದರಿಂದ ಕಾಮಗಾರಿ ಕೆಲಸಗಳನ್ನು ಮಾಡುವುದರಲ್ಲಿ ವಿಕೇಂದ್ರೀಕರಣವಾಗಬೇಕೆಂದು ಹೇಳುತ್ತೇನೆ.

ಬವಡಿಹಳ್ಳಿ, ದೊಡ್ಡಗೇಣಿಗೆರೆ ಮತ್ತು ಕಾವನಹಳ್ಳಿ ಈ ಕೆರೆಗಳ ಅಂದಾಜು ತಯಾರಾಗಿ ಮೂರು ವರ್ಷವಾದರೂ ಆ ಅಂದಾಜುಗಳು ಎಲ್ಲಿವೆ ಎಂದು ಪತ್ತೆಯಾಗಿಲ್ಲ. ಕೆರೆಗಳ ಅಂದಾಜು ಮಂಜೂರು ಮಾಡುವುದಕ್ಕೆ, ಪ್ರತಿಯೊಂದಕ್ಕೆ ಕೂಡ ಎಲ್ಲವೂ ಸರ್ಕಾರಕ್ಕೇ ಬರುವುದಾದರೆ ಎಷ್ಟರ ಮಟ್ಟಿಗೆ ನ್ಯಾಯ ದೊರಕುತ್ತದೆ? ಪ್ರತಿಯೊಂದು ಕೆಲಸಕ್ಕೂ ಬೆಂಗಳೂರಿಗೆ ರೈತರು ಅಲೆಯಬೇಕಾದರೆ ಸರ್ಕಾರ ಇದ್ದರೆ ಏನು, ಇಲ್ಲದೆ ಇದ್ದರೆ ಏನು? ಎನ್ನುವ ಭಾವನೆ ಜನಗಳಲ್ಲಿ ಬಂದಿದೆ. ಕೆರೆ ದುರಸ್ತಿಯ ಅಂದಾಜುಗಳನ್ನು ಸೂಪರಿಂಟೆಂಡಿಂಗ್ ಇಂಜಿನಿಯರ್ ಮಂಜೂರು ಮಾಡುವ ಹಾಗೆ ಅಧಿಕಾರವನ್ನು ಮೊದಲು ಇದ್ದ ಹಾಗೆಯೇ ಮಾಡಿಕೊಡಬೇಕು.

(ಶ್ರೀ ಕೆ. ಎಚ್. ಹನುಮೇಗೌಡ)

ಹಾಸನ ಜಿಲ್ಲೆಯಲ್ಲಿ ಎಂಟು ತಾಲ್ಲೂಕುಗಳಿವೆ. ಅಲ್ಲಿ ಒಬ್ಬರೇ ಎಕ್ಸಿಕ್ಯೂಟಿವ್ ಇಂಜಿನಿಯರಿದ್ದಾರೆ. ಒಬ್ಬರಿಗೆ ಅಲ್ಲಿನ ಕೆಲಸಕಾರ್ಯಗಳನ್ನು ಸಕಾಲದಲ್ಲಿ ಮುಗಿಸುವುದಕ್ಕಾಗುವುದಿಲ್ಲ, ಎರಡು ಡಿವಿಜನ್ ಮಾಡಬೇಕು ಎಂದು ಕಳೆದ 10–15 ವರ್ಷದಿಂದ ಒತ್ತಾಯ ಮಾಡುತ್ತ ಬಂದಿದ್ದೇವೆ. ಬೇರೆ ಎಲ್ಲ ಜಿಲ್ಲೆಗಳಲ್ಲಿಯೂ ಎರಡು ಮೂರು ಡಿವಿಜನ್ ಮಾಡಿದರೂ ಸಹ ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಗಳಿಗೆ ಒಂದೊಂದೇ ಡಿವಿಜನ್ ಇಟ್ಟಿರುವುದರಲ್ಲಿ ಅರ್ಥವಿಲ್ಲ. ಹಾಸನ ಜಿಲ್ಲೆಗೆ ಒಂದು ವರ್ಷಕ್ಕೆ ಒಂದೂವರೆ ಕೋಟಿ ರೂಪಾಯಿ ಖರ್ಚಾಗುತ್ತದೆ. ಇಷ್ಟು ಹಣವನ್ನೂ ವ್ಯವಸ್ಥಿತವಾದ ರೀತಿಯಲ್ಲಿ ಖರ್ಚು ಮಾಡಿ ಸೂಪರ್‌ವೈಸ್ ಮಾಡುವುದಕ್ಕೆ ಒಬ್ಬರಿಂದ ಕಷ್ಟವಾಗುತ್ತದೆ. ಸರ್ಕಾರದವರು ಈಗಲಾದರೂ ಹಾಸನ ಜಿಲ್ಲೆಯಲ್ಲಿ ಎರಡು ಡಿವಿಜನ್ ಮಾಡಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ರೈತರಿಗೆ ನೀರಾವರಿ ಬಾವಿ ತೆಗೆಯುವುದಕ್ಕೆ ಸರ್ಕಾರದಿಂದ ಬೇಕಾದಷ್ಟು ಗ್ರಾಂಟ್ ಸಿಕ್ಕುತ್ತಿದೆ. ಸಾವಿರಾರು ಬಾವಿಗಳನ್ನು ತೆಗೆಯುತ್ತಿದ್ದಾರೆ. ಎಲ್ಲಿ ಬಾವಿ ತೆಗೆಯಬೇಕು, ಹೇಗೆ ತೆಗೆಯಬೇಕು ಎನ್ನುವ ವಿಚಾರ ತಿಳಿಯದೆ ಎಷ್ಟೋ ಜನ ರೈತರು ತೊಂದರೆ ಪಟ್ಟಿದ್ದಾರೆ, ಅವರ ಮನೆ ಮಠ ಮಾರಿಕೊಂಡಿದ್ದಾರೆ. ಇದಕ್ಕಾಗಿ ಲೋಕೋಪಯೋಗಿ ಇಲಾಖೆಯಲ್ಲಿ ಒಂದು ಪ್ರತ್ಯೇಕ ಶಾಖೆಯನ್ನು ತೆರೆದು, ಬಾವಿಗಳನ್ನು ಸರ್ಕಾರದವರೇ ತೆಗೆಸಿ ಕೊಡುವುದು ಸೂಕ್ತ. ಖರ್ಚು ಸ್ವಲ್ಪ ಹೆಚ್ಚಾಗಿ ಆದರೂ ರೈತರು ದುಡ್ಡನ್ನು ತೆಗೆದುಕೊಂಡು ಮದುವೆ ಮುಂತಾದ ಬೇರೆ ಬೇರೆ ಬಾಬುಗಳಿಗೆ ವೆಚ್ಚ ಮಾಡದೆ ಯಾವ ಉದ್ದೇಶಕ್ಕಾಗಿ ತೆಗೆದುಕೊಂಡರೋ ಅದಕ್ಕೇ ಖರ್ಚು ಮಾಡುವುದಕ್ಕೆ ಕೂಡ ಅನುಕೂಲವಾಗುತ್ತದೆ. ಸರ್ಕಾರದವರು ಸಕಾಲದಲ್ಲಿ ಬಾವಿಗಳನ್ನು ತೆಗೆಸಿಕೊಟ್ಟು ಹಾಗಾಗುತ್ತದೆ. ಹೊಸ ಕೆರೆಗಳ ನಿರ್ಮಾಣಕ್ಕೆ ಹೇಗೆ ಸರ್ಕಾರ ಆದ್ಯತೆಯನ್ನು ಕೊಡುತ್ತದೆಯೋ ಹಾಗೆಯೇ ಹಳ್ಳಿಗಾಡಿನಲ್ಲಿ ನೀರಾವರಿ ಬಾವಿಗಳನ್ನು ಕೂಡ ಲೋಕೋಪಯೋಗಿ ಇಲಾಖೆಯಿಂದ ಷೆಡ್ಯೂಲ್ ರೇಟಿನಲ್ಲಿ ಮಾಡಿಸಿಕೊಟ್ಟರೆ ಅದರಿಂದ ನಿರೀಕ್ಷಿತ ಫಲ ದೊರೆಯುತ್ತದೆ ಎಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† **Smt. VIJAYA DESAI** (Chitapur).—Madam Speaker, while supporting the demands that are before the House I would like to offer a few constructive and broad suggestions for consideration by the Government. The hon. Members on the opposition side have already criticised the demands bitterly but it goes without saying that they are purely meant for public welfare. Undoubtedly I feel that public work is always an unlimited one. Some of the hon. Members will be one with me in saying that few members have always a wishful thinking on these matters. But as we look to the budget estimates the speedy collection of revenues as well as the proposed expenditure on good schemes will definitely give basic amenities to the rural masses. The basic amenities are the drinking water facilities, housing facilities, approach roads and electricity.

Then with regard to construction of hostel buildings I wish to suggest that hostels proposed in the budget should be constructed at all taluka headquarters. These hostels exist at the district level at present.

With regard to construction of new tanks, looking to the Gulbarga Division, I find that top-priority has been given to Chincholi taluk. I request the Government to give same top-priority to take up other tanks whose estimates were ready, works were started, compensation was given but the tanks were not completed. I would like to quote an example in this connection. Allahalli tank at Chitapur taluk, Gulbarga District is incomplete. The estimates were prepared, tenders were called for, the contractors started the work too but he ran away leaving the work half-done and thereby the work remains uncompleted. I

request the Government to enquire into the matter and see that the work is completed as early as possible.

I would like to know whether anicut in place of breached tank at Shahabad has been constructed. We had asked the department to construct an anicut at the Ingankal village because it would help five to six other villages to derive irrigation facilities. I urge upon the Government to construct an anicut in Ingankal village early.

As regards Lift Irrigation Schemes I welcome it because it will really benefit the rural masses. But the progress seems to be very slow in this direction. The contractors are taking it very easily. Therefore, I request the Government to see that these schemes are completed early.

Hon. Member Sri Karge has already spoken with regard to Upper Krishna Project, Karanja Project, Margolli lift irrigation scheme etc. I would like to add that the progress on these works is very slow and I urge upon the Government to take up speedy action in this regard.

On page 219 it has been mentioned that provision has been made for construction of a high level causeway across Kagna river on Chitapur-Shahbad road. But that work has already been completed. I think with this amount some more approach roads could have been taken up in the same constituency. I request the Government to make more provisions for Chitapur taluk.

Then Sir, in respect of construction of sheds I would like to mention that sheds should also be constructed for visitors. This is very essential because visitors have to wait there from morning till evening and the Jail is about seven miles away from the City of Gulbarga. Therefore I feel that sheds should be constructed for visitors.

Chitapur taluk in Gulbarga District is an industrial area. There are three stone marketing syndicates, two cement factories, one heavy engineering works and one fertiliser factory is going to be established. People come to work in Shahabad and Chitapur from the surrounding villages. But unfortunately some of the roads have not been taken up. I request the Government to take up the following roads:

(1) from Chitapur Shahabad road—approach roads to Malgatti and Ravoar;
(2) from Chitapur Nahar road—approach road to Wadi;
(3) Road from Bhimnalli to Yagapur *via* Belgera.

Chitapur Taluk is the seat of five Godesses. They are very famous in Gulbarga District. At Savithi there is Chandamma temple; at Belwadgi there is Yellamma temple; at Allahalli there is a Bhagamma temple; at Allur there is Durgamma temple and at Nagavi there is Yellamma temple. I request the Government to take up construction of atleast five travellers' bungalows in all these five places which are very essential.

With these few words, I thank the Chair for giving me this opportunity to speak.

† ಶ್ರೀ ಕೆ. ಮಾದೇಗೌಡ (ಬನ್ನೂರು).—ಸಭಾಧ್ಯಕ್ಷಣಿಯವರೇ, ಲೋಕೋಪಯೋಗಿ ಇಲಾಖೆಯ ಮೇಲೆ ಚರ್ಚೆಯಲ್ಲಿ ಭಾಗವಹಿಸುತ್ತಾ, ಒಂದು ಮಾತನ್ನು ಈ ಸಭೆಯ ಅವಗಾಹನೆಗೆ ತರುತ್ತೇನೆ. ನಮ್ಮ ಪ್ರಜಾಪ್ರಭುತ್ವದ ದೋಷವೋ ಅಥವಾ ನಾವು ಹೊಸದಾಗಿ ಚುನಾಯಿತ ರಾಗಿ ಇಲ್ಲಿಗೆ ಬಂದಿರತಕ್ಕ ಸದಸ್ಯರ ದುರಾದೃಷ್ಟವೋ, ಈ ಸಭೆಯಲ್ಲಿ ಗಂಭೀರವಾಗಿ ದೋಷಾ ರೋಪಣೆಗಳು, ಪ್ರತ್ಯಾರೋಪಣೆಗಳು ನಡೆಯುತ್ತಿವೆ ಎಂದು ಈ ಸಂದರ್ಭದಲ್ಲಿ ಈ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ. ಈ ಒಂದು ಸಂದರ್ಭದಲ್ಲಿ ಈ ಇಲಾಖೆಯ ಮೇಲೆ ಚರ್ಚೆ ನಡೆಯತಕ್ಕ ಕಾಲದಲ್ಲಿ ಸರ್ಕಾರದ ನಡವಳಿಕೆಗಳನ್ನು ಮತ್ತು ಲೋಪದೋಷಗಳನ್ನು ಎತ್ತಿ ಹಿಡಿಯುತ್ತಾ ಇದ್ದಾಗ್ಯೂ ಪ್ರತಿಪಕ್ಷದವರು ಇದರ ಒಂದು ಅಪಾದನೆಯನ್ನು ಪ್ರತ್ಯಾರೋಪವಾಗಿ ನಮ್ಮ ಮೇಲೆ ಹೊರಿಸುವುದು ಸಹಜವಾಗಿದೆ ಎಂದು ನನಗಾದರೂ ಕೂಡ ಅನ್ನಿಸುತ್ತದೆ; ಈ ಒಂದು ಪ್ರತ್ಯಾ ರೋಪವನ್ನು ಹೊರತಕ್ಕ ಕಾಲದಲ್ಲಿ, ಈ ಒಂದು ಸರ್ಕಾರದಲ್ಲಿ ಇದ್ದು ಏನು ಅನ್ಯಾಯಗಳನ್ನು ಅಥವಾ ಅಪಮಾನಗಳನ್ನು ಮಾಡಿ ಹೋಗಿ, ಆ ಪಕ್ಷದಲ್ಲಿ ಕುಳಿತಿರತಕ್ಕಂಥ ಜನಗಳ ಮೇಲೆ ಆರೋಪಣೆ ಹೊರಿಸಿದರೋ ಅಥವಾ ಈಗ ಏನೂ ಗೊತ್ತಿಲ್ಲದೆ ಬಂದಿರತಕ್ಕ ದುರಾದೃಷ್ಟದ ಶಾಸಕರ ಮೇಲೆ ಹೊರಿಸುತ್ತಾರೋ ನನಗೆ ಅರ್ಥವಾಗುವುದಿಲ್ಲ. ಬಹುಶಃ ಅದೃಷ್ಟವೋ ದುರಾದೃಷ್ಟವೋ ಇಲ್ಲಿ ಮಾಡಿರತಕ್ಕ ಪಾಪವನ್ನು ಅಲ್ಲಿಗೆ ಹೋಗಿ ಹೇಳತಕ್ಕ ಕಾಲದಲ್ಲಿ ಕಿವಿಗೊಟ್ಟು ಲಾಲಿಸುತ್ತಾರೆ. ಈಗ ನಾನು ಪ್ರತಿಪಕ್ಷಕ್ಕೆ ಸಂಬಂಧಪಟ್ಟ ಶಾಸಕರಿಗೆ ಹೇಳುವುದೇನೆಂದರೆ, ಪಾಪವನ್ನು ಮಾಡಿರತಕ್ಕ, ನಿಮ್ಮಲ್ಲಿಗೆ ಬಂದಿರತಕ್ಕ ವ್ಯಕ್ತಿಗಳನ್ನು ಬೈಯುತ್ತೀರೋ ಅಥವಾ ಏನೂ ಗೊತ್ತಿಲ್ಲದೆ ಇರತಕ್ಕವರನ್ನು ಬೈಯುತ್ತೀರೋ ನನಗಂತೂ ಅರ್ಥವಾಗುವುದಿಲ್ಲ. ಏನಾದರೂ ಇರಲಿ, ನಾವು ನಿಮ್ಮ ಆರೋಪಣೆ ಗಳನ್ನು ಹೊರುವುದಕ್ಕೆ ಸಿದ್ಧರಾಗಿದ್ದೇವೆ. ನೀವು ಯಾವ ಆರೋಪಣೆ ಮಾಡಿದ್ದೀರಿ, ಆ ಆರೋ ಪಣೆಗೆ, ತಪ್ಪು ಆಗಿದ್ದರೆ, ಪ್ರಾಯಶ್ಚಿತ್ತ ಪಡೆಯುವುದಕ್ಕೂ ಕೂಡ ನಾವು ಸಿದ್ಧರಾಗಿರಲೇಬೇಕು. ಇಂಥ ಪರಿಸ್ಥಿತಿಯಲ್ಲಿಯೂ ಕೂಡ, ಶರಾವತಿಯ ಕಾಂಡದಲ್ಲಿ ಯಾವ ಆರೋಪಣೆ ಹೊರಿಸಿದ್ದಾರೆ, ಅದರಂತೆ ಅಪರಾಧಿ ಸ್ಥಾನದಲ್ಲಿರತಕ್ಕ ನಾವು ಹೇಳುವುದೇನೆಂದರೆ, ಜುಡಿಷಿಯಲ್ ಪ್ರೋಬ್ ಮಾಡಿ ಏನು ಪ್ರಾಯಶ್ಚಿತ್ತ ಮಾಡಬೇಕೋ ಮಾಡಿ. ಮತ್ತು ಜನಗಳಿಂದ ಬರತಕ್ಕಂಥ ಅಪಾದನೆಗಳು ನಿಜ ವಾಗಿದ್ದಲ್ಲಿ ದಂಡನೆಗೆ ಗುರಿ ಮಾಡಿ. ಈ ಮಹಾಪರಾಧವನ್ನು ಹೊರಿಸತಕ್ಕ ತಾವೇ ಅಪರಾಧಿಗಳ ವಿಚಾರಣೆಯಾಗಲಿ ಎನ್ನುವ ವಾದವನ್ನು ಏನು ಇಡುತ್ತಿದ್ದೀರಿ ಅದು ಸರಿಯಾದುದಲ್ಲ. ಇದರ ಬಗ್ಗೆ ನಾನು ಹೆಚ್ಚಾಗಿ ಹೇಳುವುದಕ್ಕೆ ಬೇಸರವಾಗುತ್ತದೆ. ಅಪರಾಧಿಗಳು ಒಪ್ಪುವ ಕಾಲದಲ್ಲಿ ಜುಡಿಷಿ ಯಲ್ ಪ್ರೋಬ್; ವಿಚಾರಣೆಯನ್ನು ತಾವು ಇಡುವುದು ಸೂಕ್ತ; ಅದನ್ನು ಬಿಡುವುದು ನಿಮಗೆ ಸೇರಿದ್ದು. ನಾವು ಹೇಳುವುದನ್ನು ಪ್ರಾಮಾಣಿಕವಾಗಿ ಹೇಳುತ್ತಿದ್ದೇವೆ, ಸಾರ್ವಜನಿಕರು ಇದನ್ನು ಪರೀಕ್ಷೆಮಾಡಲಿ. ಈ ಒಂದು ಇಲಾಖೆಯ ಮೇಲೆ ಮಾತನಾಡುವಂಥ ಕಾಲದಲ್ಲಿ ಮುಖ್ಯವಾಗಿ ರೈತನ ಹಿತದೃಷ್ಟಿಯಿಂದ ನಾವು ಏನು ನೀರಾವರಿ ಯೋಜನೆಗಳನ್ನು ಸಾವಿರಾರು ವರ್ಷಗಳಿಂದ ಕೈಗೊಂಡಿದ್ದೇವೆ, ಅವುಗಳಲ್ಲಿ ಕೆಲವು ತಾಂತ್ರಿಕ ಮತ್ತು ಆಡಳಿತ ಲೋಪದೋಷದಿಂದ ಬಹಳ ಅನ್ಯಾಯವಾಗುತ್ತಿದೆ. ಒಂದು ಉದಾಹರಣೆಯನ್ನು, ಸಾ[illegible] ನೀರಾವರಿ ವಿಚಾರದಲ್ಲಿ ಹೇಳು ವುದಾದರೆ ಮಾರ್ಚಿಯಿಂದ ಮಾರ್ಚಿಗೆ ವರ್ಷದ ಕೊನೆಯನ್ನಾಗಿ ಇಟ್ಟುಕೊಂಡಿದ್ದೇವೆ. ಇದರಿಂದ ಬಹಳ ಅನ್ಯಾಯವಾಗುತ್ತಿದೆ ಏಕೆಂದರೆ ಮಾರ್ಚಿಯಲ್ಲಿ ನಮ್ಮ ಡಿಮ್ಯಾಂಡ್ ಗ್ರಾಂಟ್ ಆಗಿ ಏಪ್ರಿಲ್ ನಲ್ಲಿ ಕೆಲಸವನ್ನು ತರಾತುರಿಯಾಗಿ ತೆಗೆದುಕೊಂಡು ಜೂನ್‌ನಲ್ಲಿ ನಾಲೆಗಳಿಗೆ ನೀರು ಬಿಡತಕ್ಕ ಕಾಲದಲ್ಲಿ ಸರಿಯಾದ ವ್ಯವಸ್ಥೆ ಆಗದೆ ಅರ್ಧಂಭರ್ಧ ಕೆಲಸವಾಗಿ ದುಡ್ಡು ವೇಸ್ಟ್ ಆಗುತ್ತದೆ. ನೀರಾ ವರಿ ಕಾಮಗಾರಿಗಳನ್ನು ತೆಗೆದುಕೊಳ್ಳುವ ಕಾಲದಲ್ಲಿ ಜೂನ್ ಟು ಜೂನ್ ಇಟ್ಟುಕೊಂಡರೆ ಇದರಿಂದ ಬಹಳ ನ್ಯಾಯವಾದ ಕೆಲಸ ನಡೆಯುತ್ತದೆ. ಸಕಾಲದಲ್ಲಿ ನೀರು ನಾಲೆಗೆ ಬಿಡಬಹುದು, ಸಕಾಲದಲ್ಲಿ ದುರುಸ್ತು ಕೆಲಸಗಳನ್ನು ನಾಲೆಗಳಲ್ಲಿ ಮಾಡಬಹುದು. ಇದರಿಂದ ಸರ್ಕಾರದಿಂದ ಏನು ಜನತೆ ನಿರೀಕ್ಷಿಸುತ್ತದೆ ಅದು ಆಗುತ್ತದೆ. ಇದಕ್ಕೆ ಆದ್ಯತೆ ಗಮನಕೊಡಬೇಕು. ಪ್ರತಿ ತಿಂಗಳು ನೀರು ಬಿಡಬೇಕಾದರೆ ನಾಲೆಗಳಲ್ಲಿ ದುರಸ್ತಿ ಕೆಲಸ ನಡೆಯುತ್ತದೆ. ಆಗುವುದಿಲ್ಲ ಎಂದು ಹೇಳುತ್ತಾರೆ ಆದುದರಿಂದ ನೀರಾವರಿ ಕಾಮಗಾರಿಗಳನ್ನು ಜೂನ್ ಟು ಜೂನ್ ಇರಬೇಕು ಎಂದು ಸರ್ಕಾರವನ್ನು ಒತ್ತಾಯಪೂರ್ವಕವಾಗಿ ಪ್ರಾರ್ಥಿಸುತ್ತೇನೆ.

2–30 P.M.

ಇನ್ನು ಲಿಫ್ಟ್ ನೀರಾವರಿ ಬಗ್ಗೆ ನಾನು ಮೊದಲೆ ಮಾತನಾಡಿದ್ದೇನೆ. ಅಣೆಕಟ್ಟುಗಳನು ಎಷ್ಟು ಅವಶ್ಯಕವಾಗಿ ಕಟ್ಟುತ್ತೀರಿ ಅಷ್ಟೇ ಲಿಫ್ಟ್ ಇರಿಗೇಷನ್ ಕೂಡ ಅವಶ್ಯಕವಾಗಿದೆ. ಸರ್ಕಾರ ಒಂದು ಅಣ್ಣೆಕಟ್ಟನ್ನು ಕಟ್ಟಬೇಕಾದರೆ ಪೂರ್ಣ ಜವಾಬ್ದಾರಿ ವಹಿಸುತ್ತದೆ. ಲಿಫ್ಟ್ ಇರಿಗೇಷನ

ಸಂಬಂಧದಲ್ಲಿ ಕೂಡ ಅಷ್ಟೇ ಜವಾಬ್ದಾರಿಯನ್ನು ವಹಿಸಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ. ಹಿಂದಿನ ಸರ್ಕಾರ ಯಾವ ಪ್ರತಿಫಲವು ಇಲ್ಲದೇ ಲಿಫ್ಟ್ ನೀರಾವರಿ ಯೋಜನೆಯನ್ನು ಆರಂಭಿಸಿದೆ. ಆ ಸರ್ಕಾರ ಹೋದ ತಕ್ಷಣ ಗೌರ್ನರ್ ರೂಲ್ ಬಂದಮೇಲೆ 10 ಪರ್ಸೆಂಟ್ ರೈತರಿಂದ ವಸೂಲು ಮಾಡಬೇಕು ಎಂದು ಜಿ. ಓ. ಹೊರಡಿಸಿದ್ದಾರೆ. ಬಹುಶಃ ಈ ಜಿ.ಓ. ಸರ್ಕಾರದ ಗಮನಕ್ಕೆ ಬಂತೋ ಇಲ್ಲವೋ ನನಗೆ ಗೊತ್ತಿಲ್ಲ. ಪೂರ್ತಿ ಈ ಜಿ.ಓ.ವನ್ನು ಪುನರ್‌ಪರಿಶೀಲನೆ ಮಾಡಬೇಕು. ಲಿಫ್ಟ್ ಇರಿಗೇಷನ್ ಸ್ಕೀಮ್ ಮಾಡುವುದರಿಂದ ಕಡಿಮೆ ಖರ್ಚಿನಿಂದ ಸಾವಿರಾರು ಎಕರೆ ನೀರಾವರಿ ಆಗತಕ್ಕ ಉದಾಹರಣೆಗಳು ಬೇಕಾದಷ್ಟು ಇವೆ. ಲಿಫ್ಟ್ ಇರಿಗೇಷನ್ ಬಗ್ಗೆ ಮಾಡಿದ ನೂರಾರು ಎಸ್ಟಿಮೇಟುಗಳು ಈ ಜಿ. ಓ. ದಿಂದ ನಿಂತು ಹೋಗಿವೆ. ತಕ್ಷಣ ಜಿ.ಓ. ಬದಲಾವಣೆ ಮಾಡಬೇಕು ಎಂದು ಕಳಕಳಿಯಿಂದ ಪ್ರಾರ್ಥಿಸುತ್ತೇನೆ. ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

[MR. DEPUTY SPEAKER in the Chair]

ಶ್ರೀ ಬಿ. ಜಿ. ಬಣಕಾರ್ (ಹಿರೆಕೆರೂರು).—ಸನ್ಮಾನ್ಯ ಅಧ್ಯಕ್ಷರೇ, ಲೋಕೋಪಯೋಗಿ ಶಾಖೆ ಮಂತ್ರಿಗಳು ಮಂಡಿಸಿದಂಥ ಬೇಡಿಕೆಗಳನ್ನು ಸ್ವಾಗತಿಸಿ ಕೆಲವು ಸಲಹೆಗಳನ್ನು ಮತ್ತು ಸೂಚನೆಗಳನ್ನು ಕೊಡಬಯಸುತ್ತೇನೆ. ಲೋಕೋಪಯೋಗಿ ಶಾಖೆ ಕೋಟ್ಯಂತರ ರೂಪಾಯಿ ಹಣ ಖರ್ಚು ಮಾಡುವ ಶಾಖೆ. ರಾಜ್ಯದಲ್ಲಿ ಜನರ ಕಲ್ಯಾಣಕ್ಕಾಗಿ ಮತ್ತು ಅಭಿವೃದ್ಧಿಗಾಗಿ ಇವೊತ್ತು ಕೋಟ್ಯಾಂತರ ರೂಪಾಯಿ ಖರ್ಚು ಮಾಡಿದ ಹಣ ಸದುಪಯೋಗವಾಗಿಲ್ಲ ಮಾಡಿದ ಕಾರ್ಯಗಳು ಫಲಕಾರಿಯಾಗಿಲ್ಲ ಎಂದರೆ ಅದು ಮಹಾ ತಪ್ಪಾಗುತ್ತದೆ. ಈ ದಿಶೆಯಲ್ಲಿ ಖರ್ಚು ಮಾಡಿದಂಥ ಹಣ ಮತ್ತು ಮಾಡಿದ ಪ್ರತಿಯೊಂದು ಕಾರ್ಯವು ಒಳ್ಳೆಯ ರೀತಿಯಲ್ಲಿ ಆಗಬೇಕು ಎಂಬುದು ಸರ್ಕಾರದ ಉದ್ದೇಶವಾಗಿರಬೇಕು. ಇವೊತ್ತಿನ ದಿವಸ ಪ್ರತಿಯೊಂದು ತಾಲ್ಲೋಕಿನಲ್ಲಿ ಲೋಕೋಪಯೋಗಿ ಇಲಾಖೆ ಲಕ್ಷಾಂತರ ರೂಪಾಯಿ ಖರ್ಚು ಮಾಡುತ್ತಿದೆ. ಪ್ರತಿಯೊಂದು ತಾಲ್ಲೋಕಿನಲ್ಲಿ ಅಸಿಸ್ಟೆಂಟ್ ಇಂಜಿನಿಯರ್ ಇಟ್ಟಿರುತ್ತಾರೆ. ಆ ತಾಲ್ಲೋಕಿನಲ್ಲಿ ಪ್ರತಿಯೊಂದು ಕೆಲಸಕಾರ್ಯಗಳು ಒಳ್ಳೆಯ ರೀತಿಯಲ್ಲಿ ಆಗಬೇಕು ಎನ್ನುವುದನ್ನು ನೋಡಿಕೊಂಡು ಹೋಗುವುದು ಅವರ ಕರ್ತವ್ಯ. ಪ್ರತಿಯೊಂದು ತಾಲ್ಲೋಕಿನಲ್ಲಿ ಅನೇಕ ರಸ್ತೆಗಳು ಇರುತ್ತವೆ. ಅನೇಕ ಕೆರೆಗಳು ಇರುತ್ತವೆ. ಅನೇಕ ತರಹ ಕಟ್ಟಡಗಳನ್ನು ಕಟ್ಟುವ ಕಾರ್ಯ ಈ ಶಾಖೆಗೆ ಒಪ್ಪಿಸಲ್ಪಟ್ಟಿವೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು ಈಗ ಬೆಳ್ಳಿ ಹಬ್ಬ ಆಚರಿಸುತ್ತಿದ್ದೇವೆ. ಕೆಲವು ಹಳ್ಳಿಗಳನ್ನು ನೋಡಿದರೆ ಒಂದು ಕೆರೆ ಕೂಡ ರಿಪೇರಿ ಆಗದ ನಿದರ್ಶನ ಅಲ್ಲಲ್ಲಿ ಕಂಡುಬರುತ್ತದೆ. ಇದು ಸರ್ಕಾರದ ತಪ್ಪು ಎಂದು ನನಗೆ ಅನಿಸುವುದಿಲ್ಲ. ಒಬ್ಬ ಅಧಿಕಾರಿ ಒಂದೊಂದು ತಾಲ್ಲೋಕಿನಲ್ಲಿ 4—5 ವರ್ಷ ಇದ್ದರೆ, ಯಾವ ಹಳ್ಳಿ ಜನರು ಮುಂದೆ ಬರುತ್ತಾರೆ, ಆ ಹಳ್ಳಿಗೆ ಕೆಲಸವಾಗುತ್ತದೆ. ಯಾವ ಹಳ್ಳಿಯ ದುರೀಣರು ಮುಂದೆ ಬರುವುದಿಲ್ಲ, ಅಲ್ಲಿ ಕೆಲಸವಾಗದೆ ಹಿಂದುಳಿಯುತ್ತದೆ. ಎಷ್ಟೋ ಹಳ್ಳಿಗಳಲ್ಲಿ ರಸ್ತೆಗಳು ಸರಿಯಾಗಿ ಆಗಿಲ್ಲ, ಕೆರೆಗಳು ರಿಪೇರಿಯಾಗಿಲ್ಲ. ಆ ದೃಷ್ಟಿಯಿಂದ ಪ್ರತಿಯೊಂದು ಹಳ್ಳಿಯಲ್ಲೂ ಪ್ರತಿಯೊಂದು ಕಾರ್ಯ ಆಗಬೇಕು ಎಂದು ಸರ್ಕಾರದ ಉದ್ದೇಶವಿದ್ದರೆ ಆ ತಾಲ್ಲೋಕಿನಲ್ಲಿ ಇದ್ದಂಥ ಅಸಿಸ್ಟೆಂಟ್ ಇಂಜಿನಿಯರುಗಳು ತಾಲ್ಲೋಕಿನ ಪ್ರತಿಯೊಂದು ಹಳ್ಳಿಯಲ್ಲಿ ಯಾವ ರಸ್ತೆ ರಿಪೇರಿ ಆಗಿಲ್ಲ ಯಾವ ಕೆರೆ ರಿಪೇರಿ ಆಗಿಲ್ಲ ಎಷ್ಟು ವರ್ಷಗಳಿಂದ ಎಷ್ಟು ದಿವಸಗಳಿಂದ ರಿಪೇರಿಯಾಗಿಲ್ಲ ಎಂದು ನೋಡಿಕೊಂಡು, ರಿಪೇರಿ ಆಗುವ ಕೆಲಸಗಳನ್ನು ಮೊಟ್ಟಮೊದಲು ಕೈಕೊಳ್ಳಬೇಕು. ಈ ಒಂದು ದಿಶೆಯಲ್ಲಿ ಅಸಿಸ್ಟೆಂಟ್ ಇಂಜಿನಿಯರ್‌ಗೆ ಒಳ್ಳೆಯ ರೀತಿ ಸಲಹೆ ಸೂಚನೆಗಳನ್ನು ಕೊಡಲು ಒಂದು ಸಲಹಾ ಸಮಿತಿ ಮಾಡಿದರೆ ತಾಲ್ಲೂಕುಗಳಲ್ಲಿ ಒಳ್ಳೆಯ ರೀತಿಯಲ್ಲಿ ಕೆಲಸಗಳು ಆಗುತ್ತವೆ ಎಂದು ಹೇಳುತ್ತೇನೆ. ತಾಲ್ಲೂಕು ಅಭಿವೃದ್ಧಿ ಮಂಡಲಿಗೆ ನೀವು 10 ಎಕರೆ ಅಚ್ಚುಕಟ್ಟು ಕಮ್ಮಿ ಇರುವ ಕೆರೆಗಳ ರಿಪೇರಿಗಳನ್ನು ಮಾಡಿಸಿಕೊಡಲು ಅವಕಾಶ ಕೊಟ್ಟಿದ್ದೀರಿ. ಹಣಕಾಸಿನ ಪರಿಸ್ಥಿತಿ ನೋಡಿದರೆ ಅವರ ಸಿಬ್ಬಂದಿಗೆ ಪಗಾರ ಕೊಡುವುದಕ್ಕಾಗುವುದಿಲ್ಲ ಅಂಥ ಸಂದರ್ಭದಲ್ಲಿ ಹೇಗೆ ರಿಪೇರಿ ಮಾಡುತ್ತಾರೆ? ಮಲೆನಾಡು ಏರಿಯಾದಲ್ಲಿ 100 ರಿಂದ ಸಾವಿರದವರೆಗೆ ಕೆರೆಗಳು ಒಂದೊಂದು ತಾಲ್ಲೋಕಿನಲ್ಲಿ ಇವೆ. ಇಂಥ ಪರಿಸ್ಥಿತಿಯಲ್ಲಿ ಅಭಿವೃದ್ಧಿ ಮಂಡಲಿಗಳು ಕೆರೆಗಳ ರಿಪೇರಿ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಅಂಥ ಕಡೆ ಕೆರೆಗಳ ರಿಪೇರಿ ಕೆಲಸವನ್ನು ಲೋಕೋಪಯೋಗಿ ಶಾಖೆಯವರು ನಿರ್ವಹಿಸತಕ್ಕದ್ದು ಎನ್ನುವ ಮಾತನ್ನು ನಾನು ಇವೊತ್ತಿನ ದಿವಸ ಒತ್ತಿ ಹೇಳುತ್ತೇನೆ.

(ಶ್ರೀ ಬಿ. ಜಿ. ಬಣಕಾರ್)

ಆಮೇಲೆ ಆಸ್‌ಫಾಲ್ಟ್ ರೋಡ್ ವಿಚಾರ ತೆಗೆದುಕೊಂಡರೆ ಆಸ್‌ಫಾಲ್ಟ್ ಮಾಡಿದ ರೋಡು ಒಂದೊಂದು ವರ್ಷಕ್ಕೆ ಹಾಳಾಗಿ ಹೋಗಿವೆ. ಕೆಲವು ಕಡೆ 10 ವರ್ಷವಾದರೂ ಚೆನ್ನಾಗಿವೆ. 10 ವರ್ಷಗಳವರೆಗೆ ಆಸ್‌ಫಾಲ್ಟ್ ಮಾಡಿದ ರಸ್ತೆಗಳು ಒಳ್ಳೆಯ ರೀತಿಯಲ್ಲಿ ಇರುವಂತೆ ಸರ್ಕಾರ ಸೂಕ್ತ ಆದೇಶ ಸಂಬಂಧಪಟ್ಟ ಅಧಿಕಾರಿಗಳಿಗೆ ಕೊಟ್ಟು ಕೆಲಸ ಮಾಡಿಸಬೇಕು ಎಂದು ಹೇಳುತ್ತೇನೆ. ನ್ಯಾಷನಲ್ ಹೈವೇ ಗಣನೀಯವಾದ ಪರಿಸ್ಥಿತಿಯಲ್ಲಿ ಸುಧಾರಿಸಿದೆ ಕೆಲವು ಕಡೆ ಬಸ್ಸುಗಳು ಓವರ್ ಟೇಕ್ ಮಾಡುವಾಗ ಆಕ್ಸಿಡೆಂಟ್ ಆಗುತ್ತವೆ. ರಸ್ತೆಗಳು ಅಗಲವಾಗದೆ ಇರುವುದು ಆಸ್‌ಫಾಲ್ಟ್ ಆಗಿಲ್ಲದೆ ಇರುವುದರಿಂದ ಅಪಘಾತಗಳು ಆಗುತ್ತವೆ. ಇದನ್ನು ಲಕ್ಷ್ಯದಲ್ಲಿಟ್ಟುಕೊಂಡು ಲೋಕೋಪಯೋಗಿ ಇಲಾಖೆಯವರು ಆದಷ್ಟು ತೀವ್ರಗತಿಯಲ್ಲಿ ನ್ಯಾಷನಲ್ ಹೈವೇಸ್ ಅಗಲ ಮಾಡಿ ಆಸ್‌ಫಾಲ್ಟ್ ಮಾಡುವ ಕೆಲಸ ತೀವ್ರವಾಗಿ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ. ಇನ್ನು ಕೂಡು ರಸ್ತೆಗಳ ಪರಿಸ್ಥಿತಿ ಚಿಂತಾಜನಕವಾಗಿದೆ ಬರೇ ರಸ್ತೆಗಳು ಮಾಡುವುದು ಮಾತ್ರವಲ್ಲ. ಮಾಡಿದಂಥ ರಸ್ತೆಗಳು ಒಳ್ಳೆಯ ರೀತಿಯಿಂದ ಜನರಿಗೆ ಅಡ್ಡಾಡಲಿಕ್ಕೆ ಬರುತ್ತದೆಯೋ ಇಲ್ಲವೇ, ಸಣ್ಣಪುಟ್ಟ ಸೇತುವೆಗಳು ಇವೆಯೋ ಇಲ್ಲವೇ ಎಂಬುದನ್ನು ನೋಡುವುದು ಸರ್ಕಾರದ ಕರ್ತವ್ಯ. ಅಲ್ಲಿ ಎಲ್ಲಾ ತರಹ ವಾಹನಗಳು ಓಡಾಡುವುದಕ್ಕೆ ಅನುಕೂಲವಾಗುವಂತ ಸರ್ಕಾರ ನಿಗಾವಹಿಸಬೇಕೆಂದು ಎನ್ನುವ ಮಾತನ್ನು ಒತ್ತಿ ಹೇಳುತ್ತೇನೆ. ಆಮೇಲೆ ಲಿಫ್ಟ್ ಇರಿಗೇಷನ್ ಬಗ್ಗೆಯೂ ಕೂಡ ನಮ್ಮ ಸರ್ಕಾರದವರು ಹೆಚ್ಚಿನ ನಿಗಾ ವಹಿಸಿದ್ದಾರೆ. ಇನ್ನೂ ಹೆಚ್ಚಿನ ರೀತಿಯಲ್ಲಿ ಲಿಫ್ಟ್ ಇರಿಗೇಷನ್ ಸೊಸೈಟಿಗಳನ್ನು ಮಾಡಿ ಆ ಮೂಲಕ ನೀರಾವರಿ ಯೋಜನೆಗಳನ್ನು ಕೈಗೊಳ್ಳಬೇಕೆಂದು ಹೇಳುತ್ತೇನೆ. ಇದಕ್ಕಾಗಿ ಈ ಸಾಲಿನಲ್ಲಿ 14 ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರೆ. ಲಿಫ್ಟ್ ಇರಿಗೇಷನ್ ಬಗ್ಗೆ ಇನ್ನೂ ಹೆಚ್ಚಿನ ನಿಗಾ ವಹಿಸಬೇಕೆಂದು ಮತ್ತೊಮ್ಮೆ ಹೇಳುತ್ತೇನೆ.

ಡೀಸಿಲ್ಟಿಂಗ್ ಆಫ್ ಟ್ಯಾಂಕ್ಸ್ ಬಗ್ಗೆ ಹೇಳಬೇಕೆಂದರೆ, ಇಂದು ರಾಜ್ಯದಲ್ಲಿ ಸಹಸ್ರಾರು ಕೆರೆಗಳಲ್ಲಿ ಹೂಳು ತುಂಬಿ ನೀರು ನಿಲ್ಲುವುದಕ್ಕೇ ಅವಕಾಶ ಇಲ್ಲದಂತಾಗಿದೆ. ಈ ಕೆರೆಗಳಲ್ಲಿರುವ ಹೂಳನ್ನು ತೆಗೆಸಿ, ಆಳಪಡಿಸಿದರೆ ನೀರು ನಿಲ್ಲುವುದಕ್ಕೆ ಅವಕಾಶವಾಗುತ್ತದೆ. ಆ ರೀತಿ ನೀರು ನಿಂತರೆ ಅದರಿಂದ ದನಕರುಗಳಿಗೆ ಕುಡಿಯಲು ನೀರು ಸಿಗುತ್ತದೆ ಮತ್ತು ವ್ಯವಸಾಯಕ್ಕೂ ಅನುಕೂಲವಾಗುತ್ತದೆಂದು ಹೇಳುತ್ತೇನೆ.

ಇನ್ನು ಈ ಇಲಾಖೆಯಲ್ಲಿ ಕೆಲಸ ಮಾಡುವ ಅಧಿಕಾರಿಗಳ ವರ್ಗವಣೆಯ ಬಗ್ಗೆ ಹೇಳಬೇಕೆಂದರೆ ಯಾವ ಅಧಿಕಾರಿ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೋ ಅಂತಹ ಅಧಿಕಾರಿಯನ್ನು ಯಾರೋ ಒಬ್ಬರು ಧುರೀಣರು ಬಂದು ಹೇಳಿದರು ಎಂಬುದಾಗಿ ವರ್ಗ ಮಾಡಿಬಿಡುತ್ತಾರೆ. ಇದು ತಪ್ಪಬೇಕು. ಒಬ್ಬರು ಒಂದೇ ಸ್ಥಳದಲ್ಲಿ 10 ವರ್ಷ ಇದ್ದರೂ ವರ್ಗ ಮಾಡದಿರುವುದು, ಇನ್ನೊಬ್ಬರು 6 ತಿಂಗಳು ಸರ್ವಿಸ್ ಮಾಡುವುದರಲ್ಲಿಯೇ ವರ್ಗ ಮಾಡುವುದು, ಇದು ತಪ್ಪಬೇಕು. ಯಾರು ಸರಿಯಾಗಿ ಕೆಲಸ ಮಾಡುವುದಿಲ್ಲ, ಯಾರು ಆ ಸಬ್‌ಡಿವಿಜನಿಗೆ ಇಟ್ಟಂತಹ ಹಣವನ್ನು ಖರ್ಚು ಮಾಡದೆ ಲ್ಯಾಪ್ಸ್ ಆಗುವಂತೆ ಮಾಡುತ್ತಾರೋ, ಯಾರು ಇನ್‌ಎಫಿಷಿಯೆನ್ಸಿಯಾಗಿರುತ್ತಾರೋ ಅಂತಹವರನ್ನು ಅವರು ಯಾವ ದರ್ಜೆಯ ಇಂಜಿನಿಯರ್ ಆಗಲಿ, ಕೂಡಲೆ ಬೇರೆ ಕಡೆಗೆ ವರ್ಗ ಮಾಡಿ ಅಂಥ ಜಾಗಕ್ಕೆ ಒಳ್ಳೆಯ ಅಧಿಕಾರಿಯನ್ನು ನೇಮಕ ಮಾಡಿ ಕೆಲಸಕಾರ್ಯಗಳು ಚೆನ್ನಾಗಿ ಆಗುವಂತೆ ನೋಡಿಕೊಳ್ಳಬೇಕೆಂದು ಒತ್ತಿ ಹೇಳುತ್ತೇನೆ.

ಇನ್ನು ಕಟ್ಟಡಗಳ ಬಗ್ಗೆ ಹೇಳಬೇಕೆಂದರೆ, ಅನೇಕ ಕಡೆಗಳಲ್ಲಿ ನ್ಯಾಯಾಧೀಶರು ವಾಸ ಮಾಡುವುದಕ್ಕೆ ಸರ್ಕಾರದವರು ಮನೆಗಳನ್ನು ಕಟ್ಟಿಸಿಲ್ಲ. ಮುನ್ಸಿಫ್ ಮ್ಯಾಜಿಸ್ಟ್ರೇಟ್, ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಮತ್ತು ಸಿವಿಲ್ ಮ್ಯಾಜಿಸ್ಟ್ರೇಟ್‌ಗಳು ಒಂದು ಊರಿನಿಂದ ಇನ್ನೊಂದು ಊರಿಗೆ ಹೋದರೆ ವಾಸಕ್ಕೆ ಮನೆಗಳೇ ಇರುವುದಿಲ್ಲ. ಈ ಕಾರಣದಿಂದ ಅಧಿಕಾರಿಗಳು ವಾಸಮಾಡಲು ಮನೆಗಳನ್ನು ಜಾಗ್ರತೆ ಕಟ್ಟಿಸಿಕೊಡಬೇಕು. ಈಗ ಕೆಲವು ಕೋರ್ಟುಗಳು ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿದೆ. ಈ ಕಟ್ಟಡಗಳು ಹರಕುಮುರುಕು ಕಟ್ಟಡಗಳಾಗಿರುವುದಲ್ಲದೆ ಬಹಳ ಹೀನ ಸ್ಥಿತಿಯಲ್ಲಿವೆ. ಇಂತಹ ಕಟ್ಟಡಗಳಲ್ಲಿ ನ್ಯಾಯಾಲಯಗಳನ್ನು ನಡೆಸುವುದು ಯಾವ ರೀತಿ ಸಾಧ್ಯ ಎಂಬುದನ್ನು ಸರ್ಕಾರದವರು ಯೋಚನೆ ಮಾಡಬೇಕು. ಎಲ್ಲೆಲ್ಲಿ ನ್ಯಾಯಾಲಯಗಳಿಗೆ ಸ್ವಂತ ಕಟ್ಟಡಗಳು ಇಲ್ಲವೋ ಅಲ್ಲೆಲ್ಲಾ ಕಟ್ಟಡಗಳನ್ನು ಕಟ್ಟಿಸಿಕೊಡಬೇಕೆಂದು ಒತ್ತಿ ಹೇಳುತ್ತೇನೆ.

ಸರ್ಕಾರದವರು ರಾಜ್ಯದಲ್ಲಿ ಅನೇಕ ದೊಡ್ಡ ದೊಡ್ಡ ನೀರಾವರಿ ಯೋಜನೆಗಳನ್ನು ಕೈಕೊಂಡಿದ್ದಾರೆ. ಇಂತಹ ಯೋಜನೆಗಳಲ್ಲಿ ಕೆಲಸ ಮಾಡಲು ಇಂಜಿನಿಯರ್‌ಗಳನ್ನು ನೇಮಕ ಮಾಡುವಾಗ ಅವರ ಆಸ್ತಿ ಎಷ್ಟಿದೆ ಎಂಬುದನ್ನು ಮೊದಲು ನೋಡಿಕೊಂಡು ನಂತರ ನೇಮಕ ಮಾಡಬೇಕು. ಆ

ರೀತಿ ಮಾಡದಿದ್ದಗೆ ಶರಾವತಿ ಯೋಜನೆಯಲ್ಲಿ ಆದಂಥ ಅಕ್ರಮಗಳು ಮತ್ತು ಅನ್ಯಾಯಗಳು ಮತ್ತೆ ಆಗಬಹುದು. ಕಾಳಿನದಿ ಯೋಜನೆಯನ್ನು ಕೈಕೊಳ್ಳುವಾಗ ಈರೀತಿಯಾಗದಂತೆ ನೋಡಿಕೊಳ್ಳ ಬೇಕು ಮತ್ತು ಅಧಿಕಾರಿಗಳನ್ನು ನೇಮಕ ಮಾಡುವಾಗ ಎಚ್ಚರಿಗೆ ವಹಿಸಬೇಕೆಂದು ಹೇಳುತ್ತೇನೆ. ಇದರ ಜೊತೆಗೆ ರಾಜ್ಯದಲ್ಲಿ ಎಲ್ಲೆಲ್ಲಿ ನೀರಾವರಿ ಯೋಜನೆಗಳ ಅವಶ್ಯಕತೆ ಇದೆಯೋ ಅಲ್ಲೆಲ್ಲಾ ಕೈಕೊಳ್ಳಬೇಕೆಂದು ಹೇಳುತ್ತೇನೆ. ಧಾರವಾಡ ಜಿಲ್ಲೆಯ ದಕ್ಷಿಣ ಭಾಗದಲ್ಲಿ ಯಾವಾಗಲೂ ಬರಗಾಲವಿರುತ್ತದೆ. ಆದ್ದರಿಂದ ಈ ಭಾಗದಲ್ಲಿ ಸುಮಾರು 3 ಲಕ್ಷ ಎಕರೆಗಳಿಗೆ ನೀರಾವರಿಯಾಗುವಂತೆ ಗಾಜನೂರು ಯೋಜನೆಯನ್ನು ಜಾಗ್ರತೆ ಕೈಕೊಳ್ಳಬೇಕೆಂದು ಹೇಳುತ್ತೇನೆ. ಇದರ ಬಗ್ಗೆ ಪ್ಲಾನ್ ಅಂಡ್ ಎಸ್ಟಿಮೇಟ್ ತಯಾರಾಗಿದೆ ಎಂದು ಕೇಳಿದ್ದೇನೆ. ಈ ಯೋಜನೆಯಿಂದ ಸುಮಾರು 11 ತಾಲ್ಲೂಕ್‌ಗಳಿಗೆ ನೀರಾವರಿ ಅನುಕೂಲವಾಗುತ್ತದೆಂದು ಹೇಳುತ್ತೇನೆ. ಈ ಯೋಜನೆಯಿಂದ ಧಾರವಾಡ, ರಾಯಚೂರು ಮತ್ತು ಶಿವಮೊಗ್ಗ ಜಿಲ್ಲೆಗಳಿಗೆ ಅನುಕೂಲವಾಗುವುದರಿಂದ ಜಾಗ್ರತೆ ಈ ಯೋಜನೆ ಕೆಲಸವನ್ನು ಮುಗಿಸಬೇಕೆಂದು ಒತ್ತಿ ಹೇಳುತ್ತೇನೆ. ಅದೇ ರೀತಿ ರಾಣಿಬೆನ್ನೂರು ಮತ್ತು ಹಿರೆಕೆರೂರಿಗೆ ಅನುಕೂಲವಾಗುವಂತಹ ಮದಗಮಸೂರಕೆರೆ ಯೋಜನೆಯನ್ನು ಜಾಗ್ರತೆ ಮುಗಿಸಬೇಕೆಂದು ಹೇಳುತ್ತೇನೆ. ಈ ಯೋಜನೆಯಿಂದ ಸುಮಾರು 21 ಸಾವಿರ ಎಕರೆಗಳಿಗೆ ನೀರಾವರಿಯಾಗುವುದರಿಂದ ಈ ಯೋಜನೆ ಕೆಲಸವನ್ನು ಜಾಗ್ರತೆ ಸರ್ಕಾರದವರು ಮುಗಿಸುತ್ತಾರೆಂದು ತಿಳಿದುಕೊಂಡು ನನಗೆ ಮಾತನಾಡಲು ಇಷ್ಟೊಂದು ಅವಕಾಶ ಕೊಟ್ಟಿದಕ್ಕೆ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎನ್. ಎಸ್. ಗುರುಸಿದ್ದಪ್ಪ (ಬಿಳಿಗೆರೆ).—ಮಾನ್ಯ ಅಧ್ಯಕ್ಷರೇ, ಮಾನ್ಯ ಲೋಕೋಪಯೋಗಿ ಇಲಾಖೆಯ ಮಂತ್ರಿಗಳು ಮಂಡಿಸಿರುವ ಬೇಡಿಕೆಗಳನ್ನು ವಿರೋಧಿಸಿ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ಶ್ರೀಮಾನ್ ಚೆನ್ನಬಸಪ್ಪನವರು ಮಂತ್ರಿಗಳಾದ ಮೇಲೆ ಕೆಲವು ಇಂಜಿನಿಯರ್‌ಗಳನ್ನು ಸಸ್ಪೆಂಡ್ ಮಾಡಿದರು. ಇದರಿಂದ ಜನಸಾಮಾನ್ಯರಲ್ಲಿ ಇಂಜಿನಿಯರ್‌ಗಳೆಲ್ಲಾ ಲಂಚಕೋರರು, ಈ ಇಲಾಖೆಯಲ್ಲಿ ಲಂಚರುಷುವತ್ತು ಇದೆ ಎಂಬ ಭಾವನೆ ಮೂಡಿದೆ. ಈ ರೀತಿ ಕೆಲವರನ್ನು ಸಸ್ಪೆಂಡ್ ಮಾಡಿದ್ದರಿಂದ ಎಷ್ಟೋ ಜನ ಪ್ರಾಮಾಣಿಕ ಇಂಜಿನಿಯರ್‌ಗಳ ಮನಸ್ಸು ನೊಂದು, ಅವರಲ್ಲಿಯೂ ಧೈರ್ಯ ಮತ್ತು ದಕ್ಷತೆ ಕಡಿಮೆಯಾಗಿದೆ. ಎಷ್ಟೋ ಜನ ಪ್ರಾಮಾಣಿಕರಾದಂಥ ಇಂಜಿನಿಯರ್‌ಗಳು ನಮ್ಮ ದೇಶಕೋಸ್ಕರ ಸೇವೆ ಮಾಡುವುದರ ಮೂಲಕ ತ್ಯಾಗ ಮಾಡಿರುವ ಉದಾಹರಣೆಗಳು ಎಷ್ಟೋ ಇವೆ. ಈ ಕಾರಣದಿಂದ ಯಾರೋ ಕೆಲವರು ಮಾಡಿದ ತಪ್ಪಿಗೆ ಇಡೀ ಇಲಾಖೆಯನ್ನೇ ದೂಷಣೆ ಮಾಡುವುದು ಸರಿಯಲ್ಲ, ಇದರಿಂದ ಜನಸಾಮಾನ್ಯರಲ್ಲಿ ಕೆಟ್ಟ ಭಾವನೆ ಬರುವುದಕ್ಕೆ ಅವಕಾಶವಾಗುತ್ತದೆ. ಇನ್ನು ಮುಂದೆಯಾದರೂ ಸಹ ಯಾರು ಚೆನ್ನಾಗಿ ಕೆಲಸ ಮಾಡುತ್ತಾರೋ ಅಂಥ ಇಂಜಿನಿಯರ್‌ಗಳನ್ನು ಪ್ರಶಂಸಿಸುವುದರ ಮೂಲಕ ಅವರ ತ್ಯಾಗ ಬುದ್ಧಿಯನ್ನು ಮೆಚ್ಚಿಕೊಳ್ಳಬೇಕೆಂದು ಹೇಳುತ್ತೇನೆ. ಈ ರೀತಿ ಮಾಡುವುದರ ಮೂಲಕ ಈ ಇಲಾಖೆಯ ಬಗ್ಗೆ ಜನಸಾಮಾನ್ಯರಲ್ಲಿರುವ ದುರ್ಭಾವನೆಯನ್ನು ಹೋಗಲಾಡಿಸಬೇಕೆಂದು ಹೇಳುತ್ತೇನೆ.

ನನ್ನ ಕ್ಷೇತ್ರದಲ್ಲಿ ಗ್ರಾಮಾಂತರ ರಸ್ತೆಗಳು ಚೆನ್ನಾಗಿಲ್ಲ. ಕೆಲವು ಗ್ರಾಮಗಳಿಗೆ ಮಳೆಗಾಲದಲ್ಲಿ ಹೋಗುವುದೇ ಕಷ್ಟವಾಗಿದೆ. ಕೆಲವು ಊರುಗಳಿಗೆ ಹೋಗಲು ಕಾಲುವೆ ಏರಿ ಮೇಲೆ ರಸ್ತೆ ಮಾಡಿಸಿದ್ದಾರೆ. ಆ ರಸ್ತೆ ಅಗಲವಾಗಿಲ್ಲವಾದ್ದರಿಂದ ವಾಹನಗಳು ಸರಿಯಾಗಿ ಹೋಗುವುದಕ್ಕಾಗದೆ ಸ್ಕಿಡ್ ಆಗುತ್ತಿವೆ. ಈ ಕಾರಣದಿಂದ ಬಸ್‌ಗಳ ಸಂಚಾರಕ್ಕೆ ಅನುಕೂಲವಾಗುವಂತೆ ರಸ್ತೆಗಳನ್ನು ಅಗಲ ಮಾಡಿಸಬೇಕು.

ಸರ್ಕಾರದವರು ನುಗು ಪ್ರಾಜೆಕ್ಟನ್ನು 12 ಸಾವಿರ ಎಕರೆಗೆ ನೀರಾವರಿ ಅನುಕೂಲ ಕಲ್ಪಿಸಿ ಕೊಡಲು ಕಟ್ಟಿಸಿದರು. ನಂತರ ಈ ಪ್ರಾಜೆಕ್ಟನ್ನು ವಿಸ್ತರಿಸಿ 24 ಸಾವಿರ ಎಕರೆಗೆ ನೀರಾವರಿಯಾಗುವಂತೆ ಮಾಡಿದರು. ಆದರೆ 24 ಸಾವಿರ ಎಕರೆಗೆ ನೀರು ಸಾಲದಾದ್ದರಿಂದ, 24 ಸಾವಿರ ಎಕರೆ ಪ್ರದೇಶವನ್ನು ಎರಡು ಬ್ಲಾಕ್ ಮಾಡಿ ಒಂದು ಬ್ಲಾಕ್‌ಗೆ ಒಂದು ವರ್ಷ ಮತ್ತೊಂದು ಬ್ಲಾಕ್‌ಗೆ ಮತ್ತೊಂದು ವರ್ಷ ನೀರು ಕೊಡುವ ಏರ್ಪಾಡು ಮಾಡಿದರು. ಈ ಸಲ ಮಾತ್ರ 24 ಸಾವಿರ ಎಕರೆ ಜಮೀನಿಗೂ ನೀರು ಕೊಡಬೇಕೆಂದು ತೀರ್ಮಾನ ಮಾಡಿದ್ದಾರೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಮತ್ತೊಮ್ಮೆ ವಿಚಾರ ಮಾಡುವುದು ಒಳ್ಳೆಯದು. ಏಕೆಂದರೆ ಅಕಸ್ಮಾತ್ ನೀರು ಸಾಲದೇ ಹೋದರೆ 24 ಸಾವಿರ ಎಕರೆಯಲ್ಲಿರುವ ಬೆಳೆಯೂ ಸಹ ನಷ್ಟವಾಗುತ್ತದೆ.

ಕಬಿನಿ ಪ್ರಾಜೆಕ್ಟನ್ನು ಕಳೆದ 10 ವರ್ಷಗಳಿಂದ ಕಟ್ಟುತ್ತಲೇ ಇದ್ದಾರೆ. ಇದು ಪೂರ್ತಿಯಾಗಲು ಇನ್ನು 10 ವರ್ಷಗಳು ಬೇಕಾಗುತ್ತದೆಂದು ಕಾಣುತ್ತದೆ. ಇದುವರೆಗೆ 14 ಕೋಟಿ ರೂಪಾಯಿಗಳು ಖರ್ಚಾಗಿದೆ. ಇನ್ನೂ 10 ಕೋಟಿ ರೂಪಾಯಿಗಳು ಕೆಲಸ ಪೂರ್ತಿಯಾಗಲು ಬೇಕಾಗಿದೆ.

(ಶ್ರೀ ಎಸ್. ಎನ್. ಗುರುಸಿದ್ದಪ್ಪ)

ಬಹಳ ನಿಧಾನವಾಗಿ ಕೆಲಸವಾಗುತ್ತಿದೆ. ಈ ಯೋಜನೆಯನ್ನು 1974ರೊಳಗೆ ಮದ್ರಾಸ್ ಮತ್ತು ಮೈಸೂರು ರಾಜ್ಯಗಳಿಗೆ ಆಗಿರುವ ಒಪ್ಪಂದದ ಪ್ರಕಾರ ಮುಗಿಸದಿದ್ದರೆ ಮುಂದೆ ನಮಗೆ ಧಕ್ಕೆ ಬರುತ್ತದೆಂದು ಹೇಳುತ್ತೇನೆ.

ಈಗ ರೂರಲ್ ವಾಟರ್ ಸಪ್ಲೆ ಸ್ಕೀಮ್ ಕೆಲಸ ತ್ವರಿತಗತಿಯಿಂದ ಆಗುತ್ತಿಲ್ಲ. ಸ್ಥಳೀಯ ಸಂಸ್ಥೆಯವರು ಕೆಲವು ಕಡೆ ತಮ್ಮ ಭಾಗದ ಹಣವನ್ನು ಕಟ್ಟಿದ್ದರೂ ಸಹ ಅಲ್ಲಿ ಕೆಲಸಗಳನ್ನು ಪ್ರಾರಂಭ ಮಾಡಿಲ್ಲ. ದುಡ್ಡು ಕಟ್ಟಿರುವ ಕಡೆಗಳಲ್ಲಿ ತ್ವರಿತ ಗತಿಯಿಂದ ಕೆಲಸ ಮಾಡಿಸಬೇಕೆಂದು ಹೇಳುತ್ತೇನೆ.

ಇನ್ನು ಮುಂದೆ ಸರ್ಕಾರದವರು ಹೊಸ ಕೆರೆಗಳನ್ನು ಕಟ್ಟಿಸುವ ಬದಲು ಇರುವ ಕೆರೆಗಳನ್ನೇ ರಿಪೇರಿ ಮಾಡಿಸುವುದು ಒಳ್ಳೆಯದು. ನಮ್ಮ ಭಾಗದಲ್ಲಿ ಸುಮಾರು 16 ಕೆರೆಗಳಿವೆ. ಈ ಕೆರೆಗಳ ಬಗ್ಗೆ ಸರಿಯಾದ ನಿಗಾ ಕೊಡುತ್ತಿಲ್ಲ. ಬೇಸಿಗೆಯಲ್ಲಿ ಹೂಳು ತುಂಬಿಕೊಂಡು ಬಿಡುತ್ತದೆ ಈ ಹೂಳನ್ನು ತೆಗೆಸಿದರೆ ಸುಮಾರು ಸಾವಿರ ಎಕರೆಗಳಿಗೆ ನೀರಾವರಿಯಾಗುತ್ತದೆಂದು ಹೇಳುತ್ತೇನೆ. ಉಲ್ಲಳ್ಳಿ ಡ್ಯಾಮ್‌ನಿಂದ ಸುಮಾರು 14 ಸಾವಿರ ಎಕರೆಗೆ ನೀರಾವರಿಯಾಗುತ್ತಿದೆ. ಬೇಸಿಗೆಯಲ್ಲಿಯೂ ಸಹ ನೀರು ಬಿಟ್ಟರೆ ಎರಡು ಬೆಳೆ ಬೆಳೆಯುವುದಕ್ಕೆ ಅನುಕೂಲವಾಗುತ್ತದೆಂದು ಕೇಳಿದರೆ, ಬೇಸಿಗೆಯಲ್ಲಿ ಕಾಮಗಾರಿ ಕೆಲಸಗಳು ನಡೆಯುವುದರಿಂದ ನೀರು ಬಿಡುವುದಕ್ಕಾವುದಿಲ್ಲವೆಂದು ಹೇಳುತ್ತಾರೆ. ಮಂಡ್ಯದಲ್ಲಿ ಮಾತ್ರ ವರ್ಷಕ್ಕೆ ಎರಡು ಸಲ ನೀರು ಬಿಡುತ್ತಾರೆ, ಕಾಮಗಾರಿ ಕೆಲಸವೂ ನಡೆಯುತ್ತಿರುತ್ತದೆ. ಅದೇ ರೀತಿ ಉಲ್ಲಳ್ಳಿ ಡ್ಯಾಮ್‌ನಿಂದಲೂ ಎರಡು ಬೆಳೆಗೆ ನೀರನ್ನು ಏತಕ್ಕೆ ಬಿಡಬಾರದು ಎಂದು ಹೇಳುತ್ತೇನೆ. ನೀರು ಎರಡು ಬೆಳೆಗೆ ಬಿಡುವುದರಿಂದ ಕೂಲಿಗಾರರಿಗೆ ಕೆಲಸವೂ ಸಹ ಸಿಗುತ್ತದೆಂದು ಹೇಳುತ್ತೇನೆ.

ಸುತ್ತೂರು ಸೇತುವೆ ಕೆಲಸವನ್ನು ಈ ಸಲದ ಬಡ್ಜೆಟ್‌ನಲ್ಲಿ ಸೇರಿಸಿಲ್ಲ. ಈ ಸೇತುವೆ ಕೆಲಸ ಪೂರೈಸಿದರೆ ಚಾಮರಾಜನಗರಕ್ಕೆ 15 ಮೈಲಿಗಳಷ್ಟು ಸುತ್ತಿಕೊಂಡು ಹೋಗುವುದು ತಪ್ಪುತ್ತದೆಂದು ಹೇಳುತ್ತೇನೆ. ಅದೇ ರೀತಿ ಟಿ. ನರಸೀಪುರ ಮತ್ತು ನಂಜನಗೂಡು ಮಧ್ಯೆ ಒಂದು ಸೇತುವೆ ಮಾಡಿಸುವುದು ಒಳ್ಳೆಯದೆಂದು ನನ್ನ ಅಭಿಪ್ರಾಯ.

ಲಿಫ್ಟ್ ಇರಿಗೇಷನ್ ವಿಷಯ ಹೇಳುವುದಾದರೆ, ಕಪಿಲೆಹೊಳೆಯ ಎರಡು ಭಾಗದಲ್ಲಿಯೂ ಲಿಫ್ಟ್ ಇರಿಗೇಷನ್‌ಗಳನ್ನು ಸರ್ಕಾರದವರೇ ಮಾಡಿಸುವುದು ಒಳ್ಳೆಯದೆಂದು ನನ್ನ ಅಭಿಪ್ರಾಯ. ಸಣ್ಣ ಸಣ್ಣ ನೀರಾವರಿ ಯೋಜನೆಗಳಿಂದ ಅಷ್ಟಾಗಿ ಉಪಯೋಗವಾಗುತ್ತಿಲ್ಲ. ಆದ್ದರಿಂದ ಇನ್ನು ಮುಂದೆ ಸಣ್ಣ ಸಣ್ಣ ನೀರಾವರಿ ಯೋಜನೆಗಳಿಗೆ ಹಣವನ್ನು ಇನ್‌ವೆಸ್ಟ್ ಮಾಡುವುದಕ್ಕೆ ಮೊದಲು ಅದರಿಂದ ಅನುಕೂಲ ಇದೆಯೇ ಎಂಬುದನ್ನು ಯೋಚನೆಮಾಡಿ ನಂತರ ಕೈಕೊಳ್ಳುವುದು ಒಳ್ಳೆಯದೆಂದು ಹೇಳುತ್ತೇನೆ.

ಮೈಸೂರು ಡಿಸ್ಟ್ರಿಕ್ಟ್‌ನಲ್ಲಿ ನಮ್ಮ ಬಿಳಿಗೆರೆ ತಾಲ್ಲೂಕಿನಲ್ಲಿ ಒಂದು ಕಡೆ ಒಂದೂವರೆ ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಒಂದು ಕೆರೆ ಕಟ್ಟಿಸಿದ್ದಾರೆ. ಈಗ ಅದರಲ್ಲಿ ಒಂದು ಎಕರೆ ಜಮೀನಿಗೂ ನೀರು ಬರುತ್ತಿಲ್ಲ. ಕಿರಾಳು ಎನ್ನುವ ಊರಿನಲ್ಲಿ 60 ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಒಂದು ಕಟ್ಟೆ ಕಟ್ಟಿಸಿದ್ದಾರೆ. ಆ ಕೆರೆಯಲ್ಲಿ ನೀರು ಇಲ್ಲ. ಹೆಣ್ಣಾಳ್ ಎನ್ನುವ ಊರಿನಲ್ಲಿ 6ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಒಂದು ಕಟ್ಟೆ ಕಟ್ಟಿಸಿದ್ದಾರೆ ಅದರಲ್ಲಿ ನೀರು ಇಲ್ಲ. ಇಂಥಾ ಯೋಜನೆಗಳನ್ನು ಹಾಕಿಕೊಂಡು ಸರ್ಕಾರದವರು ಹಣವನ್ನು ಖರ್ಚು ಮಾಡುವುದಾದರೆ ಅದು ನ್ಯಾಷನಲ್‌ವೇಸ್ಟ್ ಆಗುತ್ತದೆ. ಕರುಗುಂದ ಎನ್ನುವ ಊರಿನಲ್ಲಿ ಒಂದು ಕೆರೆ ಕಟ್ಟಲು ಸುಮಾರು ಒಂದು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಆ ಕೆಲಸ ಇನ್ನೂ ಅರ್ಧಂಬರ್ಧ ಆಗಿದೆ, ಆ ಕೆಲಸದಲ್ಲಿ ಅನ್ಯಾಯ ಆಗಿರುವ ಒಂದು ವಿಷಯವನ್ನು ವಿಜಿಲೆನ್ಸ್ ಕಮಿಷನ್ನಿಗೆ ಕಳುಹಿಸಿದ್ದಾರೆ, ಅದು ಇನ್ನೂ ತೀರ್ಮಾನ ಆಗಿಲ್ಲ. ಈಗ ಹಾಲಿ ಮಾಡಿರುವ ಕೆಲಸಗಳೆಲ್ಲಾ ನೀರಿನಲ್ಲಿ ಕೊಚ್ಚಿಹೋಗುತ್ತಿದೆ. ಇದರಿಂದ ದೇಶದ ಸಂಪತ್ತೆಲ್ಲವೂ ಹಾಳಾಗುತ್ತದೆ. ಆದ್ದರಿಂದ ಈ ಕೇಸಿನ ಬಗ್ಗೆ ವಿಜಿಲೆನ್ಸ್ ಕಮಿಷನರ್ ಬೇಗ ಡಿಸೈಡ್ ಮಾಡಿ ಆ ಕೆಲಸವನ್ನು ಮುಂದುವರಿಸಬೇಕೆಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† Sri SUBHASH ASTURE (Bhalki).—Mr. Deputy Speaker Sir, I am standing here to support the demands laid before this House by the Hon. Minister for P.W.D. As you know the Department of P.W.D. is one of the main and vital organs of the Government for the general development of the State. Several hon. members spoke on this subject. The transfers and suspensions of the officers is normally done in the usual course of administrative activities. I do not understand why the hon. Members of the Opposition parties are attributing any motive or they are making a big problem out of this. I do not understand that no Government will unnecessarily punish any officer or suspend any officer unless and until the prima facie case is made out against a particular officer. Unless and until rigorous steps are taken against those who are guilty and unless and until those who are sincere and those who are honest are shielded it is very difficult to run a clean administration. As a matter of fact in the Department of P.W.D. the contractorship is as old as the Department itself. It was born with the Department itself. There are instances wherein the contractors are employed and big projects are got constructed through the contractors under the vigilant supervision of the Government Engineers. Under the circumstances the allegation made against the engagement of contractors in the construction of Sharavathi Valley Project is baseless and there is no substance in it. Therefore with some ulterior motives some charges have been made against the Government and there is no substance in it.

Coming to the problems of my District, I may be permitted to enumerate some of them. As you all know my District is a backward District in the State and it has been declared as such by the Government of India. Some other Districts like Gulbarga and Raichur are also backward in some other respects. In our Gulbarga Division, there are two big projects—one is Upper Krishna in Gulbarga District and another Karanja Project in Bidar District. As a matter of fact since a long time we are representing for construction of Karanja Project at a cost of about Rs. 9 crores and odd which will irrigate about 93 thousand acres in Bhalki and Bidar Taluks. It is really painful that even after our repeated demand, this Karanja project has not found its place in the current budget. I request the Government that Karanja Project as well as the Krishna Project in Gulbarga District should be taken up and given top prority I urge upon the P.W.D. Minister to give more attention towards this Karanja and Upper Krishna Projects. There is one more demand before the Government. We have made this demand since last more than 10 years. There are 11 villages which are surrounded by some small rivers. These villages with a population of 30 to 40 thousand will be cut off with the rest of the world for more than 6 months in a year during rainy season. I therefore urge upon the P.W.D. Minister to construct a causeway at Majra to connect these 11 villages with the rest of the world for the full year. Some of the small works in my District have been taken up

(SRI SUBHASH ASTURE)

but not completed. For instance the lift irrigation works were taken up about 4 years back. These works have not yet been completed. There will be a colossal waste of funds if these are not completed. About Rs. 4 lakhs has been spent for the supply of machinery and for other reasons. These works should be completed so that the public will be benefited at least to some extent. With these few words I thank the Chair and close my speech.

† **Sri BAPU RAO PATIL** (Aurad).—[*in Hindi*]

3–00 P.M.

ಶ್ರೀ ಕೋಣಂದೂರು ಲಿಂಗಪ್ಪ.—ಸ್ವಾಮಿ, ಈ ಅಧಿವೇಶನ ಆರಂಭವಾದ ದಿನದಿಂದ ಹಿಂದಿನ ಉರ್ದು, ಮರಾಠಿ ಭಾಷೆಗಳಲ್ಲಿ ಮಾತನಾಡತಕ್ಕದ್ದನ್ನು ರಿಕಾರ್ಡು ಮಾಡಿಕೊಳ್ಳುವ ವ್ಯವಸ್ಥೆ ಮಾಡಬೇಕೆಂದು ಹೇಳುತ್ತಿದ್ದೇವೆ. ಆದರೆ ಇವತ್ತಿನ ವರೆಗೂ ಏನೂ ಮಾಡಿಲ್ಲ. ಈ ರೀತಿ ಸರ್ಕಾರದವರು ಮಾಡಿದ್ದನ್ನು ನೋಡಿದರೆ ನೀವು ಯಾವ ರೀತಿಯ ಸಮಾಜ ವಾದವನ್ನು ತರುತ್ತೀರಿ ಎಂದು ಗೊತ್ತಾಗುತ್ತದೆ. ನೀವು ಸಮಾಜವಾದವನ್ನು ಹಣದ ಮೇಲೆ ತರುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್ (ವ್ಯವಸಾಯ ಮತ್ತು ಅರಣ್ಯ ಶಾಖೆಗಳ ಮಂತ್ರಿಗಳು).—ತಾವು ರಾಜ್ಯಭಾಷೆ ಕನ್ನಡ ಆಗಬೇಕೆಂದು ಹೇಳುತ್ತಿದ್ದೀರಿ. ಬೇಸಿಕ್ ಆಗಿ ಇಂಗ್ಲೀಷ್ ಇರಬೇಕೆಂದು ಕೆಲವರು ಹೇಳುತ್ತಿದ್ದಾರೆ. ಅಂದ ಮೇಲೆ......

ಶ್ರೀ ಕೋಣಂದೂರು ಲಿಂಗಪ್ಪ.—ರಾಜ್ಯಭಾಷೆ ತಕ್ಷಣವೇ ಆಗಬೇಕೆಂಬುದರಲ್ಲಿ ನಮ್ಮ ಭಿನ್ನಾಭಿಪ್ರಾಯವಿಲ್ಲ. ಇಂಗ್ಲೀಷ್ ಎಲ್ಲಿಯವರೆಗೆ ಇರಬೇಕೆಂದು ಹೇಳುತ್ತಾರೋ ಅಲ್ಲಿಯವರಗೂ ಗುಲಾಮಗಿರಿ ಹೋಗುವುದಿಲ್ಲ. ಅದು ಗುಲಾಮಗಿರಿಯ ಸಂಕೇತದ ಭಾಷೆ. ಆದರೆ ಮರಾಠಿ, ತೆಲುಗು, ಉರ್ದು—ಇವು ಭಾರತದ ಭಾಷೆಗಳು. ಅವನ್ನು ಉಪಯೋಗಿಸಿಕೊಳ್ಳಬೇಕೇ ಹೊರತು ಇಂಗ್ಲಿಷನ್ನಲ್ಲ. ಇಂಗ್ಲೀಷ ನಮ್ಮ ರಾಷ್ಟ್ರಭಾಷೆಯಲ್ಲ.

Sri BAPU RAO PATIL.—(*Hindi*)

Mr. DEPUTY SPEAKER.—The matter of recording speeches in languages other than Kannada and English has come up repeatedly and I desire that the Government would make a statement whether it would be possible to make arrangements. The other day when the matter was raised, it was stated that the matter was seriously under consideration, because it was seriously raised by the hon. Members. Our Legislature is under the Government unlike the Legislature, at Delhi, which is not under the Government but under the President. I learn that a stand has been taken in this behalf. I would like to know from the Government whether it is possible to have Reporters in Hindi and Urdu.

Sri K. H. PATIL.—Mr. Deputy Speaker, As you are already aware, we have got a system of recording English and Kannada speeches. It is very difficult to find Shorthand Reporters in all the languages. Therefore, it is not possible in the immediate future for this Government to make arrangements to take down speeches in other languages. Morever, all the hon. Members are aware of this fact and the difficulties of the Government. I appeal to you, Sir, to see that the hon. Members adopt one of the two languages to deliver their speeches.

ಶ್ರೀ ಕೋಣಂದೂರು ಲಿಂಗಪ್ಪ.—ಮಾನ್ಯ ಮಂತ್ರಿಯವರು ಏನು ಅಭಿಪ್ರಾಯವನ್ನು ಹೇಳು ತ್ತಿದ್ದಾರೆ ಇದನ್ನು ಯಾವ ಸ್ವಾಭಿಮಾನ ಮತ್ತು ರಾಷ್ಟ್ರಪ್ರೇಮವುಳ್ಳ ಪ್ರಾಮಾಣಿಕ ವ್ಯಕ್ತಿಯೂ ಕೇಳಿಕೊಂಡು ಸುಮ್ಮನೆ ಕೂತಿರಲಾರ. ಆದರೆ ಇವರು ಇನ್ನೂ ಸುಮ್ಮನೆ ಕೂತಿರತಕ್ಕಂಥದ್ದು ತೀರಾ ದುರದೃಷ್ಟಕರ. ನೀವು ಬೇಕಾದರೆ ಹೈದರಾಬಾದಿನಿಂದ ಉರ್ದು ವರದಿಗಾರರನ್ನು ತರಿಸಿ, ಬಾಂಬೆಯಿಂದ ಮರಾಠಿ ವರದಿಗಾರರನ್ನು ತರಿಸಿ ಮತ್ತು ಡೆಲ್ಲಿಯಿಂದ ಹಿಂದಿ ವರದಿಗಾರರನ್ನು ತರಿಸಿ. ನೀವು ಅಡ್ವರ್ಟೈಸ್ ಮಾಡಿ ಬರುತ್ತಾರೆ. ನಿಮಗೆ ಅಭಿಮಾನ ಇದರಲ್ಲಿ ಇಲ್ಲ. ಅದನ್ನು ಮಾಡುವುದಕ್ಕೆ ನಿಮಗೆ ಚೈತನ್ಯವಿಲ್ಲವೆಂದು ಹೇಳಿದರೆ ಇದರಲ್ಲಿಯೇ ನಿಮ್ಮ ಹಣೆಬರಹ ಗೊತ್ತಾಗು ತ್ತದೆ. ರಾಜ್ಯದಲ್ಲಿರುವ ಮೈನಾರಿಟಿಯವರು ಇದನ್ನು ಅರ್ಥ ಮಾಡಿಕೊಳ್ಳಬೇಕು.

Sri BAPU RAO PATIL.—(*Hindi*)

†ಶ್ರೀ ಗಟ್ಟಿ ಚಂದ್ರಶೇಖರ್ (ಗುಬ್ಬಿ).—ಅಧ್ಯಕ್ಷ ಮಹೋದಯ, ಯಾವ ದೇಶದಲ್ಲಿಯೇ ಆಗಲೀ ಪ್ರಜಾಪ್ರಭುತ್ವ ಯಶಸ್ವಿಯಾಗಿ ನಡೆಯಬೇಕಾದರೆ ವಿರೋಧಪಕ್ಷ ಪ್ರಬಲವಾಗಿರಬೇಕು. ಆದರೆ ಈ ದೇಶದಲ್ಲಿ ದುರ್ದೈವದಿಂದ 25 ವರ್ಷದ ಅನೀತಿ, ಅನ್ಯಾಯ, ದುರಾಚಾರದ ಆಳ್ವಿಕೆ ಇದ್ದುದರಿಂದ ಇಡೀ ಹಿಂದೂಸ್ಥಾನವೇ ರೋಸಿ ರೊಚ್ಚಿಗೆದ್ದು ಇದುವರೆಗೂ ಅಧಿಕಾರ ನಡೆದಂಥ ಪಕ್ಷವನ್ನು ಇಡೀ ಹಿಂದೂಸ್ಥಾನದಲ್ಲೆಲ್ಲಾ ಕೆಳಮಟ್ಟಕ್ಕೆ ಇಳಿಸಿದರು.

ಶ್ರೀ ಕೋಣಂದೂರು ಲಿಂಗಪ್ಪ.—ಶ್ರೀಮತಿ ಇಂದಿರಾಗಾಂಧಿಯವರ ತಂದೆ ಶ್ರೀ ನೆಹರೂ ಅವರು 20 ವರ್ಷಗಳ ಕಾಲ ಆಡಳಿತ ಮಾಡಿದರು.

ಶ್ರೀ ಗಟ್ಟಿ ಚಂದ್ರಶೇಖರ್.—ಇರಲಿ. ಆ ವಿಷಯ ಗೊತ್ತಿದೆ. ಇವತ್ತು ರಾಷ್ಟ್ರದ ವಿಧಾನ ಸಭೆಗಳಲ್ಲಿ ಪ್ರಬಲವಾದ ವಿರೋಧಪಕ್ಷಗಳು ಇಲ್ಲದೇ ಇರುವುದು ಒಂದು ದೌರ್ಭಾಗ್ಯ. ಆದರೆ ಮೈಸೂರು ವಿಧಾನಸಭೆಯಲ್ಲಿ ಸ್ವಲ್ಪವಾದರೂ ವಿರೋಧ ಪಕ್ಷ ಪ್ರಬಲವಾಗಿದೆಯೆಂದು ನಾನು ತಿಳಿದುಕೊಂಡಿದ್ದೆ. ಆದರೆ ನೆನ್ನೆಯ ದಿವಸ ವಿರೋಧಪಕ್ಷದ ನಾಯಕರು ಮಾಡಿದ ಒಂದೂವರೆ ಗಂಟೆಯ ಭಾಷಣವನ್ನು ನಾನು ಬಹಳ ಮುತುವರ್ಜಿಯಿಂದ ಕೇಳುತ್ತಿದ್ದೆ. ನಾನು ಮೊದಲು ತಿಳಿದುಕೊಂಡಿದ್ದೆ, ವಿರೋಧ ಪಕ್ಷದ ನಾಯಕರು ಸರ್ಕಾರವನ್ನು ಟೀಕೆ ಮಾಡತಕ್ಕ ಸಂದರ್ಭದಲ್ಲಿ ಆಡಳಿತ ನಡೆಸತಕ್ಕ ಪಕ್ಷದ ಮಂತ್ರಿಗಳನ್ನು ಹಾಗೂ ಸರ್ಕಾರದ ಅಧಿಕಾರಿಗಳನ್ನು ದಿಗ್ಭ್ರಮೆ ಹಾಗೂ ಭಯೋತ್ಪಾದನೆಯನ್ನುಂಟುಮಾಡತಕ್ಕ ಮಾತುಗಳನ್ನು ಆಡುತ್ತಾರೆಂದು. ಆದರೆ ಅವರ ಭಾಷಣ ಕೇವಲ ತುಂಬಾ ನಿರಾಶೆಯಾಗಿತ್ತು. ಕೇವಲ ಒಬ್ಬಿಬ್ಬ ಅಧಿಕಾರಿಗಳ ಮೇಲೆ ಒಂದು ವಿಧವಾದ ಆರೋಪಣೆಗಳನ್ನು ಮಾಡುವುದರಲ್ಲಿ ಮುಕ್ತಾಯವಾಯಿತೇ ಹೊರತು, ಯಾವರೀತಿಯಾದ ಕಾನ್ ಕ್ರೀಟ್ ಪ್ರೊಪೋಸಲ್ಸ್, ಕನ್‌ಸ್ಟ್ರಕ್ಟಿವ್ ಕ್ರಿಟಿಸಿಜಮ್ಸನ್ನು ಸರ್ಕಾರದ ಮುಂದೆ ಇಟ್ಟ ಹಾಗೆ ಕಾಣ ಲಿಲ್ಲ. ಇದನ್ನು ನೋಡಿದರೆ 25 ವರ್ಷಗಳು ಅನೀತಿ, ಭ್ರಷ್ಟಾಚಾರದಲ್ಲಿ ಬೆಳೆದಂಥ ಒಬ್ಬ ಯುವಕ ಕೇವಲ 4 ತಿಂಗಳ ಮುಗ್ಧ ಶಿಶುವನ್ನು ಪಾಲನೆ ಮಾಡದಂತಾಗಿದೆ.

ಇನ್ನು ಪಿ.ಡಬ್ಲ್ಯು.ಡಿ. ಬಗ್ಗೆ ಸಮರ್ಥನೆ ಮಾಡುತ್ತಾ ಪಿ.ಡಬ್ಲ್ಯು.ಡಿ. ಇಲಾಖೆ ಮಂತ್ರಿಗಳು ಮಾನ್ಯ ಶ್ರೀ ಚನ್ನಬಸಪ್ಪನವರು ದಕ್ಷ ಆಡಳಿತಗಾರರು. ಈ ದೇಶದಲ್ಲಿ ಅವರು ಪ್ರಖ್ಯಾತಿಯನಿಸಿ ಕೊಂಡಿದ್ದಾರೆ. ಅವರ ಮಾತಿಗೆ ಎದುರು ಹೇಳುವುದಕ್ಕೇ ಆಗುವುದಿಲ್ಲ. ಬಹಳ ಖಡಾಖಂಡಿತ ವಾದಿ. ಅವರ ಮಾತಿಗೆ ವಿರೋಧವಾಗಿ ಹೋಗುವುದಕ್ಕೆ ಒಂದು ಹೆದರಿಕೆಯಾಗುತ್ತದೆಂದು ಅನೇಕರು ಹೇಳಿರುವುದೂ ಉಂಟು. ಹಿಂದೆ ಇವರು ಗೃಹಮಂತ್ರಿಗಳಾಗಿದ್ದಂಥ ಕಾಲದಲ್ಲಿ ಪ್ರೊಹಿ ಬಿಷನ್ ಜಾರಿಗೆ ತಂದಾಗ್ಗೆ ಪ್ರತಿಯೊಂದು ಮನೆಯಲ್ಲಿ ಕಳ್ಳಭಟ್ಟಿ ಸಾರಾಯಿ ಇಳಿಸುವ ಕೈಗಾರಿಕೆ ಸ್ಥಾಪನೆಯಾಗಿತ್ತು. ಈಗಲೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇವರನ್ನು ಕಳ್ಳಭಟ್ಟಿ ಸಾರಾಯಿ ಮಾನ್ಯ ಮಂತ್ರಿಗಳೆಂಬುದಾಗಿ ಕರೆಯುತ್ತಾರೆ. ನಾನು ಹೋದಾಗ ಅಲ್ಲಿ ಅವರನ್ನು ಎಷ್ಟು ಶೀಘ್ರವಾಗಿ ಸಸ್‌ಪೆನ್‌ಷನ್ ಮಂತ್ರಿಗಳೆಂಬ ಹೆಸರೂ ಕೂಡ ಬಂದಿದೆ, ಜನರೂ ಕೂಡ ಆ ರೀತಿ ಅವರನ್ನು ಕರೆಯುತ್ತಿದ್ದಾರೆ ಎಂದಂದುಕೊಂಡೆ. ನಾವು ಸರ್ಕಸ್ಸಿನಲ್ಲಿ ಹುಲಿ ಮತ್ತು ಸಿಂಹಗಳನ್ನು ಆಟ ವಾಡಿಸುವುದಕ್ಕೆ ಒಬ್ಬ ರಿಂಗ್ ಮಾಸ್ಟರ್ ಎಂಬುದಾಗಿ ಇರುತ್ತಾನೆ. ಅವನು ಅವುಗಳನ್ನು ತುಂಬಾ ಹತೋಟಿಯಲ್ಲಿಟ್ಟುಕೊಂಡಿರುತ್ತಾನೆ ಅವು ಎಲ್ಲಿ ಅವನ ಮೇಲೆ ಬೀಳುತ್ತವೋ ಎಂದು ಈಟಿ, ಭರ್ಜಿಗಳನ್ನು ಇಟ್ಟುಕೊಂಡು ಕಂಟ್ರೋಲ್ ಮಾಡುತ್ತಾನೆ. ಅದೇ ರೀತಿ ಇವರು ಅಧಿಕಾರಿಗಳನ್ನು ತುಂಬಾ ಕಂಟ್ರೋಲ್‌ನಲ್ಲಿ ಇಟ್ಟುಕೊಂಡಿರುತ್ತಾರೆ. ಆದರೆ ಕೆಲವರು ಮಾನ್ಯ ಶ್ರೀ ಚನ್ನಬಸಪ್ಪ ನವರು ಮಾಡಿರತಕ್ಕಂಥ ಸಸ್‌ಪೆನ್‌ಷನ್ ಸರಿಯಿಲ್ಲ, ಅವರು ಜಾತಿಯ ಒಂದು ಆಧಾರದ ಮೇಲೆ ಆ ರೀತಿ ಮಾಡಿದ್ದಾರೆ ಎಂಬುದಾಗಿ ಹೇಳುತ್ತಾರೆ. ಇದು ಸತ್ಯಕ್ಕೆ ದೂರವಾದ ಮಾತು. ಮಾನ್ಯ ಶ್ರೀ ಚನ್ನಬಸಪ್ಪನವರಿಗೆ ಜಾತೀಯ ಭೇದಭಾವವಿಲ್ಲ. ಇದು ನೂರಕ್ಕೆ ನೂರರಷ್ಟು ನಿಜ. ಏಕೆಂದರೆ

(ಶ್ರೀ ಗಟ್ಟಿ ಚಂದ್ರಶೇಖರ್)

ಅವರ ಗಧಾ ಪ್ರಹಾರ ಆ ರೀತಿ ಇದೆ. ಕೆಲವರು ಅವರ ಸ್ವಜಾತಿಯವರೇ ಬಹಳ ಜನರು ಇದ್ದಾರೆಂದು ಹೇಳುತ್ತಾರೆ. ಕೇವಲ ಒಬ್ಬ ಮಂತ್ರಿ ಮಾತ್ರ ಹೀಗೆ ಸಸ್‌ಪೆಷನ್ ಮಾಡುತ್ತಾ ಹೋಗಿದ್ದಾರೆ. ಇದು ಒಂದು ಅಪಸ್ವರವಾಗಿದೆ. ಎಲ್ಲಾ ಇಲಾಖೆಗಳಲ್ಲಿಯೂ ಸಂಬಂಧಪಟ್ಟ ಅಧಿಕಾರಿಗಳನ್ನು ತಪ್ಪು ಕಂಡಕೂಡಲೆ ಸಸ್‌ಪೆನ್‌ಷನ್ ಮಾಡಿದರೆ ಮಾತ್ರ ಆಗ ಆಡಳಿತ ಎಲ್ಲಾ ಸರಿಹೋಗುತ್ತದೆ. ಆದರೆ ಈ ರೀತಿಯಾಗಿ ಇವರು ಮಾಡಿದಂತೆ ಎಲ್ಲಾ ಮಂತ್ರಿಗಳು ಮಾಡುವುದಕ್ಕೆ ಹೋದರೆ ಯಾವ ಒಂದು ಆಫೀಸಿನಲ್ಲಿಯೂ ಜವಾನ ಕೂಡ ಇರುವುದಿಲ್ಲ. ಎಲ್ಲರೂ ಸಸ್‌ಪೆನ್‌ಷನ್ ಆಗಬೇಕಾಗಿ ಬರುತ್ತದೆ. ಆದರೆ ಇದಕ್ಕೆ ಕಾರಣ, ಲಂಚದ ಆಪಾದನೆ ಕೇವಲ ಅಧಿಕಾರಿಗಳ ಮೇಲೆ ಅಲ್ಲ, ಸುಮಾರು 25 ವರ್ಷಗಳಿಂದ ಯಾರ್ಯಾರು ರಾಜ್ಯವಾಳಿದರೋ ಅವರು, ಅಧಿಕಾರಿಗಳನ್ನು ತಮ್ಮ ಸ್ವಾರ್ಥಕ್ಕಾಗಿ ಅದರಲ್ಲಿಯೂ ತಮಗೆ ಬೇಕಾದವರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಭ್ರಷ್ಟಾಚಾರದ ಆಪಾದನೆಗಳಿಗೆ ಒಳಗಾದವರು ಯಾರು ಇದ್ದಾರೋ ಅವರು ಹಾಗೂ ಇದುವರೆಗೆ ಆಡಳಿತ ನಡೆಸಿದಂಥ ಮಂತ್ರಿಗಳೂ ಸಹ ಇದಕ್ಕೆ ಜವಾಬ್ದಾರರಾಗಬೇಕು. ಕುದುರೆ ಯಾವಾಗಲೂ ಅದನ್ನು ಹತೋಟಿಗೆ ತೆಗೆದುಕೊಳ್ಳುವ ಸವಾರನನ್ನು ನೋಡುತ್ತದೆ. ಇವರ ಒಂದು ನ್ಯಾಯ ಈ ರೀತಿ ಆಗಿದೆ. ಉದಾಹರಣೆಗೆ ಹೇಳುವುದಾದರೆ, ಇದುವರೆಗೂ ಈ ರಾಜ್ಯದಲ್ಲಿ ಅನೇಕ ಮಂತ್ರಿಗಳೂ, ಮಾಜೀ ಮಂತ್ರಿಗಳೂ ರಾಜ್ಯಾಡಳಿತ ಮಾಡಿದ್ದಾರೆ. ಹತ್ತಾರು ಲಕ್ಷ ರೂಪಾಯಿಗಳ ಮನೆಯನ್ನು ಬೆಂಗಳೂರು ನಗರದಲ್ಲಿಯೇ ಹೊಂದಿರತಕ್ಕವರೂ ಇದ್ದಾರೆ. ಅಂತಹ ಜನಗಳು ಈಗ ಸಮಾಜವಾದದ ಆಡಂಬರ, ಅಬ್ಬರ ಮಾಡುತ್ತಾ ಇರುವುದು ಸಮಾಜವಾದ ನೀತಿಯಾಗಿದೆ. ಇದಕ್ಕೆ ನಾನು ಒಂದು ಉದಾಹರಣೆಯನ್ನು ಹೇಳಬೇಕಾಗಿದೆ. ಒಂದುಸಾರಿ 4 ಜನ ಕುರುಡರು ಒಂದು ಆನೆಯನ್ನು ಮುಟ್ಟಿ ವಿವರಣೆ ಮಾಡಿದರು. ಒಬ್ಬನು ಆನೆಯ ಕಾಲನ್ನು ಮುಟ್ಟಿ ಅದು ಕಂಬದಂತಿದೆ ಎಂದನು. ಇನ್ನೊಬ್ಬ ಅದರ ಬಾಲವನ್ನು ಮುಟ್ಟಿ ಅದು ಹಗ್ಗದಂತಿದೆ ಎಂದನು. ಮತ್ತೊಬ್ಬ ಅದರ ಕಿವಿಯನ್ನು ಮುಟ್ಟಿ ಮರದಂತಿದೆಯೆಂದನು. ಬೇರೊಬ್ಬ ಆನೆಯ ಐದನೆಯ ಕಾಲನ್ನು ಹಿಡಿದುಕೊಂಡು ಅದಕ್ಕೇನೋ ವಿವರಣೆ ಕೊಡುತ್ತಾನೆ. ಅದಕ್ಕೆ ಅವನು ಏನು ಹೇಳಿದನೋ ಅದನ್ನು ನಾನು ಇಲ್ಲಿ ಹೇಳುವುದಿಲ್ಲ. ಇವತ್ತು ಧರ್ಮ ಜಾಗೃತಿ ಆಗಬೇಕು. ಎಷ್ಟೊಂದು ಇಡೀ ದೇಶದಲ್ಲೆಲ್ಲಾ ಲಂಚ ತಾಂಡವವಾಡುತ್ತಿದೆಯೆಂಬುದನ್ನು ಹೇಳುವುದಕ್ಕೆ ಆಗುವುದಿಲ್ಲ. ಬ್ರಹ್ಮ ಬಂದರೂ ಇದನ್ನು ತಪ್ಪಿಸುವುದಕ್ಕಾಗುವುದಿಲ್ಲ. ಪಾಸ್ಟ್ ಈಸ್ ಪಾಸ್ಟ್ ಎಂಬ ಒಂದು ತೀರ್ಮಾನಕ್ಕೆ ಈಗ ಬರಬೇಕು. ಇನ್ನುಮುಂದೆ ಜನತೆಯಲ್ಲಿ ಧರ್ಮಜಾಗೃತಿ ಉಂಟಾಗಬೇಕು. ಎಲ್ಲಕ್ಕಿಂತಲೂ ಮುಖ್ಯವಾಗಿ ಈ ಮನೆಯ 216 ಜನರಲ್ಲಿ ಮೊಟ್ಟಮೊದಲು ಧರ್ಮ ಜಾಗೃತಿ ಆಗಬೇಕು. ಆಗ ಈ ದೇಶದ ಆಡಳಿತ ಸರಿಹೋಗುತ್ತದೆ. ಇಷ್ಟು ಹೇಳಿ ಈ ಬೇಡಿಕೆಗಳ ಬಗ್ಗೆ ನಮ್ಮ ತಾಲ್ಲೂಕಿಗೆ ಸೇರಿದಂಥ ಕೆಲವು ವಿಚಾರಗಳನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. ತುಮಕೂರು ಜಿಲ್ಲೆಗೆ ಜೀವನಾಡಿಯಾಗಿರತಕ್ಕ ಹೇಮಾವತಿಯ ನೀರನ್ನು ಮಾನ್ಯ ಮಂತ್ರಿಗಳಿಗೆ ಏನು ಕಷ್ಟವಾದರೂ ತುಮಕೂರು ಜಿಲ್ಲೆಗೆ ತರಬೇಕೆಂದು ನಾನು ವಿನಯಪೂರ್ವಕವಾಗಿ ಪ್ರಾರ್ಥನೆಮಾಡುತ್ತೇನೆ. ಎರಡನೆದಾಗಿ ಇವತ್ತು ಆಡಳಿತದಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಗೆ ಬೇಜಾರಾಗಿರತಕ್ಕ ಅನೇಕ ನಿದರ್ಶನಗಳು ಇವೆ. ಸುಮಾರು 500 ಜನ ಅಸಿಸ್ಟೆಂಟ್ ಇಂಜನಿಯರ್ಸ್ ಮತ್ತು ಎಗ್ಜಿಕ್ಯುಟಿವ್ ಇಂಜನಿಯರ್ಸ್ ತಮಗೆ ಸಲ್ಲಬೇಕಾದ ಪ್ರೊಮೋಷನ್ ಸಲ್ಲಲಿಲ್ಲ. ತಮಗಿಂತ ಕೆಳದರ್ಜೆಯಲ್ಲಿರುವವರು ಅಧಿಕಾರ ಮಾಡುತ್ತಾರೆ, ಇಷ್ಟು ಸತ್ಯವಾಗಿ ದುಡಿಯುತ್ತಿದ್ದರೂ ಏನೂ ಪ್ರಯೋಜನವಿಲ್ಲವೆಂಬ ನಿರ್ಧಾರಕ್ಕೆ ಬಂದಿದ್ದಾರೆ. ಆ ಬಗ್ಗೆ ನನಗೆ ಒಂದು ಮೆಮೊರ್ಯಾಂಡಂ ಕೊಟ್ಟಿದ್ದಾರೆ. ಅದನ್ನು ಮಾನ್ಯ ಮಂತ್ರಿಗಳ ಕಡೆಗೆ ಕಳುಹಿಸುತ್ತೇನೆ. ಇನ್ನು ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ರಸ್ತೆಗಳ ವಿಚಾರಕ್ಕೆ ಬಂದರೆ ಅಲ್ಲಿ ಅನೇಕ ರಸ್ತೆಗಳು ಪಿ.ಡಬ್ಲ್ಯು.ಡಿ.ಗೆ ಸೇರಿವೆ ಅಂಥಾ ರಸ್ತೆಗಳಿಗಾದರೂ ಟಾರ್ ಮಾಡಿಸಿ ಎಂದು ಕೇಳಿಕೊಳ್ಳುತ್ತೇನೆ.

ಹೀಗೆ ಅನೇಕ ಸಣ್ಣ ಸಣ್ಣ ಕೆರೆಗಳು ಲೋಕೋಪಯೋಗಿ ಶಾಖೆಗೆ ಸೇರಿರುತ್ತವೆ. ಆದರೆ ಅವುಗಳ ಮೇಲೆ ಆ ಇಲಾಖೆಗೆ ಯಾವ ಕಂಟ್ರೋಲೂ ಇಲ್ಲ. ಆ ಕೆರೆಗಳಲ್ಲಿರತಕ್ಕ ನೀರನ್ನು ಅಲ್ಲಿರತಕ್ಕ ಸೌಡಿಗಳು ಸ್ಥಳೀಯ ಪ್ರಭಾವಶಾಲಿಗಳ ಒತ್ತಡಕ್ಕೆ ಸಿಕ್ಕಿ ನೀರನ್ನು ಪೋಲು ಮಾಡುತ್ತಿದ್ದಾರೆ. ಇದರಿಂದ ಸ್ಥಳದಲ್ಲಿ ಇಲ್ಲದ ವ್ಯವಹಾರಗಳಿಗೆ ಕಾರಣವಾಗಿದೆ. ಆದ್ದರಿಂದ ಇನ್ನಾದರೂ ಇಲಾಖೆಯವರು ಕಟ್ಟುನಿಟ್ಟಾದ ರೀತಿಯಲ್ಲಿ ಆ ಸೌಡಿಗಳಿಗೆ ತಿಳಿಸಿ ನೀರನ್ನು ಪೋಲುಮಾಡದಂತೆ ನೋಡಿಕೊಳ್ಳಬೇಕೆಂದು ಸೂಚಿಸಿ ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಸನ್ಮಾನ್ಯ ಅಧ್ಯಕ್ಷರೇ, ನಾನು ವಿವರವಾಗಿ ಈ ಸಂದರ್ಭದಲ್ಲಿ ಏನೂ ಹೇಳುವುದಕ್ಕಾಗುವುದಿಲ್ಲ. ಅದಕ್ಕೆ ಕಾರಣ ಕಾಲದ ಕೊರತೆ. ಸಭೆಯಲ್ಲಿ ನಿನ್ನೆ ಮತ್ತು ಈ ದಿವಸ ಇಲ್ಲಿ ನಡೆದಂಥ ಚರ್ಚೆಯನ್ನು ಕೇಳಿದಾಗ ನನಗೆ ಒಂದು ಕಥೆ ಜ್ಞಾಪಕಕ್ಕೆ ಬಂದಿತು. ಅತ್ತ ಕಡೆ ಇರತಕ್ಕ ಕಾಂಗ್ರೆಸ್ ಆರ್. ನವರೂ ಮತ್ತು ಇತ್ತ ಕಡೆ ಇರತಕ್ಕ ಕಾಂಗ್ರೆಸ್ ಓ. ನವರೂ ಈ ಇಬ್ಬರೂ ಕೌರವರು - ಪಾಂಡವರು ಇದ್ದ ಹಾಗೆ. ಇವರು ಅವರನ್ನು ದೂಷಣೆ ಮಾಡುವುದು, ಅವರು ಇವರನ್ನು ದೂಷಣೆ ಮಾಡುವುದು ಇಷ್ಟರಲ್ಲೇ ಇದೆಲ್ಲಾ ಪರ್ಯವಸಾನವಾದಂತೆ ಕಾಣುತ್ತಿದೆ. ಆದರೆ ನಮ್ಮ ಪಕ್ಷದವರು ಇಲ್ಲಿ ಆ ವಿದುರನ ಹಾಗೆ ನ್ಯಾಯ ಹೇಳುವುದಕ್ಕೆ ಬಂದಿದ್ದೇವೆ. ನನಗೆ ಜ್ಞಾಪಕಕ್ಕೆ ಬರುತ್ತಿರುವ ಕಥೆ ಏನೆಂದರೆ—ಒಂದೂರಿನಲ್ಲಿ ಒಬ್ಬ ತಂದೆ ತಾಯಿಗಳಿಗೆ ಒಬ್ಬ 25 ವರ್ಷದ ಅಂದರೆ ತಾರುಣ್ಯದ ಮಗನಿದ್ದನಂತೆ. ಈ ದಿವಸ ಈ ಕಾಂಗ್ರೆಸ್ಸಿನಲ್ಲಿರತಕ್ಕ ಇವರುಗಳಿಗೂ 25 ವರ್ಷದ ತಾರುಣ್ಯ ಬಂದಿದೆ. ಆ ತಂದೆ ತಾಯಿಗಳಿಗೆ ತಾರುಣ್ಯಕ್ಕೆ ಬಂದಿದ್ದ ಮಗನೇನಿದ್ದ ಅವನು ಆ ಇಬ್ಬರನ್ನೂ ಕೊಂದು ಹಾಕಿದನಂತೆ. ಹಾಗೆ ತಂದೆ ತಾಯಿಗಳಿಬ್ಬರನ್ನೂ ಕೊಂದುಹಾಕಿದ್ದರ ಬಗ್ಗೆ ಆ ಮಗನನ್ನು ನ್ಯಾಯಾಲಯದ ಮುಂದೆ ಎಳೆದುಕೊಂಡು ಹೋದಾಗ ಅಲ್ಲಿ ಆ ತಾರುಣ್ಯದಲ್ಲಿದ್ದ ಮಗ ಹೇಳಿದನಂತೆ—'ನಾನು ಅನಾಥ ತಬ್ಬಲಿ, ನನಗೆ ತಂದೆ ತಾಯಿಗಳು ಯಾರೂ ಇಲ್ಲ. ನನ್ನನ್ನು ತಾವು ಕಾಪಾಡಿ' ಎಂದು ಬೇಡಿಕೊಂಡನಂತೆ. ಅಲ್ಲಿ ತಂದೆ ತಾಯಿಗಳನ್ನು ಕಳೆದುಕೊಂಡು ತಬ್ಬಲಿ ಎಂದು ಆ ತಾರುಣ್ಯದಲ್ಲಿದ್ದವನು ಹೇಳಿಕೊಂಡಹಾಗೆ ಇಲ್ಲಿ ನೀವೆಲ್ಲರೂ ತತ್ವಗಳನ್ನು ಕೊಲೆ ಮಾಡಿ ತಾವೆಲ್ಲರೂ ತಬ್ಬಲಿಗಳೆಂದು ಹೇಳಿಕೊಳ್ಳುತ್ತಿದ್ದೀರಿ. ಈಗ ಜನತೆಯೇ ನ್ಯಾಯಾಧೀಶರು. ಅವರು ತೀರ್ಮಾನ ಕೊಡಬೇಕಾಗಿದೆ. ಜನತೆಗೆ ಈ ಕಾಂಗ್ರೆಸ್ಸಿನವರ ಒಳ ಹುಳುಕು ಗೊತ್ತಿರಲಿಲ್ಲ. ಜನತೆ ಇವರಿಗೆ ಪಾಠ ಕಲಿಸತಕ್ಕ ಕಾಲ ಇನ್ನು ಬಹಳ ದೂರವೇನೂ ಇಲ್ಲ. ದೀಪ ಆರಬೇಕಾಗಿದ್ದರೆ ದೊಡ್ಡದಾಗಿ ಪ್ರಜ್ವಲಿಸಿ ಭಕ್ಕನೆ ಆರಿಹೋಗುವಂತೆ ಈ ನಿಮ್ಮ ಪ್ರಾಜ್ವಲ್ಯಮಾನ ನಿಮ್ಮ ಅಳಿವಿನ ಮುನ್ಸೂಚನೆ ಎಂಬುದನ್ನು ತಾವುಗಳು ಯಾರು ಮರೆಯಬಾರದು. ಜನತೆ ನಿಮ್ಮೆಲ್ಲರನ್ನು ದಂಡಿಸತಕ್ಕ ಕಾಲ ಬಹಳ ದೂರವಿಲ್ಲ. ದೇಶಕ್ಕೆ ಸ್ವಾತಂತ್ರ್ಯ ಬಂದ ತರುವಾಯ ಇಲ್ಲಿ ಪ್ರಜಾಪ್ರಭುತ್ವಾಡಳಿತ ಜಾರಿಗೆ ಬಂದಮೇಲೆ ಇಲ್ಲಿ ಶಾಸನ ಸಭೆಗೆ ಸದಸ್ಯರಾದವರೂ ಮಂತ್ರಿಗಳಾದವರೂ ಮತ್ತು ಗೆಜೆಟೆಡ್ ಹುದ್ದೆಗಳನ್ನು ಪಡೆದವರು ಅದನ್ನು ಪಡೆಯದೆ ಇದ್ದವರು ಇವರೆಲ್ಲರ ವಿಚಾರಣೆ ಆಗಲೇಬೇಕು. ಅದಕ್ಕೆ ಯಾರೂ ತಪ್ಪಿಸಿಕೊಳ್ಳುವಂತಿಲ್ಲ. ಈ ವಿಚಾರಣೆ ಆಗಬೇಕು ಎಂಬುದಾಗಿ ಆ ಪಾರ್ಲಿಯಮೆಂಟಿನಲ್ಲಿ ನಮ್ಮ ಪ್ರಧಾನ ನಾಯಕರಾದ ಲೋಹಿಯಾರವರೂ ಮತ್ತು ರಾಜ್ಯಮಟ್ಟದಲ್ಲಿ ಶ್ರೀ ಗೋಪಾಲಗೌಡರು ಇದನ್ನು ಹೇಳುತ್ತಲೇ ಬಂದಿದ್ದಾರೆ. ಆದರೆ ನಾನು ಆ ಶರಾವತಿ ಬಗ್ಗೆ ಹೆಚ್ಚಿಗೆ ಮಾತನಾಡುವುದಕ್ಕೆ ಹೋಗದೆ ಒಂದು ಮಾತನ್ನು ಮಾತ್ರ ಹೇಳುತ್ತೇನೆ. ಆ ಅಧಿಕಾರಿಗಳ ಹೇಳಿಕೆ ಈ ಮಂತ್ರಿಮಂಡಲಗಳ ಕುಣಿತ ಹೇಗಿದೆ ಎಂದರೆ 'ಕುಂಟಿ ಕುಣಿತಕ್ಕೆ—ತೂತು ಮದ್ದಲೆ' ಎನ್ನುವ ಗಾದೆಗೆ ಸರಿಯಾಗಿದೆ. ಅಲ್ಲಿ ಮಾಡಿರತಕ್ಕ ಕೆಲಸವೆಲ್ಲಾ ಹಾಳಾಗುತ್ತಿದೆ ಎಂದು ಈಗ ಹೇಳುತ್ತಿದ್ದಾರೆ. ಹಿಂದೆಯೇ ಅಲ್ಲಿ ಕೆಲಸದ ಛಾರ್ಜಿನಲ್ಲಿದ್ದ ಅಧಿಕಾರಿಗಳು ಸರಿಯಾಗಿ ಕೆಲಸ ನಡೆಯುತ್ತಿಲ್ಲ ಎಂದು ಸರ್ಕಾರಕ್ಕೆ ವರದಿಯನ್ನು ಮಾಡಿದಾಗ ಅವರ ಬಾಯನ್ನು ಮುಚ್ಚಿಸಿ ಆ ಕೆಲಸ ಹೇಗಾದರೂ ನಡೆಯಲಿ ಎಂದು ಹೇಳಿ ಕಂಟ್ರಾಕ್ಟರಿಂದ ಸಾಗರದಲ್ಲಿ ಶ್ರೀಗಂಧದ ಕರಂಡವನ್ನು ಬಹುಮಾನವಾಗಿ ಪಡೆದ ಮಂತ್ರಿಗಳು ಯಾರು ? ಆ ದಿವಸ ಅಲ್ಲಿದ್ದ ಶ್ರೀ ಚನ್ನಬಸಪ್ಪನವರು ಈ ದಿವಸ ಇಲ್ಲಿದ್ದಾರೆಯೋ ? ಹೀಗೇ ಮೊನ್ನೆ ನಮ್ಮ ರಾಜ್ಯದ ಜಲಮಂಡಳಿಯವರು ನಮ್ಮ ರಾಜ್ಯಪಾಲರಾದ ಧರ್ಮವೀರ ಅವರಿಗೆ ಚಿತ್ರಗಳನ್ನು ಕೊರೆಯಿಸಿ ಬೆಳ್ಳಿ ತಟ್ಟೆಯೊಂದನ್ನು ಬಹುಮಾನವಾಗಿ ಕೊಟ್ಟರಂತೆ. ಇಂಥ ಕಾರಣಗಳಿಂದ ಆ ರಾಜ್ಯಪಾಲರಿದ್ದ ಕಾಲದಲ್ಲಿ ಇಲ್ಲಿ ಏನೇನೋ ಕೆಲಸಗಳು ನಡೆದಿವೆ. ಆಗಬಾರದ್ದೆಲ್ಲಾ ಆಗಿದೆ. ಅವರೂ ಕೂಡ ಚೆನ್ನಾಗಿ ಆಸ್ತಿ ಸಂಪಾದನೆ ಮಾಡಿದ್ದಾರಂತೆ. ಆದ್ದರಿಂದ ಅವರಿಗೂ ಎಷ್ಟು ಆಸ್ತಿ ಇದೆ, ಎಷ್ಟು ಮನೆಗಳು ಇವೆ ಎಂಬುದನ್ನು ಕಂಡು ಹಿಡಿಯಲು ಅವರನ್ನೂ ಕೂಡ ನ್ಯಾಯಾಂಗ ತನಿಖೆಗೆ ಒಳಪಡಿಸಬೇಕು. ಹೀಗೆ ಎಲ್ಲರನ್ನೂ ನ್ಯಾಯಾಂಗ ತನಿಖೆಗೆ ಒಳಪಡಿಸಿ ವಿಚಾರಣೆ ನಡೆಸಿ ತಪ್ಪಿತಸ್ಥರನ್ನು ಗಲ್ಲಿಗೇರಿಸತಕ್ಕ ಕಾಲ ಬೇಗ ಸಮೀಪಿಸುತ್ತಿದೆ. ಇನ್ನು ಶ್ರೀಮಾನ್ ಚನ್ನಬಸಪ್ಪನವರ ವೈಯಕ್ತಿಕ ವಿಚಾರಣೆ ಬಂದರೆ ಇವರು ಬಹಳ ಜ್ಞಾನವೃದ್ಧರೂ ವಯೋವೃದ್ಧರೂ ಹೌದು. ಇವರು ತಮ್ಮ ಕೈಕೆಳಗೆ ಕೆಲಸ ಮಾಡತಕ್ಕ ಅದಿಕಾರಿಗಳನ್ನು ಸಸ್ಪೆಂಡ್ ಮಾಡುವುದರಲ್ಲಿ ಬಹಳ ಘಟ್ಟಿಗರೆಂದು ಶ್ರೀ ಘಟ್ಟಿ ಚಂದ್ರಶೇಖರ್ ಅವರು ಹೇಳಿದರು. ಆದರೆ ಈ ಮಾನ್ಯ ಸದಸ್ಯರು ಅವರಿಗೆ ಬಹಳ ಹತ್ತಿರ ಎಂದು ಹೇಳುತ್ತಾರೆ. ಅವರಿಗೆ ಯಾರು ಹತ್ತಿರವೋ ಯಾರು ದೂರವೋ ಹೇಳುವುದಕ್ಕಾಗುವುದಿಲ್ಲ. ಈಗ ಇವರು ಆರ್. ಚಂದ್ರ ಎನ್ನತಕ್ಕವರೊಬ್ಬರನ್ನು ಸಸ್ಪೆಂಡ್ ಮಾಡಿದ್ದಾರೆ. ಏಕೆ ? ಅವರು ತಪ್ಪು ಮಾಡಿದ್ದರೆ ಕೂಡಲೆ ವಿಚಾರಣೆ ನಡೆಸಿ ಅವರಿಗೆ ಶಿಕ್ಷೆ ಕೊಡಿ. ಇನ್ನು ಮಾನ್ಯ ಚನ್ನಬಸಪ್ಪನವರ ಮೇಲೆ ಇನ್ನೂ ಒಂದು ಆರೋಪ ಏನಿದೆ ಎಂದರೆ ಅವರು ತಮಗೆ ಬೇಕಾದವ

(ಶ್ರೀ ಕೋಣಂದೂರು ಲಿಂಗಪ್ಪ)

ರೊಬ್ಬರಿಗೆ ಚೀಫಿಂಜಿನಿಯರಾಗಿ ಪ್ರಮೋಟ್ ಮಾಡಬೇಕೆಂದು ಇನ್ನು 5—6 ತಿಂಗಳೊಳಗೇ ಚೀಫಿಂಜಿನಿಯರಾಗಬೇಕಾಗಿದ್ದ ಶ್ರೀ ಹನುಮಂತರೆಡ್ಡಿ ಎಂಬ ಒಬ್ಬ ಸೂಪರಿಂಟೆಂಡಿಂಗ್ ಇಂಜಿನಿಯರನ್ನು ಸಸ್ಪೆಂಡ್ ಮಾಡಿದ್ದಾರೆಂದು ಮತ್ತು ಅವರಿಗೆ ಹಾಗೆ ಒಂದು ಅಡ್ಡಗಾಲು ಕೊಡತಕ್ಕದ್ದು ಜಾತೀ ಆರೋಪದ ಮೇಲೆ ನಿಂತಿದೆ ಎಂದು ಜನ ಹೇಳುತ್ತಿದ್ದಾರೆ. ಅದಕ್ಕೆ ಇವರೇನು ಹೇಳುತ್ತಾರೆ?

ಇನ್ನು ಹಿಂದೆ ಆ ಶರಾವತಿ ವಿಚಾರದಲ್ಲೇ ಕೆಲವು ಆಪಾದನೆಗಳಿದ್ದಿದ್ದಾಗ ಶ್ರೀಮಾನ್ ನಿಜಲಿಂಗಪ್ಪನವರು ಇಲ್ಲಿ ರಾಜ್ಯದ ಮುಖ್ಯ ಮಂತ್ರಿಗಳಾಗಿದ್ದರು. ಆಗ ಅವರು ಕೇಂದ್ರದಲ್ಲಿ ಮಂತ್ರಿಗಳಾಗಿದ್ದ ಶ್ರೀ ಕೆ. ಎಲ್. ರಾವ್ ಅವರನ್ನು ಕರೆಸಿ ವಿಚಾರಣೆ ನಡೆಸಿ ಅಲ್ಲಿ ಏನೂ ತಪ್ಪಿಲ್ಲ ಎಲ್ಲವೂ ಸರಿಯಾಗಿದೆ ಎಂದು ಅವರಿಂದ ಒಂದು ಸರ್ಟಿಫಿಕೇಟನ್ನು ತೆಗೆದುಕೊಂಡಿದ್ದರು. ಆದರೆ ಈಗ ಶ್ರೀ ಚನ್ನಬಸಪ್ಪನವರು ಆ ಕಾಲದಲ್ಲೇ ಇಲ್ಲಿ ಅನೇಕ ಅವ್ಯವಹಾರಗಳು ನಡೆದಿವೆ ಎಂದು ಹೇಳುತ್ತಿದ್ದಾರೆ. ಇವರ ಹೇಳಿಕೆ ಸರಿಯಾಗಿದ್ದ ಪಕ್ಷದಲ್ಲಿ ಅದನ್ನು ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರಿಗೆ ತಿಳಿಸಿ ಆ ಕೆ. ಎಲ್. ರಾವ್ ಅವರನ್ನು ಮಂತ್ರಿ ಪದವಿಯಿಂದ ಹೊರಗೆ ಹಾಕಿಸಿ. ಇಲ್ಲವೇ ಶ್ರೀಮಾನ್ ಚನ್ನಬಸಪ್ಪನವರು ಹೇಳತಕ್ಕ ಹೇಳಿಕೆ ಸರಿಯಾಗಿಲ್ಲದಿದ್ದರೆ ಶ್ರೀಮಾನ್ ದೇವರಾಜ ಅರಸರು ಇವರನ್ನ ಮಂತ್ರಿ ಸ್ಥಾನದಿಂದ ಕಿತ್ತು ಹೊರಗೆ ಹಾಕಬೇಕು. ಈ ಇಬ್ಬರ ಹೇಳಿಕೆಯಲ್ಲಿ ಯಾವುದು ಸರಿ ಯಾವುದು ತಪ್ಪು ಎಂದು ಕೇಳುತ್ತೇನೆ.

ಇನ್ನು ಮಲೆನಾಡಿನ ಬಗ್ಗೆ ಸರ್ಕಾರದವರು ಮಲತಾಯಿ ಧೋರಣೆಯನ್ನು ತಾಳಿದ್ದಾರೆ. ಅಲ್ಲಿ ಈ ಸರ್ಕಾರಗಳು ಬಂದಮೇಲೆ ನಮ್ಮಲ್ಲಿ ಹೊಸದಾಗಿ ಯಾವ ಕೆರೆಕಟ್ಟೆಗಳೂ ಆಗಿಲ್ಲ. ಅಲ್ಲಿರತಕ್ಕ ಕೆರೆಗಳೆಲ್ಲಾ ಶಿವಪ್ಪನಾಯಕನ ಕಾಲದ ಕೆರೆಗಳು. ಇಲ್ಲಿಯತನಕ ಅವುಗಳ ದುರಸ್ತಿ ಇಲ್ಲದೆ ಅವುಗಳೆಲ್ಲಾ ಹೂಳು ಮುಚ್ಚಿರುತ್ತವೆ. ಅವುಗಳಲ್ಲಿ ನೀರು ನಿಲ್ಲುವುದಕ್ಕೆ ಅವಕಾಶವಿಲ್ಲದಂತಾಗಿದೆ. ಹಾಗೆ ನಮ್ಮ ಜಿಲ್ಲೆಯಲ್ಲಿ ಇತ್ತೀಚೆಗೆ ಯಾವ ಮೋರಿಗಳಾಗಲಿ ಸೇತುವೆಗಳಾಗಲಿ ಹೊಸದಾಗಿ ಆಗಿಲ್ಲ. ಅದರಲ್ಲೂ ನನ್ನ ಕ್ಷೇತ್ರವಾದ ತೀರ್ಥಹಳ್ಳಿ ಮತ್ತು ಹೊಸನಗರ ತಾಲ್ಲೂಕುಗಳಲ್ಲಿ ಯಾವ ಅಭಿವೃದ್ಧಿಯ ಕೆಲಸಕಾರ್ಯಗಳೂ ನಡೆದಿಲ್ಲ. ಅವನ್ನು ಬಹಳ ನಿರ್ಲಕ್ಷ್ಯ ಮಾಡಿದ್ದಾರೆ. ಹಿಂದೆ ಶ್ರೀ ಕಡಿದಾಳರಿದ್ದಾಗ್ಗೆ ಅಲ್ಲಿ ಸ್ವಲ್ಪ ಕೆಲಸಕಾರ್ಯಗಳಾಗಿದ್ದವು. ಅಲ್ಲಿಂದಿತ್ತೀಚೆಗೆ ಅಲ್ಲಿ ಒಂದು ಇಂಚ್ ಕೂಡ ಹೊಸದಾಗಿ ರಸ್ತೆಯಾಗಿಲ್ಲ; ಮೋರಿಗಳನ್ನು ಮಾಡಿಲ್ಲ. ಮಲೆನಾಡಿಗೆ ಸಂಬಂಧಪಟ್ಟ ಎಲ್ಲಾ ಅಭಿವೃದ್ಧಿ ವಿಚಾರಗಳನ್ನೂ ಸಮಗ್ರವಾಗಿ ಪರಿಶೀಲಿಸಿ ಒಂದು ತೀರ್ಮಾನಕ್ಕೆ ಬಂದು ಅದರಂತೆ ಕೆಲಸಕಾರ್ಯಗಳನ್ನು ಕೈಗೊಳ್ಳುವಂತೆ ಮಾಡಲು ಅಲ್ಲಿಗೆ ಒಂದು 'ಮಲೆನಾಡು ಅಭಿವೃದ್ಧಿ ಮಂಡಳಿ' ಎಂದು ಒಂದು ಕಮಿಟಿಯನ್ನು ಸ್ಥಾಪನೆ ಮಾಡಬೇಕೆಂದು ಕೇಳಿಕೊಂಡು ಇನ್ನು ನಾನು ಈ ಮಿನಿ ಮೈನರ್ ಇರಿಗೇಷನ್ ಪ್ರಾಜೆಕ್ಟ್‌ಗಳ ವಿಚಾರಕ್ಕೆ ಬರುತ್ತೇನೆ. ಮಿನಿ ಮೈನರ್ ಇರಿಗೇಷನ್ ಪ್ರಾಜೆಕ್ಟ್‌ಗಳನ್ನು ತೆಗೆದುಕೊಳ್ಳಲು ಸರ್ವ ಪ್ರಯತ್ನ ಮಾಡಬೇಕು. ಕೋಟಿಗಟ್ಟಲೆ ಖರ್ಚು ಮಾಡಿ ದೊಡ್ಡ ದೊಡ್ಡ ಪ್ರಾಜೆಕ್ಟುಗಳನ್ನು ಮಾಡುವುದಕ್ಕೆ ಬದಲಾಗಿ 10-20 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಸಣ್ಣ ಸಣ್ಣ ಪ್ರಾಜೆಕ್ಟುಗಳನ್ನು ಕೈಕೊಂಡರೆ ಅನುಕೂಲವಾಗುವುದು, ಪಂಪುಸೆಟ್ಟುಗಳನ್ನು ಹಾಕಿ ನೀರಾವರಿ ಮಾಡಲು ಅನುಕೂಲ ಮಾಡಬೇಕು, ಇದರಿಂದ ಸಣ್ಣ ರೈತರಿಗೆ ಅನುಕೂಲವಾಗುವುದು. ನಮ್ಮ ಕ್ಷೇತ್ರದಲ್ಲಿನ ವಾರಾಹಿ ಪ್ರಾಜೆಕ್ಟಿನ ಬಗ್ಗೆ ವಿವರ ಹೇಳಬೇಕು. ವಿದ್ಯುಚ್ಛಕ್ತಿ ಬಗ್ಗೆ ಹೇಳುವುದಾದರೆ ನಮ್ಮ ತಾಲ್ಲೂಕಿನಲ್ಲಿ ಅನೇಕ ಟ್ರಾನ್ಸ್‌ಫಾರ್ಮರುಗಳು ಸುಟ್ಟುಹೋಗಿವೆ. ಅದರ ವಿಚಾರ ಈಗ ಅವಕಾಶವಿಲ್ಲದಿರುವುದರಿಂದ ಮುಂದೆ ಹೇಳುತ್ತೇನೆ, ಹಿಂದೆಯೂ ಹೇಳಿದೆ. ಮಂಗಳೂರು, ಮಲ್ಪೆ ಮತ್ತು ಕಾರವಾರ ಬಂದರುಗಳ ಕೆಲಸ ತೆಗೆದುಕೊಂಡು ಆ ಬಂದರುಗಳನ್ನು ಅಭಿವೃದ್ಧಿಪಡಿಸಬೇಕು. ಇಷ್ಟು ಹೇಳಿ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

3–30 P.M.

†ಶ್ರೀ ಕೆ. ಎಂ. ರುದ್ರಪ್ಪ (ಸಕಲೇಶಪುರ).—ಮಾನ್ಯ ಸಭಾಧ್ಯಕ್ಷರೇ, ನಾನು ಲೋಕೋಪಯೋಗಿ ಸಚಿವರು ಮಂಡಿಸಿರುವ ಬೇಡಿಕೆಯನ್ನು ಸಮರ್ಥನೆ ಮಾಡುತ್ತಾ ಕೆಲವು ಸಲಹೆಗಳನ್ನು ಕೊಡುತ್ತೇನೆ. ಈಗಾಗಲೆ ಅನೇಕರು ಮಲೆನಾಡಿನ ಕಡೆ ಸಾಕಷ್ಟು ಲಕ್ಷ ಕೊಟ್ಟಿಲ್ಲ ಎಂದು ಹೇಳಿದರು. ಮಲೆನಾಡಿನಲ್ಲಿ ಕೆಲವು ಸಮಸ್ಯೆಗಳಿವೆ. ಅಲ್ಲಿ ಮಳೆ ಜಾಸ್ತಿಯಾಗಿ ಸಂಚಾರಕ್ಕೆ ತೊಂದರೆಯಾಗುವುದು. ಬೈಲು ಸೀಮೆಗೆ ಕೊಡುವಷ್ಟು ಗ್ರಾಂಟನ್ನು ಮಲೆನಾಡಿಗೂ ಕೊಡಬೇಕು. ಅದನ್ನು ಕೊಟ್ಟರೂ ಸಾಲದು. ಏಕೆಂದರೆ ಅಲ್ಲಿ ರಸ್ತೆಗಳು ಬಹಳ ಬೇಗ ಕೆಡುತ್ತವೆ.

ಅಲ್ಲಿ ದೊಡ್ಡದೊಡ್ಡ ಹಳ್ಳಿಗಳಿರುವುದಿಲ್ಲ. ಒಂದೊಂದು ಮನೆ ಒಂದೊಂದು ಕಡೆ ಇರುವುದು. ಆದುದರಿಂದ ಅಲ್ಲಿನ ಸಮಸ್ಯೆಗಳನ್ನು ಬಗೆಹರಿಸಲು ಮಲೆನಾಡು ಅಭಿವೃದ್ಧಿ ಮಂಡಲಿ ರಚಿಸಿದರೆ ಒಳ್ಳೆಯದು. ಅದನ್ನು ಕೂಡಲೆ ಮಾಡಬೇಕು. ಮಲೆನಾಡಿನಿಂದ ಹೆಚ್ಚು ಉತ್ಪತ್ತಿ ಬರುವುದು, ಕಾಫಿ ಪ್ಲಾಂಟೇಷನ್ನಿನಿಂದ ತೆರಿಗೆ ಬರುವುದು. ಆದುದರಿಂದ ಮಲೆನಾಡಿನ ಕಡೆಗೆ ಹೆಚ್ಚು ಲಕ್ಷ ಕೊಡಬೇಕು. ಮಲೆನಾಡಿನಲ್ಲಿ ಅಣೆಕಟ್ಟುಗಳನ್ನು ಕಟ್ಟುವರು, ಅದರಿಂದ ವಿದ್ಯುತ್ ಯೋಜನೆ ಮಾಡುವರು. ಈಗ ಮಾಡಿರುವ ಯೋಜನೆಗಳಿಂದ ಪ್ರದೇಶ ಮುಳುಗಡೆಯಾಗಿದೆ, ಅದರಿಂದ ಮೈದಾನ ಪ್ರದೇಶದವರಿಗೆ ಅನುಕೂಲವಾಗುವುದು. ಆದುದರಿಂದ ಮಲೆನಾಡಿನವರಿಗೆ ಅನುಕೂಲ ಮಾಡಬೇಕು.

ಕಾಳಿನದಿ ಯೋಜನೆಗೆ ಕೇಂದ್ರ ಸರಕಾರ ಎಲ್ಲ ವೆಚ್ಚವನ್ನೂ ವಹಿಸುವುದು ಸಂತೋಷ. ಕೇಂದ್ರವನ್ನು ಒತ್ತಾಯಮಾಡಿ ಹೆಚ್ಚು ಹಣ ಪಡೆದು ಬೇಗ ಯೋಜನೆ ಕೆಲಸ ಪೂರ್ತಿ ಮಾಡಬೇಕು. ಈಗ ವಿದ್ಯುಚ್ಛಕ್ತಿ ಅನೇಕ ಊರುಗಳಿಗೆ ಸರಬರಾಯಿ ಮಾಡಿದ್ದಾರೆ. ಮೈಸೂರು ದೇಶದಲ್ಲಿ 29 ಸಾವಿರ ಹಳ್ಳಿಗಳಿವೆ. 12,400 ಹಳ್ಳಿಗಳಿಗೆ ವಿದ್ಯುತ್ ಒದಗಿಸಲಾಗಿದೆ, 16,400ಕ್ಕೆ ಕೊಟ್ಟಿಲ್ಲ. ಮಲೆನಾಡಿನಲ್ಲಿ ಸಣ್ಣ ಸಣ್ಣ ಹಳ್ಳಿಗಳಿವೆ, ಕೆಲವು ಹಳ್ಳಿಗಳಲ್ಲಿ ಒಂದೇ ಮನೆ ಇದೆ. ಆದುದರಿಂದ ವಿದುಚ್ಛಕ್ತಿಯನ್ನು ಮಲೆನಾಡಿಗೆ ಕೊಡುವಾಗ ಹೆಚ್ಚು ರಿಯಾಯತಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ನೀರಾವರಿ ಯೋಜನೆ ಬಗ್ಗೆ ಹೇಳುವುದಾದರೆ ಮಲೆನಾಡಿನಲ್ಲಿ ದೊಡ್ಡ ದೊಡ್ಡ ನೀರಾವರಿ ಯೋಜನೆ ಮಾಡುವುದಕ್ಕಾಗುವುದಿಲ್ಲ. ಅಲ್ಲಿ ಗುಡ್ಡಗಾಡು ಜಾಸ್ತಿ. ಆದುದರಿಂದ ಮಲೆನಾಡಿನಲ್ಲಿರುವ ಕೆರೆಗಳಲ್ಲಿ ಹೂಳು ತೆಗೆದು ಸಣ್ಣ ನೀರಾವರಿ ಯೋಜನೆಗಳನ್ನು ಕೈಕೊಳ್ಳಲು ಹೆಚ್ಚು ಗ್ರ್ಯಾಂಟು ಕೊಡಬೇಕು.

ಇನ್ನೊಂದು ಪ್ರಾಮುಖ್ಯವಾದ ವಿಚಾರ ಎಲ್ಲಾ ಪ್ರದೇಶಗಳಿಗೂ ಸಮಾನವಾಗಿ ಹಣ ಒದಗಿಸಿದರೆ ಬಹಳ ಒಳ್ಳೆಯದು. ಕೆಲವು ಜಿಲ್ಲೆಗಳಲ್ಲಿ ಮೂರುನಾಲ್ಕು ಪಿ. ಡಬ್ಲ್ಯು. ಡಿ. ಡಿವಿಜನ್ನುಗಳಿವೆ. ಹಾಸನ ಮತ್ತು ಚಿಕ್ಕಮಗಳೂರಿನಲ್ಲಿ ಒಂದೊಂದೇ ಸಬ್‌ಡಿವಿಜನ್ ಇದೆ. ಇದರಿಂದ ಅಲ್ಲಿ ಹೆಚ್ಚು ಕೆಲಸಕಾರ್ಯ ಮಾಡಲು ಅನಾನುಕೂಲವಾಗಿದೆ. ಹಿಂದಿನ ಲೋಕೋಪಯೋಗಿ ಶಾಖೆ ಮಂತ್ರಿಗಳು ನಮ್ಮ ಜಿಲ್ಲೆಯವರೇ ಆದರೂ ಇದಕ್ಕೆ ಲಕ್ಷ್ಯಕೊಟ್ಟಿಲ್ಲ. ಶ್ರೀ ಚನ್ನ ಬಸಪ್ಪನವರಿಗೂ ಚಿಕ್ಕಮಗಳೂರು ಜಿಲ್ಲೆ ಮತ್ತು ನಮ್ಮ ಜಿಲ್ಲೆಯ ಪರಿಚಯವಿದೆ. ಅಲ್ಲಿ ಕೊನೆಯ ಪಕ್ಷ ಎರಡು ಡಿವಿಜನ್ನುಗಳನಾದರೂ ತೆರೆಯಬೇಕು. ಅದೇ ರೀತಿಯಲ್ಲಿ ಎಲ್ಲಾ ಕಡೆಯೂ ತಾಲ್ಲೂಕಿಗೊಂದು ಸಬ್‌ಡಿವಿಜನ್ ಕೊಡಬೇಕು. ಹಾಸನ ಜಿಲ್ಲೆಯಲ್ಲಿ 8 ತಾಲ್ಲೂಕುಗಳಿವೆ. ಆಲೂರು ತಾಲ್ಲೂಕಿಗೆ ಪ್ರತ್ಯೇಕ ಸಬ್‌ಡಿವಿಜನ್ ಇಲ್ಲ. ಅದಕ್ಕೂ ಸಕಲೇಶಪುರಕ್ಕೂ ಇವೆರಡು ತಾಲ್ಲೂಕುಗಳಿಗೂ ಒಂದೇ ಸಬ್‌ಡಿವಿಜನ್ ಇದೆ. ಇದರಿಂದ ಬೇಗ ಕೆಲಸಕಾರ್ಯವಾಗುವುದಿಲ್ಲ. ಗ್ರಾಮಾಂತರಗಳಲ್ಲಿ ಸಂಚಾರ ಸೌಲಭ್ಯ ಕಡಿಮೆ, ಅದಕ್ಕೆ ತಕ್ಕ ಹಣ ಒದಗಿಸಿ ಹೆಚ್ಚು ಸಬ್‌ಡಿವಿಜನ್ನುಗಳನ್ನು ತೆರೆದು ಬೇಗ ಸಾಕಷ್ಟು ಕೆಲಸವಾಗುವಂತೆ ವ್ಯವಸ್ಥೆಮಾಡಬೇಕು.

ಮತ್ತೊಂದು ಈಗ ಹೇಮಾವತಿ ಅಣೆಕಟ್ಟಿನ ಕೆಲಸವಾಗುತ್ತಿದೆ, ಅದಕ್ಕೆ ಹೆಚ್ಚು ಹಣ ಒದಗಿಸಬೇಕು. ಆಲೂರಿಗೆ ಒಂದು ಸಬ್ ಡಿವಿಜನ್ ಕೊಡಬೇಕು. ಕಂಟ್ರಾಕ್ಟು ಕೆಲಸ ಕೊಡಬೇಕಾದರೆ ಕಂಟ್ರಾಕ್ಟರುಗಳು ರಿಜಿಸ್ಟ್ರೇಷನ್ ಮಾಡಿಸಿಕೊಳ್ಳಬೇಕು. ಅದರಿಂದ ಕಲವರಿಗೆ ತೊಂದರೆ ಕೆಲವರಿಗೆ ಅನುಕೂಲ. ಕಂಟ್ರಾಕ್ಟರುಗಳಿಗಾಗಿ ಕೆಲವು ನಿಯಮಗಳನ್ನು ರಚಿಸಿದ್ದಾರೆ. ಅವರು ಸಾಲ್‌ವೆನ್ಸಿ ಸರ್ಟಿಫಿಕೇಟು ಕೊಡಬೇಕು ಮತ್ತು ಕೆಲವು ನಿಯಮಗಳನ್ನು ಪಾಲಿಸಬೇಕು. ಲಂಗುಲಗಾಮು ಇಲ್ಲದಿದ್ದರೆ ಅವರು ಕೆಲಸವನ್ನು ದಕ್ಷತೆಯಿಂದ ಮಾಡುವುದಿಲ್ಲ. ಈಗ ಸಣ್ಣ ಪುಟ್ಟ ಕಂಟ್ರಾಕ್ಟರುಗಳಿಗೆ ಸ್ವಲ್ಪ ತೊಂದರೆಯಾಗಿದೆಯೆಂದು ಕಂಡುಬಂದಿದೆ. ದೊಡ್ಡ ಕಂಟ್ರಾಕ್ಟರುಗಳಿಗೆ ಬಂಡವಾಳವಿರುವುದು ಮತ್ತು ಬೆಂಬಲವಿರುವುದು. ಸಣ್ಣಪುಟ್ಟ ಕಂಟ್ರಾಕ್ಟರುಗಳಿಗೆ ಕಿರುಕುಳವಿದೆ. ಅಂಥ ಪ್ರಸಂಗವಿದೆ. ಒಳ್ಳೆಯ ರೀತಿಯಿಂದ ಕೆಲಸವಾಗಬೇಕು ಈ ತತ್ವವನ್ನು ಎಲ್ಲರೂ ಒಪ್ಪುವರು ಆದರೆ ಕಂಟ್ರಾಕ್ಟರುಗಳು ಆಫೀಸಿಗೆ ಹೋದರೆ ಕುಳಿತುಕೊಳ್ಳಲು ಜಾಗವಿರುವುದಿಲ್ಲ. ಅವರಿಗೆ ಒಂದು ಅಸೋಸಿಯೇಷನ್ ಮಾಡಬೇಕು ಅಥವ ಒಂದು ಷೆಲ್ಟರ್ ಆದರೂ ಇರಬೇಕು. ಕೋರ್ಟು ಗಳಲ್ಲಿ ವಿಟ್‌ನೆಸ್ ಷೆಡ್ ಎಂದು ಮಾಡಿರುವರು. ಕಂಟ್ರಾಕ್ಟರುಗಳು ಟೇಬಲ್ ಮುಂದೆ ನಿಂತು ತಮ್ಮ ಕೆಲಸ ಮಾಡಿಸಿಕೊಳ್ಳಬೇಕು ಆದುದರಿಂದ ಡಿವಿಜನ್ ಮತ್ತು ಸಬ್ ಡಿವಿಜನ್ನುಗಳಲ್ಲಿ ಕೂತುಕೊಳ್ಳುವುದಕ್ಕೆ ಮತ್ತು ಕೆಲಸ ಮಾಡುವುದಕ್ಕೆ ಒಂದು ರೂಮನ್ನು ಕಟ್ಟಿಸಿಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

(ಶ್ರೀ ಕೆ. ಎಂ. ರುದ್ರಪ್ಪ)

ಸ್ವಾತಂತ್ರ್ಯ ಬಂದನಂತರ ರಾಜ್ಯದ ವಿದ್ಯುಚ್ಛಕ್ತಿ ಉತ್ಪಾದನೆ ಶರಾವತಿ ಯೋಜನೆಯಿಂದ ಅಧಿಕವಾಗಿದೆ, ಲಿಂಗನಮಕ್ಕಿ ಮತ್ತು ತಲಕಳಲೆ ಎಂಬ ಎರಡು ಅಣೆಕಟ್ಟುಗಳನ್ನು ಅಲ್ಲಿ ಕಟ್ಟಿದ್ದಾರೆ, ಅವುಗಳ ಸಂಬಂಧದಲ್ಲಿ ಏನೋ ಲೋಪವಿದೆಯೆಂದು ಹೇಳುತ್ತಾರೆ, ಅದನ್ನು ಬಹುಬೇಗ ಸರಿಪಡಿಸ ಬೇಕು. ಮಂತ್ರಿಗಳು ಈ ಸಂಬಂಧದಲ್ಲಿ ಎನ್‌ಕ್ವೈರಿ ಕಮಿಟಿ ಮಾಡಬೇಕು ಎಂದು ಹೇಳಿರುವುದನ್ನು ಸ್ವಾಗತಿಸುತ್ತೇನೆ. ದುರುದ್ದೇಶದಿಂದ ನ್ಯಾಯವನ್ನು ಮುಚ್ಚಿ ಹಾಕಲು ಮಂತ್ರಿಗಳು ಏನೇನೋ ಮಾಡುತ್ತಿದ್ದಾರೆ, ಅದು ಸರಿಯಲ್ಲ. ಕೆಲವರನ್ನು ಅಂದರೆ ಕೆಲವು ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿರುವ ವಿಚಾರ ಹೇಳಿದರು, ತಪ್ಪು ಮಾಡಿರುವವರನ್ನು ಸಸ್ಪೆಂಡ್ ಮಾಡಬಹುದು. ದೇಶದಲ್ಲಿ ಅನೇಕ ಕಳ್ಳತನ ಮತ್ತು ದರೋಡೆಗಳಾಗುತ್ತಿವೆ, ಕೆಲವರು ತಪ್ಪಿಸಿಕೊಂಡು ಹೋಗುತ್ತಿದ್ದಾರೆ. ತಪ್ಪು ಮಾಡುವವರನ್ನು ಶಿಕ್ಷಿಸುವುದು ತಪ್ಪಲ್ಲ. ತಪ್ಪು ಮಾಡಿರುವ ಕೆಲವರು ತಪ್ಪಿಸಿಕೊಂಡಿದ್ದರೆ ಅವರನ್ನು ತೋರಿಸಿ ವಿಷಯ ತಿಳಿಸಿದರೆ ತಕ್ಕ ಕ್ರಮ ಕೈಕೊಳ್ಳುವರು.

ಬಹಳ ದಕ್ಷತೆಯಿಂದ ಕೆಲಸ ಮಾಡುವುದಕ್ಕೆ ಈ ಮಂತ್ರಿಮಂಡಲ ಸಾಮರ್ಥ್ಯ ಇದೆ ಎಂದು ಈ ಸಮಯದಲ್ಲಿ ಹೇಳಬಯಸುತ್ತೇನೆ. ಶ್ರೀಮಾನ್ ಚನ್ನಬಸಪ್ಪನವರು ಸಂಚಾರ ಸೌಲಭ್ಯಕ್ಕೆ ಹೆಚ್ಚಿನ ನಿಗಾ ಕೊಡಬೇಕು, ಮಲೆನಾಡಿನಲ್ಲಿ ಮೋಟಾರ್ ರೋಡು ಮಾಡಿಸಬೇಕು. ತಾಲ್ಲೂಕು ಬೋರ್ಡ್ ರಸ್ತೆಗಳನ್ನು ಮಾಡಿಸುವುದಕ್ಕೆ ಹಣಕಾಸಿನ ಕೊರತೆ ಇರುವುದರಿಂದ ಅದನ್ನು ಮಾಡು ವುದಕ್ಕಾಗಿಲ್ಲ. ಆದುದರಿಂದ ಇನ್ನೂ ಹೆಚ್ಚಿನ ರಸ್ತೆಗಳನ್ನು ಪಬ್ಲಿಕ್ ವರ್ಕ್ಸ್ ಇಲಾಖೆಗೆ ಸೇರಿಸಿ ಕೊಂಡು ರಸ್ತೆಗಳನ್ನು ಮಾಡಿಸಿಕೊಡಬೇಕೆಂದು ಹೇಳುತ್ತೇನೆ. ನನಗೆ ಇಷ್ಟು ಮಾತನಾಡಲು ಅವಕಾಶಕೊಟ್ಟದ್ದಾಗಿ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಸನ್‌ಮಾನ್ಯ ಸಭಾಪತಿಗಳೇ, ಮಾನ್ಯ ಲೋಕೋಪಯೋಗಿ ಸಚಿವರು ಇಟ್ಟಿರುವ ಬೇಡಿಕೆಯನ್ನು ವಿರೋಧಿಸುತ್ತಾ ಒಂದೆರಡು ಮಾತು ಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗಾಗಲೇ ಮಾನ್ಯ ಮಿತ್ರರು ಅನೇಕರು ಈ ಇಲಾಖೆಯ ಬಗ್ಗೆ ಮಾತನಾಡಿ ಕೆಲವು ಕಟುವಾದ ಟೀಕೆಗಳನ್ನು ಮಾಡಿದ್ದಾರೆ. ಮಾನ್ಯ ಚನ್ನಬಸಪ್ಪನವರು ಈ ತರಹ ಟೀಕೆಗಳನ್ನು ಅನೇಕಸಾರಿ ಕೇಳಿದ್ದಾರೆ. ಅವರು ಹೊಸಬರು ಅಲ್ಲ, ಹಳಬರು. ನಮ್ಮ ಕಡೆ ಕೂತುಕೊಂಡು ಬೇಕಾದಷ್ಟು ಟೀಕೆ ಮಾಡಿದ್ದಾರೆ. ಟೀಕೆ ಮಾಡುವ ಸಂದರ್ಭದಲ್ಲಿ ಅವರು ಬಹಳ ಕಟುವಾದ ಟೀಕೆಗಳನ್ನು ಮಾಡಿರುವುದನ್ನು ನಾನು ನೋಡಿದ್ದೇನೆ. ಈ ಇಲಾಖೆಯ ಬಗ್ಗೆ ಯಾವ ತತ್ವಗಳನ್ನು ಅನುಸರಿಸಬೇಕು, ಯಾವ ನಿಯಮಗಳನ್ನು ಅನುಸರಿಸಬೇಕು ಯಾವ ತತ್ವಗಳು ಇವೊತ್ತಿನ ದಿವಸ ಪ್ರಗತಿದಾಯಕವಾಗಿವೆ ಎನ್ನುವ ಬಗ್ಗೆ ಅವರು ಮಾತನಾಡಿದ್ದಾರೆ. ಅವರು ಹೇಳಿರುವುದನ್ನೆಲ್ಲಾ ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟಪಡುವುದಿಲ್ಲ. ಅವರು ಹಿಂದೆಯೇ ಹೇಳಿದ್ದಾರೆ, ಆದಷ್ಟುಮಟ್ಟಿಗೆ ಇಲಾಖೆಯಲ್ಲಿ ಡೀಸೆಂಟ್ರಲೈಜೇಷನ್ ಮಾಡಬೇಕು ಎಂದು ಅವರು ಏನು ಹೇಳುತ್ತಿದ್ದರೋ ಅದನ್ನು ಮಾಡಬೇಕು. ನಾನು ಆ ದಿನ ಈ ಇಲಾಖೆಯಲ್ಲಿ ಯಾರೋ ಒಬ್ಬ ಅಧಿಕಾರಿಗೆ ಹೆಚ್ಚಿನ ಅಧಿಕಾರ ಕೊಡುವುದು ಸರಿಯಲ್ಲ, ಈ ತರಹ ಒಬ್ಬ ಅಧಿಕಾರಿಗೆ ಅಧಿಕಾರ ಕೊಟ್ಟಿದ್ದೇ ಆದರೆ ಅದರಿಂದ ಅನಾಹುತ ತೊಂದರೆ ಆದೀತು ಎಂದು ಮಾತನಾಡಿದ್ದು ಉಂಟು, ಇಷ್ಟು ಮಾತ್ರವಲ್ಲ ಈ ವಿಷಯದಲ್ಲಿ ಹಿಂದಿನ ಸರಕಾರ ಈ ಇಲಾಖೆ ಪುನರ್ ಸಂಘಟನೆ ಮಾಡುವುದ ಕ್ಕಾಗಿ ಸಮಿತಿಯನ್ನು ರಚನೆ ಮಾಡಿದ್ದರು ಎಂದು ತಿಳಿದುಬಂತು. ಅದರಲ್ಲಿ ತಜ್ಞರನ್ನು ನೇಮಕ ಮಾಡಿದ್ದಾರೆಂದು ತಿಳಿದುಬಂದಿದೆ. ತಜ್ಞರು ಏನು ಶಿಫಾರಸು ಮಾಡಿದ್ದಾರೆ ಆ ತಜ್ಞರ ಶಿಫಾರಸುಗಳಲ್ಲಿ ಎಷ್ಟು ಸರಕಾರ ಒಪ್ಪಿಕೊಂಡಿದೆ, ಎಷ್ಟು ಒಪ್ಪಿಕೊಂಡಿಲ್ಲ ಎಂಬುದು ನಮಗೆ ಗೊತ್ತಿಲ್ಲ. ಇವರು ಬಂದು ನಾಲ್ಕು ತಿಂಗಳಾಯಿತು. ನನಗೆ ತಿಳಿದಮಟ್ಟಿಗೆ ಮೂಲಭೂತ ಬದಲಾವಣೆ ಆಗಿಲ್ಲ. ಈ ಇಲಾಖೆಯು ಒಳ್ಳೆಯ ದೃಷ್ಟಿಯಲ್ಲಿ, ಒಳ್ಳೆಯ ದಾರಿಯಲ್ಲಿ ನಡೆದಿದೆಯೇ, ಎಂದರೆ ಒಳ್ಳೆಯ ದಾರಿಯಲ್ಲಿ ನಡೆದಿಲ್ಲ ಎಂದು ಹೇಳಬೇಕಾಗಿದೆ. ಒಂದಾದನಂತರ ಒಂದನ್ನು ಎಲ್ಲಾ ಸ್ನೇಹಿತರೂ ಹೇಳಿದರು ನಾನೂ ಕೂಡ ಒತ್ತಿ ಹೇಳಬೇಕಾಗಿ ಬಂದಿದೆ ಎಂದು ಕಾಣುತ್ತದೆ. ಮುಖ್ಯವಾಗಿ ಇಂಜನೀಯರ್ ಇನ್ ಚೀಫ್ ಎಂದು ತಾವು ನೇಮಕ ಮಾಡಿರುವುದರ ಬಗ್ಗೆ ಮುಖ್ಯ ಮಂತ್ರಿಗಳು ಹೇಳಿದ್ದನ್ನು ಕೂಲಂಕಷವಾಗಿ ವಿಚಾರ ಮಾಡಿದ್ದೇನೆ. ಅವರು ಹೇಳಿದ್ದು ಜಾಗ ಕಾಲಿ ಇತ್ತು. ಆದುದರಿಂದ ಶ್ರೀಮಾನ್ ಮಗ್ದುಂ ಅವರನ್ನು ಕರೆಸಿಕೊಂಡು ಆ ಸ್ಥಾನವನ್ನು ಕೊಟ್ಟಿದ್ದೇವೆಂದು ಹೇಳಿದರು. ಮತ್ತು ಆ ಸ್ಥಾನಕ್ಕೆ ಬೇರೆ ಯಾರೂ ಇರಲಿಲ್ಲ ಎನ್ನುವ ಅರ್ಥ ಬರುವಹಾಗೆ ಮಾತನಾಡಿದರು. ಈ ದಿವಸ ಒಬ್ಬ ಅಧಿಕಾರಿಯನ್ನು ನೇಮಕ ಮಾಡಿದರೂ ಸಹ 2-3 ಅಂಶಗಳನ್ನು ಯೋಚನೆ ಮಾಡಬೇಕಾಗಿ ಬರುತ್ತದೆ. ಮೊದಲನೆಯದು ಆತ ಯಾವ ರೀತಿ

ದಕ್ಷತೆಯಿಂದ ನಡೆದುಕೊಂಡಿದ್ದಾರೆ, ಆ ಇಲಾಖೆಯವರು ಅವರ ಬಗ್ಗೆ ಏನು ಅಭಿಪ್ರಾಯ ಪಡುತ್ತಾರೆ, ಅವರ ಕೆಲಸದ ಬಗ್ಗೆ ಬೇರೆಯವರು ಏನು ಅಭಿಪ್ರಾಯ ಪಡುತ್ತಾರೆ ಎಂಬುದು ಮುಖ್ಯವಾದದ್ದು. ನನಗಂತೂ ಸ್ಪಷ್ಟವಾಗಿದೆ ಈ ದಕ್ಷತೆ ಎನ್ನುವ ಪದ ಸುಮ್ಮನೆ ಪ್ರಚಾರ ಮಾಡಲಾಗುತ್ತದೆ. It is being bandied at ಎಂದು. ದಕ್ಷತೆ ಎಂದರೆ ಏನು ? ಕಾರ್ಯಗಳು ತ್ವರಿತವಾಗಿ ಹೆಜ್ಜೆ ಹಾಕಿದರೆ ಮಾತ್ರ ಅದು ದಕ್ಷತೆ ಅಲ್ಲ. ವಾಟರ್‌ಸಪ್ಲೈ ಬೋರ್ಡಿನಲ್ಲಿ ಇವೊತ್ತಿನ ದಿವಸ ಹೈಯಸ್ಟ್ ಟೈಪ್ ಆಫ್ ಬ್ಯೂರೋಕ್ರೆಸಿ ಇದೆ ಎಂದು ಹೇಳಿದರೆ ತಪ್ಪಾಗಲಾರದು. ಅದಕ್ಕೆ ಕಾರಣಕರ್ತರು ಮಗ್ದುಂ ಎಂದು ಸ್ಪಷ್ಟವಾಗಿ ಹೇಳಬೇಕಾಗಿದೆ. ಅವರು ಅಲ್ಲಿರುವಾಗ ಇವರ ಕೆಳಗಿನ ಚೀಫ್ ಇಂಜನಿಯರುಗಳ ಸಹಕಾರವನ್ನು ಪಡೆದು ಆ ಇಲಾಖೆಯ ಆಡಳಿತವನ್ನು ಸರಿಯಾದ ರೀತಿಯಲ್ಲಿ ನಡೆಸುತ್ತಾ ಇಲ್ಲ ಎಂದು ಗೊತ್ತಾಗಿದೆ. ಈ ಕೆಲಸ ಈ ದಿನ ಮಾಡಬೇಕು ಮಾಡದೇ ಹೋದರೆ ಡಿಸ್ಟಿಪ್ಲಿನರಿ ಆಕ್ಷನ್ ತೆಗೆದುಕೊಳ್ಳುತ್ತೇನೆ, ನಿಮ್ಮ ವಿರೋಧವಾಗಿ ಕಾನ್‌ಫಿಡೆಂನ್ಸಿಯಲ್ ರಿಪೋರ್ಟ್ ಕಳುಹಿಸುತ್ತೇನೆ, ಎಂದು ಹೆದರಿಸಿ ಬೆದರಿಸಿ ಅವರಿಂದ ಕೆಲಸ ತೆಗೆದುಕೊಳ್ಳುತ್ತಿದ್ದಾರೆ ಎಂದು ತಿಳಿದು ಬಂದಿದೆ. ನನಗೆ ತಿಳಿದಿರುವಂತೆ ಅನ್ಯಾಯವಾದ ಸತ್ಯಕ್ಕೆದೂರವಾದ ಕಾನ್‌ಫಿಡೆನ್ಸಿಯಲ್ ರಿಪೋರ್ಟ್‌ಗಳನ್ನು ಕಳುಹಿಸಿ ಕೆಲವರಿಗೆ ಬರಬೇಕಾದ ಪ್ರಮೋಷನ್ ಕೂಡ ನಿಂತು ಹೋಗಿದೆ ಎಂದು ಕೇಳಿದ್ದೇನೆ. ಆದುದರಿಂದ ಅಧಿಕಾರಿಗಳು ಹೆದರಿಕೊಂಡು ಸ್ವಲ್ಪ ಮಟ್ಟಿಗೆ ಕೆಲಸ ಮಾಡಬೇಕಾಗಿ ಬಂದಿದೆ. ಇದರ ಜೊತೆಗೆ ಬೇರೆ ನೌಕರರನ್ನು ತೆಗೆದುಕೊಂಡರೆ, ಕ್ಲರಿಕಲ್ ಸ್ಟಾಫ್ ತೆಗೆದುಕೊಂಡರೆ ಅವರಲ್ಲಿ ಇವೊತ್ತಿನ ದಿವಸ, ಅಟ್ಮಾಸ್ಪಿಯರ್ ಆಫ್ ಟೆರರ್ ಹೆರೇಸ್‌ಮೆಂಟ್, ಪಿನ್‌ಪ್ರಿಕ್ಸ್‌ನಿಂದ ಕೆಲಸ ಮಾಡುತ್ತಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಇದನ್ನು ಬಸವಲಿಂಗಪ್ಪನವರು ಲೇಬರ್ ಡಿಸ್‌ಪ್ಯೂಟ್ ಎಂದು ಹೇಳಿದರು. ಈಗ ಇರುವುದು ಆ ಪ್ರಶ್ನೆ ಅಲ್ಲ. ಸರಕಾರ ಆಡಳಿತ ಯಂತ್ರವನ್ನು ಸರಿಯಾಗಿ ನಡೆಸಿಕೊಂಡು ಹೋಗಬೇಕಾಗಿದೆ. ಅದಕ್ಕೆ ಎಲ್ಲಾ ಕೆಳಗಿನ ನೌಕರರ ಸಹಕಾರವನ್ನು ಪಡೆಯಬೇಕಾಗಿದೆ. ಈ ರೀತಿ ವಿಶ್ವಾಸದ ಸಹಕಾರ ಪಡೆಯುವ ಪ್ರವೃತ್ತಿ ಮಗ್ದುಂರವರಿಗೆ ಗೊತ್ತಿಲ್ಲ. ಹಿಂದೆ ನಾನು ಬೇಕಾದಷ್ಟು ಆಪಾದನೆಗಳನ್ನು ಇವರ ಬಗ್ಗೆ ಮಾಡಿದ್ದೇನೆ, ಈಗ ಪುನ: ಮಾಡುವುದಕ್ಕೆ ಹೋಗುವುದಿಲ್ಲ. ಇವೊತ್ತಿನ ದಿವಸ ಅವರನ್ನು ಸೂಪರ್ ಇಂಜನೀಯರಿಂಗ್ ಇನ್ ಚೀಫ್ ಎಂದು ನೇಮಕ ಮಾಡುವುದಕ್ಕೆ ಕಾರಣವಾದರೂ ಏನು ಎಂದು ಕೇಳಬೇಕಾಗುತ್ತದೆ. ಎಲ್ಲಾ ವಿಷಯಗಳನ್ನೂ ತನಿಖೆ ಮಾಡಬೇಕು. ಎಷ್ಟು ಜನ ಚೀಫ್ ಇಂಜನೀಯರುಗಳು ಇದ್ದಾರೋ ಅವರೆಲ್ಲರೂ ಎಷ್ಟೆಷ್ಟು ಆಸ್ತಿಪಾಸ್ತಿಗಳನ್ನು ಮಾಡಿಕೊಂಡಿದ್ದಾರೆ ಎಂದು ದೇವೇಗೌಡರು ಕೇಳಿದರು. ನಾನೂ ಕೂಡ ಅದರ ಬಗ್ಗೆ ತನಿಖೆ ಮಾಡಬೇಕಾಗಿದೆ ಎಂದು ಹೇಳುತ್ತೇನೆ. ಅಂತಹವರನ್ನು ಕರೆದುಕೊಂಡು ಬಂದು ಇವೊತ್ತಿನ ದಿವಸ ಅವರನ್ನು ಇಂಜನೀಯರಿಂಗ್ ಇನ್ ಚೀಫ್ ಎಂದು ಮಾಡಿ ಬೇರೆ ಎಲ್ಲಾ ಚೀಫ್ ಇಂಜನೀಯರುಗಳ ಮೇಲೆ ಹಾಕಿದರೆ ಕೆಲಸ ಸುಸೂತ್ರವಾಗಿ ನಡೆಯುತ್ತದೆಯೇ ಎಂದು ಕೇಳಬೇಕಾಗಿದೆ. ಎರಡನೆಯದು ಇಂಜನೀಯರಿಂಗ್ ಇನ್ ಚೀಫ್ ಎಂದು ಮಾಡಿದಾಗ ಕೆಲವು ತತ್ವಗಳನ್ನು ಅನುಸರಿಸಬೇಕು. ಆ ತತ್ವ ಒಬ್ಬರಿಗೆ ಒಂದು ಕೆಲಸ ಕೊಟ್ಟರೆ ಆ ಕೆಲಸ ಸರಿಯಾಗಿ ನಡೆಯುತ್ತದೆಯೇ ವಿನಹ ಇಲ್ಲದಿದ್ದರೆ ಸಾಧ್ಯವಿಲ್ಲ ಎಂದು ನನಗೆ ಅನ್ನಿಸುತ್ತದೆ. ಡೀ ಸೆಂಟ್ರಲೈಜೇಷನ್ ತತ್ವವನ್ನೂ ಕೂಡ ಇಲ್ಲಿ ಅನುಸರಿಸಬೇಕು. ಹಾಗೆ ಮಾಡದೆ 2–3 ಕೆಲಸಗಳನ್ನು ಹುದ್ದೆಗಳನ್ನು ಒಬ್ಬರಿಗೆ ಒಟ್ಟಿಗೆ ಕೊಟ್ಟರೆ, ಅಂದರೆ ಛೇರ್ ಮನ್ ಆಫ್ ದಿ ವಾಟರ್ ಸಪ್ಲೈ ಬೋರ್ಡ್, ಇಂಜನೀಯರಿಂಗ್ ಇನ್ ಚೀಫ್ ಮತ್ತು ಅಡಿಷನಲ್ ಸೆಕ್ರೆಟರಿ ಎಂದು ಎಲ್ಲಾ ಸ್ಥಾನಗಳನ್ನೂ ಒಬ್ಬರಿಗೇ ಕೊಟ್ಟರೆ ಅವರು ಇಷ್ಟು ಕೆಲಸವನ್ನು ಹೇಗೆ ಮಾಡಿಯಾರು ? ನಿಜವಾಗಿ ಧಕ್ಷತೆಯಿಂದ ಕೆಲಸ ಮಾಡುವುದಕ್ಕೆ ಆಗುತ್ತದೆಯೇ ? ಇದು ಪ್ರಿನ್ಸಿಪಲ್ ಆಫ್ ಫಂಕ್ಷನಿಂಗ್ ಆಫ್ ಅಡ್‌ಮಿನಿಸ್ಟ್ರೇಷನ್‌ಗೆ ಅನುಗುಣವಾಗಿದೆಯೇ ? ಯಾವುದನ್ನು ಚನ್ನಬಸಪ್ಪನವರು ಹೇಳಿದರು ಆ ತತ್ವಕ್ಕೆ ಹೊಂದಿಕೊಳ್ಳುತ್ತದೆಯೇ ಎಂದು ಯೋಚನೆ ಮಾಡಬೇಕು. ಆ ತತ್ವಗಳಿಗೆ ಅದು ಹೊಂದಿಕೊಳ್ಳುವುದಿಲ್ಲ ಎಂದು ಹೇಳುತ್ತೇನೆ. ಈ ದೃಷ್ಟಿಯಿಂದ ಯಾರೋ ಒಬ್ಬರಿಗೆ ಅನುಕೂಲ ಮಾಡಿಕೊಡುವುದಕ್ಕೋಸ್ಕರ ಹೆದರಿಕೊಂಡು ಈ ರೀತಿಯ ಕಾರ್ಯಕ್ರಮ ತೆಗೆದುಕೊಂಡಿದ್ದಾರೆಂದು ಅನಿಸುತ್ತದೆ. ಇಷ್ಟು ಮಾತ್ರವೇ ಅಲ್ಲ, ಅವರ ಜಾಗಕ್ಕೆ ಬೇರೆಯವರನ್ನು ಅಪಾಯಿಂಟ್ ಮಾಡಿದ್ದೀರಿ. ಇದು ಕೂಡ ಪಿತೂರಿ ಎಂದು ಕಾಣುತ್ತದೆ. ಬೆಂಗಳೂರು ವಾಟರ್ ಸಪ್ಲೈ ಅಂಡ್ ಸೂಯರೇಜ್ ಬೋರ್ಡ್‌ನಲ್ಲಿ ಹಿಂದೆ ಮಾಡಿರುವ ಅನ್ಯಾಯಗಳನ್ನು ಈ ಅಸೆಂಬ್ಲಿಯಲ್ಲಿ ಅನೇಕ ಜನ ಸದಸ್ಯರು ಹೇಳಿದ್ದಾರೆ. ಅದನ್ನು ಮರೆಮಾಚುವುದಕ್ಕೆ, ತಪ್ಪಿಸುವುದಕ್ಕೆ ಎನ್‌ಕ್ವೈರಿ ನಡೆದು ಆ ಆಪಾದನೆಗಳು ಅಧಿಕಾರಿಗಳ ಮೇಲೆ ಬಾರದೆ ಇರುವುದಕ್ಕೆ ಕೆಲವರನ್ನು ಅಪಾಯಿಂಟ್ ಮಾಡಿದ್ದಾರೆ ಎಂದು ನನ್ನ ಕೆಲವು ಸ್ನೇಹಿತರು ಹೇಳಿದರು. ರಿಟೈರ್ ಆದ ಆರು ವರ್ಷಗಳ ಮೇಲೆ ಕಾಟ್‌ವೇ ಅವರನ್ನು ಅಪಾಯಿಂಟ್ ಮಾಡಿ ಮತ್ತೆ ಪುನಃ ಕೆಲಸಕ್ಕೆ ತೆಗೆದುಕೊಳ್ಳುವುದರಲ್ಲಿ ಏನು ಅರ್ಥ ಇದೆ ? ನೀವು ಹೇಳಬಹುದು ಮೇಧಾವಿಗಳು ಒಬ್ಬರು ಶರಾವತಿ ಪ್ರಾಜೆಕ್ಟಿನಿಂದ ಬಂದು ಕೆಲಸ ಮಾಡ

(ಶ್ರೀ ಎಂ. ಎಸ್. ಕೃಷ್ಣನ್)

ತ್ತಿದ್ದಾರೆ ಎಂದು. ಮೈಸೂರು ಇಂಜನೀಯರುಗಳು ಬೇರೆ ಕಡೆ ಇದ್ದರೆ ಅವರನ್ನು ಕರೆದುಕೊಂಡು ಅವರಿಗೆ ಯಾಕೆ ಆ ಸ್ಥಾನವನ್ನು ಕೊಡಲಿಲ್ಲ? ಇಲ್ಲಿ ಮೇಧಾವಿ ಇಂಜನಿಯರುಗಳು ಇರಲಿಲ್ಲವೇ? ಸರ್ವಿಸ್ ಆಗಿರುವವರು ಅಥವಾ ಮಾಹಿತಿ ತಿಳಿದುಕೊಳ್ಳುವಷ್ಟು ಇಂಜನಿಯರುಗಳು ನಮ್ಮಲ್ಲಿ ಇರಲಿಲ್ಲವೇ? ಅವರಿಗೆ ಯಾಕೆ ಉತ್ತೇಜನ ಕೊಡಕೂಡದು? ಆ ರೀತಿ ಬೇರೆಯವರಿಗೆ ಕೊಡದೆ ಒಬ್ಬರಿಗೇ ಬೇಕಾದವರಿಗೆ ಈ ರೀತಿ ನೇಮಕ ಮಾಡಿರುವುದು ನ್ಯಾಯವೇ ಎಂದು ಕೇಳುತ್ತೇನೆ. ಇಷ್ಟುಮಾತ್ರವಲ್ಲ ಈ ವಿಷಯವನ್ನು ಪುನರ್ ಪರಿಶೀಲನೆ ಮಾಡಬೇಕು. ಮುಖ್ಯಮಂತ್ರಿಗಳು ಹೇಳಿರುವುದು ಸಮಂಜಸವಾಗಿ ಕಾಣುವುದಿಲ್ಲ. ಇದು ಲೇಬರ್ ಡಿಸ್‌ಪ್ಯೂಟ್ ಅಲ್ಲ. ಇದು ಪ್ರಿನ್ಸಿಪಲ್ ಆಫ್ ಅಡ್‌ಮಿನಿಸ್ಟ್ರೇಷನ್‌ಗೆ ಸಂಬಂಧಪಟ್ಟದ್ದು. ಆದುದರಿಂದ ಇದನ್ನು ಪುನರ್ ಪರಿಶೀಲನೆ ಮಾಡಬೇಕು. ಅಂತಹ ಅಧಿಕಾರಿಯನ್ನು ಇವೊತ್ತು ಉನ್ನತ ಸ್ಥಾನಕ್ಕೆ ನೇಮಕ ಮಾಡಿರುವುದು ಸರಿಯೇ? ಹಿಂದಿನ ಸರ್ಕಾರಕ್ಕೆ ಗ್ರೀಸ್ ಮಾಡುತ್ತಿದ್ದವರು ಇವೊತ್ತು ನಿಮಗೂ ಗ್ರೀಸ್ ಮಾಡುತ್ತಾರೆ. ಯಾರು ಯಾರನ್ನು ಹೇಗೆ ಇಟ್ಟುಕೊಳ್ಳಬೇಕು ಎನ್ನುವುದು ಅವರಿಗೆ ಗೊತ್ತಿದೆ. ಈ ರೀತಿ ಸರ್ಕಾರದ ಕೆಲಸಕ್ಕೆ ಚ್ಯುತಿ ತರುತ್ತಾರೆ. ದೇಶದ ಹಿತಕ್ಕೆ ಚ್ಯುತಿ ತರುತ್ತಾರೆ. ಆದುದರಿಂದ ಈ ವಿಷಯವನ್ನು ಪುನರ್ ಪರಿಶೀಲನೆ ಮಾಡಬೇಕೆಂದು ಒತ್ತಾಯಪೂರ್ವಕವಾಗಿ ಹೇಳುತ್ತೇನೆ.

ಇನ್ನೊಂದು ವಿಷಯ ಈ ಮನೆಯಲ್ಲಿ ಪ್ರಸ್ತಾಪವಾಗಿದೆ. ಅದನ್ನು ಹೆಚ್ಚು ಬೆಳೆಸುವುದಕ್ಕೆ ಹೋಗುವುದಿಲ್ಲ. ಇದು ತತ್ವದ ಪ್ರಶ್ನೆ. ಶರಾವತಿ ಬಗ್ಗೆ ಅನೇಕರು ಮಾತನಾಡಿದ್ದಾರೆ. ಅದರ ಅಂಕಿ ಅಂಶಗಳು ಮತ್ತು ಟೆಕ್ನಿಕಲ್ ವಿಷಯಗಳ ಬಗ್ಗೆ ಶ್ರೀಮಾನ್ ದೇವೇಗೌಡರು ದೀರ್ಘವಾಗಿ ಮಾತನಾಡಿದ್ದಾರೆ. ಈಗ ಇದರಲ್ಲಿ ಒಂದು ಗುರುತರವಾದ ಆರೋಪಣೆ ಏನು ಬಂದಿದೆಯೆಂದರೆ ಅಲ್ಲಿ ಸರಿಯಾಗಿ ಕೆಲಸ ನಡೆದಿಲ್ಲ ಎಂದು. ಅಲ್ಲಿ ಜನರೇಟರ್‌ನಲ್ಲಿ ಸಿಮೆಂಟ್ ಮತ್ತು ಐರನ್ ಮತ್ತು ಇನ್ನು ಬೇರೆಬೇರೆ ಸಾಮಾನುಗಳು ಯಾವ ಯಾವರೀತಿಯಲ್ಲಿ ಬರುತ್ತಿತ್ತು ಎಂಬುದರ ಬಗ್ಗೆ ತಮ್ಮ ಹೇಳಿಕೆಯೇ ಸಾಕ್ಷಿಯಾಗಿದೆ. ಮತ್ತು ತಾವು ಅಲ್ಲಿಗೆ ಹೋಗಿ ನೋಡಿಕೊಂಡು ಬಂದಿದ್ದೀರಿ. ಪರ್ಸನಲ್ ಆಗಿಯೂ ಹೇಳಿಕೆ ಕೊಟ್ಟಿದ್ದೀರಿ. ಅದಕ್ಕೆ ತಕ್ಷಣ ಕಾರ್ಯಕ್ರಮ ತೆಗೆದುಕೊಂಡಿದ್ದರೆ ಚೆನ್ನಾಗಿತ್ತು ಎಂದು ಹೇಳಿದ್ದೀರಿ.

ಇನ್ನೊಂದು ಗುರುತರವಾದ ಆರೋಪಣೆ ನಿಮ್ಮ ಮೇಲೆ ಬಂದಿದೆ. ತಾವೇ ಇದಕ್ಕೆ ಜವಾಬ್ದಾರರು ಎಂದು. ಇದು ನಡೆದದ್ದು ತಾವು ಮಂತ್ರಿಗಳಾಗಿದ್ದಾಗ. ಆದುದರಿಂದ ಈ ಶರಾವತಿ ಕರ್ಮಕಾಂಡ ಎಂಬ ಆರೋಪಣೆ ತಮ್ಮ ಮೇಲೆ ಬಂದಿದೆ. ಈ ಆರೋಪಣೆ ತಮ್ಮ ಮೇಲೆ ಇರುವುದರಿಂದ, ನಿಜವಾಗಿಯೂ ನೀವು ಜವಾಬ್ದಾರರಾದರೆ ತಾವು ಅಧಿಕಾರ ಸ್ಥಾನದಲ್ಲಿ ಇರುವುದಕ್ಕೆ ಅರ್ಹರಲ್ಲ. ಅದನ್ನು ತಾವು ಒಪ್ಪಿಕೊಳ್ಳಿ. ಈ ಪ್ರಶ್ನೆ ಈವೊತ್ತಿನ ದಿವಸ ಉದ್ಭವಿಸಿರುವುದರಿಂದ ತಾವು ಒಂದು ಹೇಳಿಕೆ ಕೊಟ್ಟರೆ ಬೇರೆಯವರೂ ಕೂಡ ಮತ್ತೊಂದು ಹೇಳಿಕೆ ಕೊಡುತ್ತಾರೆ. ಕಾಂಗ್ರೆಸ್ (ಓ) ಪಕ್ಷದವರು ಶ್ರೀಮಾನ್ ದೇವೇಗೌಡರೂ ಕೂಡ ಹೇಳುತ್ತಿದ್ದಾರೆ. ಈರೀತಿ ಮಾಡಿರುವುದು ಸರಿಯಲ್ಲ. ಇದರ ಬಗ್ಗೆ ವಿಚಾರಣೆ ನಡೆಸಬೇಕು ಎಂದು. ನನ್ನ ಪಕ್ಷದ ವತಿಯಿಂದ ಇಷ್ಟು ಮಾತ್ರ ಹೇಳುತ್ತೇನೆ. ನೀವು ತಪ್ಪು ಮಾಡಿದರೂ ಮಾಡಿಲ್ಲ ಎಂದು ಹೇಳುತ್ತೀರಿ ಅದು ಬೇರೆ ಪ್ರಶ್ನೆ. ಆಗಿನ ಕಾಲದಲ್ಲಿ ನಿಮ್ಮದೂ ಸಹ ಕೈವಾಡ ಇತ್ತು ಎಂದು ಮರೆಯುವ ಹಾಗಿಲ್ಲ. ಮತ್ತೆ ಪುನಃ ಮಂತ್ರಿಗಳಾಗಿ ಬಂದಿದ್ದೀರಿ, ನೀವು ಮಂತ್ರಿಗಳಾಗಿದ್ದಾಗ ಶರಾವತಿ ಪ್ರಾಜೆಕ್ಟು ಆಯಿತು. ಆವೊತ್ತು ಇದರ ಬಗ್ಗೆ ವಿಚಾರಣೆ ಮಾಡುವುದಕ್ಕೆ ತಾವು ಒಪ್ಪಿಕೊಂಡಿರಬೇಕು. ಅದನ್ನು ಕಾರ್ಯರೂಪಕ್ಕೆ ತರಬೇಕಾಗಿತ್ತು ಮತ್ತೆ ತಾವೇ ಪುನಃ ಮಂತ್ರಿಗಳಾಗಿ ಬಂದಿದ್ದೀರಿ. ಆದುದರಿಂದ ಇದರ ವಿವರಣೆಗಳನ್ನು ಆಳವಾಗಿ ನೋಡಬೇಕು. ಇದರಲ್ಲಿ ನಿಮ್ಮದೂ ಕೂಡ ಜವಾಬ್ದಾರಿ ಇದೆ ಎಂದು ತಿಳಿದುಕೊಳ್ಳಬೇಕಾಗಿದೆ. ಮತ್ತು ಪ್ರಜಾಪ್ರಭುತ್ವಕ್ಕನುಗುಣವಾಗಿ ನಡೆಯಬೇಕು ಎಂದರೆ ತಾವು ರಾಜಿನಾಮೆಕೊಡಬೇಕು you must be like Ceasar's wife above suspicion ಬೇರೆ ದಾರಿಯೇ ಇಲ್ಲ. ತಾವು ರಾಜೀನಾಮೆ ಕೊಡಬೇಕು ಮತ್ತು ಇದರ ಬಗ್ಗೆ ಜುಡಿಷಿಯಲ್ ಎನ್‌ಕ್ವೈರಿ ಆಗಬೇಕು ಎಂದು ಹೇಳುತ್ತೇನೆ.

ಶ್ರೀ ಡಿ. ದೇವರಾಜ್ ಅರಸ್.—ನೀವು ಹೇಳುವುದು ಯಾವರೀತಿ ಆಯಿತು ಎಂದರೆ ಯಾವುದಾದರೂ ಒಂದು ಗ್ರಾಮದಲ್ಲಿ ಒಂದು ಕೇಸ್ ನಡೆದರೆ, ಆ ಕೇಸ್‌ಗೆ ಅವನನ್ನೂ ಸೇರಿಸಿ ಬಿಡಿ, ಅವನನ್ನೂ ಆ ಕೇಸಿಗೆ ತೆಗೆದುಕೊಳ್ಳುವಾ, ಆ ಕೇಸು ಎಷ್ಟು ವರ್ಷವಾದರೂ ನಡೆಯಲಿ ನೋಡೋಣ ಎನ್ನುತ್ತಾರೆ. ಆ ರೀತಿ ನೀವು ಆವೊತ್ತಿನ ದಿವಸ ನೀವು ಮಂತ್ರಿಗಳಾಗಿದ್ದಿರಲ್ಲಾ ನಿಮ್ಮನ್ನೂ ಸೇರಿಸಿ ಬಿಡೋಣ, ಇನ್ನೊಬ್ಬರನ್ನೂ ಸೇರಿಸಿ ಬಿಡೋಣ ಮತ್ತೊಬ್ಬರನ್ನೂ ಸೇರಿಸಿ ಬಿಡೋಣ

ಎಂದರೆ ಏನು ಅರ್ಥ? ಅದರ ಮೇಲೆ ಬಂದಿರುವ ಅಪಾದನೆ ಏನು? ಏತಕ್ಕೆ ಅವರನ್ನು ಸೇರಿಸ ಬೇಕು? ಎನ್ನುವುದನ್ನು ತಿಳಿದುಕೊಳ್ಳದೆ, ನೀವು ಕಂಟ್ರಾಕ್ಟನ್ನು ಕೊಟ್ಟಿರಲ್ಲಾ, ನಿಮ್ಮ ಕಾಲದಲ್ಲಿ ಕಾಂಟ್ರಾಕ್ಟ್ ತೀರ್ಮಾನ ಮಾಡಿದಿರಲ್ಲಾ, ಅದೇ ಒಂದು ಜವಾಬ್ದಾರಿ ಎಂದು ಅಪಾದನೆ ಮಾಡಿದ್ದಾರೆ. ಶ್ರೀಮಾನ್ ಎಂ. ಎಸ್. ಕೃಷ್ಣನ್‌ರವರು ಸ್ವಲ್ಪ ಅರಿತವರೂ ನುರಿತವರೂ ಆಗಿರುವುದರಿಂದ ಅವರು ಈರೀತಿ ತಿಳಿದುಕೊಂಡಿದ್ದರೆ ಅದು ಸರಿಯಲ್ಲ. If that is really a basis for an enquiry then I will certainly look into it. I would like to ask the hon. member whether he really feels that this is a matter for enquiry ?

ಶ್ರೀ ಎಂ. ಎಸ್. ಕೃಷ್ಣನ್.—ಈಗ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ ಮೇಲೆ ನಾನು ಇದರ ಬಗ್ಗೆ ಹೆಚ್ಚು ಸಮರ್ಥನೆ ಮಾಡಕೂಡದು ಎಂದು ಇದ್ದರೂ ಕೂಡ ಈಗ ಸಮರ್ಥನೆ ಮಾಡಬೇಕಾಗಿದೆ. ಇದು ಬರೀ ಕಾಂಟ್ರಾಕ್ಟ್ ವಿಷಯವಲ್ಲ. ಯಾರನ್ನಾದರೂ ಸೇರಿಸಬಹುದು. ಅವರು ಆಗಿನ ಸಂದರ್ಭದಲ್ಲಿ ಲೋಕೋಪಯೋಗಿ ಇಲಾಖಾ ಮಂತ್ರಿಗಳಾಗಿದ್ದರು. ಈ ಪ್ರಾಜೆಕ್ಟ್ ಯೋಜನೆಯ ಬಗ್ಗೆ ಪ್ಲಾನ್, ಎಸ್ಟಿಮೇಟ್ ಆಗಿರುವುದು, ಇದರ ಬಗ್ಗೆ ಎಕ್ಸ್‌ಪರ್ಟ್ಸ್ ಬಂದು ನೋಡಿರುವುದು, ತಜ್ಞರು ಬಂದು ಇದರ ಬಗ್ಗೆ ಹೇಳಿರುವುದು ಇವುಗಳನ್ನೆಲ್ಲಾ ಪರಿಶೀಲನೆ ಮಾಡಿ ಈ ಯೋಜನೆಯನ್ನು ಸ್ಯಾಂಕ್ಷನ್ ಮಾಡಿರುವುದು, ಇದಕ್ಕೆ ಹಣ ಒದಗಿಸಿರುವುದು ಇವೆಲ್ಲಾ ಅವರ ಕಾಲದಲ್ಲೇ ಆಗಿರುವುದರಿಂದ ಇದರಲ್ಲಿ ಅವರದ್ದೂ ಜವಾಬ್ದಾರಿ ಇದೆ ಎಂದು ಹೇಳುತ್ತೇನೆ. ಇದರಲ್ಲಿ ಕಂಟ್ರಾಕ್ಟರ್ ಹಣ ತಿಂದುಕೊಂಡು ಕೆಲಸಗಳನ್ನು ಕಡೆಗಾಣಿಸಿದ್ದಾನೆ ಅನ್ನುವ ಪ್ರಶ್ನೆ ಅಲ್ಲ. ಇದರಲ್ಲಿ ಒಂದು ಹೆಚ್ಚಿನ ಪ್ರಶೆ ಏನೆಂದರೆ ಈವೊತ್ತಿನ ದಿವಸ ಆ ಕೆಲವು ಕಂಟ್ರಾಕ್ಟರ್‌ಗಳು ದುಡ್ಡು ತಿಂದಿದ್ದರೂ ಕೂಡ ಲೆಕ್ಕಾಚಾರದ ಪ್ರಕಾರ ಕೈಕೊಂಡ ಕೆಲಸಗಳು ಕೊಚ್ಚಿಕೊಂಡು ಹೋಗುತ್ತಾ ಇವೆ ಎನ್ನುವ ಭೀತಿ ಹುಟ್ಟಿದೆ. ಆದುದರಿಂದ ಆ ಭೀತಿಯು ಹೋಗಬೇಕಾಗಿರುವುದರಿಂದ ಇದನ್ನು ಸರಿಪಡಿಸಬೇಕು ಎಂದು ಹೇಳುತ್ತೇನೆ.

ಈವೊತ್ತಿನ ದಿವಸ ಟನಲ್ ರಿಪೇರಿ ಬಗ್ಗೆ ಸಂದೇಹ ಬರುತ್ತದೆ. ಅದಕ್ಕೆ ಹಣಬೇಕು. ಇಲ್ಲದಿದ್ದರೆ ಡಿಸೈನ್ ಫೇಲ್ ಆಗುತ್ತದೆ. ಈಗಲಾದರೂ ಅದು ಸರಿಯಾದ ವೆಲಾಸಿಟಿಯಿಂದ ಬರುತ್ತದೆಯೇ ಹೇಳಬೇಕು. ಇದರಲ್ಲಿ ನಿಜಾಂಶವನ್ನು ಕಂಡುಹಿಡಿಯಬೇಕು. ಈ ಡಿಸೈನ್ ಒಪ್ಪಿಕೊಂಡವರಾರು? ಪ್ರೆಷರ್‌ನಿಂದ ವೆಲಾಸಿಟಿಯಿಂದ ಈರೀತಿ ಸಿಮೆಂಟ್ ಚೂರು ಇತ್ಯಾದಿ ಬರುತ್ತದೆಯೇ ಹೇಳಬೇಕು. ಈ ಪ್ರಾಜೆಕ್ಟನ್ನು ಕಟ್ಟಲು ಸ್ಯಾಂಕ್ಷನ್ ಮಾಡಿದವರು ನೀವೇ. ಈವೊತ್ತಿನ ದಿವಸ ಬೇರೆಯವರ ಜವಾಬ್ದಾರಿಯೂ ಇದೆ, ತಮ್ಮ ಜವಾಬ್ದಾರಿಯು ಏನೂ ಇಲ್ಲ ಎಂದು ಪುರಾವೆ ಮಾಡಿ. ನಿಮ್ಮ ಜವಾಬ್ದಾರಿಯೂ ಇರುವುದರಿಂದ If you want to get out of it naturally you must be like Ceaser's wife and there is no way but to resign. ನೀವು ತಪ್ಪು ಮಾಡಿದ್ದೀರಿ ಎನ್ನುವುದಿಲ್ಲ. ಹಿಂದೆ ಶ್ರೀ ಲಾಲ್‌ಬಹದ್ದೂರ್ ಶಾಸ್ತ್ರಿಯವರು ರೈಲ್ವೆ ಆಕ್ಸಿಡೆಂಟ್ ಆದಾಗ ರಾಜೀನಾಮೆ ಕೊಟ್ಟರು, ಅದೇರೀತಿ ಕೇರಳದಲ್ಲಿ ಕಮ್ಯೂನಿಸ್ಟ್ ಪಾರ್ಟಿ ಮಂತ್ರಿಗಳಾಗಿದ್ದ ಶ್ರೀ ಎಂ. ಎನ್. ಗೋವಿಂದನ್‌ನಾಯರ್‌ರವರು ಇಡಕಿ ಪ್ರಾಜೆಕ್ಟ್ ಸಂಬಂಧವಾಗಿ ತಮ್ಮ ಮೇಲೆ ಆರೋಪಣೆ ಬಂದಿದೆ ಎಂದು ತಮ್ಮ ಹುದ್ದೆಗೆ ರಾಜೀನಾಮೆ ಕೊಟ್ಟರು. ಹಾಗೆಯೇ ಈವೊತ್ತು ತಾವು ರಾಜೀನಾಮೆ ಕೊಟ್ಟರೆ ಸಂತೋಷ. ನಾನು ಇದರ ಬಗ್ಗೆ ಒತ್ತಾಯ ಮಾಡುತ್ತೇನೆ. ಈವೊತ್ತೋ ನಾಳೆಯೋ ಮುಖ್ಯ ಮಂತ್ರಿಗಳ ಹತ್ತಿರ ಹೋಗಿ ಇದರ ಬಗ್ಗೆ ಎನ್‌ಕ್ವೈರಿ ಮಾಡಿ ಎಂದು ಹೇಳಿ ರಾಜೀನಾಮೆ ಕೊಡುತ್ತೀರಾ? ಇಲ್ಲದೇ ಹೋದರೆ ತಾವೇ ಜವಾಬ್ದಾರರು ಎಂದು ಹೇಳಬೇಕಾಗುತ್ತದೆ. ತಾವು ರಾಜೀನಾಮೆ ಕೊಟ್ಟರೆ ನಿಜವಾಗಿಯೂ ಇದರಲ್ಲಿ ಯಾರು ತಪ್ಪಿತಸ್ಥರು ಎಂದು ಕಂಡುಹಿಡಿಯುವುದಕ್ಕೆ ಅನುಕೂಲವಾಗುತ್ತದೆ. ಇದರ ಬಗ್ಗೆ ಶ್ರೀಮಾನ್ ವೀರೇಂದ್ರಪಾಟೀಲರು ಹೇಳುವುದನ್ನು ಒಪ್ಪಿಕೊಳ್ಳುವುದಕ್ಕೆ ನಾನು ತಯಾರಾಗಿಲ್ಲ. ನೀವು ಹೇಳುವುದನ್ನೂ ಕೂಡ ಎಲ್ಲವನ್ನೂ ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಏತಕ್ಕೆಂದರೆ ಹಿಂದಿನ ಪ್ರೊಸೀಡಿಂಗ್ಸ್ ನೋಡಿರುವುದರಿಂದ ನನಗೆ ಅನುಮಾನ ಇದೆ. ಈವೊತ್ತು ಈ ಪರಿಸ್ಥಿತಿ ಬಿಗಡಾಯಿಸಿರುವುದರಿಂದ ಸರ್ಕಾರದವರು ತೀವ್ರವಾಗಿ ಯೋಚನೆ ಮಾಡಬೇಕು. ಕಾಂಗ್ರೆಸ್‌ನವರೂ ಕೂಡ ತೀವ್ರವಾಗಿ ಯೋಚನೆ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನೊಂದು ವಿಷಯ ಏನೆಂದರೆ ಡಿಪಾರ್ಟ್‌ಮೆಂಟ್ ಬಗ್ಗೆ ಹೇಳುವುದಾದರೆ ಇದರಲ್ಲಿ ಟೆಂಪೋ ಆಫ್ ಕನ್‌ಸ್ಟ್ರಕ್ಷನ್ ಬಗ್ಗೆ ಹೇಳುತ್ತೇನೆ. ಏನೆಂದರೆ ಕೆಲಸ ಮಾಡುವ ವೇಗ ಏನಿದೆ ಅದರ ಬಗ್ಗೆ ಸ್ವಲ್ಪ ಮಾತನಾಡಬೇಕಾಗಿದೆ. ನನಗೆ ತಿಳಿದಮಟ್ಟಿಗೆ ಪ್ಲಾನ್, ಎಸ್ಟಿಮೇಟ್ ಇವರು ತಯಾರು

(ಶ್ರೀ ಎಂ. ಎಸ್. ಕೃಷ್ಣನ್)

ಮಾಡುತ್ತಾರೆ. ಆದರೆ ನಡೆಯುವ ಕೆಲಸ ಬಹಳ ನಿಧಾನವಾಗಿ ನಡೆಯುತ್ತದೆ. ಮೊದಲು ಪ್ಲಾನ್ ಆಗಬೇಕು, ಅನಂತರ ಎಸ್ಟಿಮೇಟ್ ಆಗಬೇಕು, ಅನಂತರ ನೀವು ಒಪ್ಪಿಕೊಳ್ಳಬೇಕು, ಅನಂತರ ಎಕ್ಸಿಕ್ಯೂಷನ್ ಆರ್ಡರ್ ಆಗಬೇಕು, ಅನಂತರ ಎಕ್ಸಿಕ್ಯೂಷನ್ ಮಾಡಬೇಕು, ಹೀಗೆಲ್ಲಾ ಪ್ರೊಸೀಜರ್ ಇರುವುದರಿಂದ ಡಿಪಾರ್ಟ್‌ಮೆಂಟಲ್ ಡಿಲೇ ಆಗುತ್ತದೆ. ಕಂಟ್ರಾಕ್ಟ್ ಕೆಲಸ ಮಾಡುವ ರೀತಿ ಹೇಗೆ ಎಂದರೆ ಈವೊತ್ತು ಅವನು ಕೆಲಸ ಮಾಡಬೇಕಾಗಿದ್ದರೆ ಆ ಕೆಲಸ ಪೂರೈಸಲು 6 ತಿಂಗಳು ಟೈಂ ಇಟ್ಟಿದ್ದಾರೆ. ಅವನು ಅದಕ್ಕೆ 8 ತಿಂಗಳೋ, 10 ತಿಂಗಳೋ ಕಾಲವನ್ನು ತೆಗೆದುಕೊಳ್ಳುತ್ತಾನೆ.

4-00 P. M.

ನೀವು ಹೇಳಬಹುದು ಆರು ತಿಂಗಳಲ್ಲಿ ಕೆಲಸ ಮುಗಿಸಬೇಕು ಎಂದು ಕಂಡೀಷನ್ ಇದೆ ಎಂದು. ಆದರೆ ಮೆಟೀರಿಯಲ್ ಸಿಕ್ಕಲಿಲ್ಲ, ಆದರಿಂದ 8 ತಿಂಗಳಾಯಿತು, ಒಂದು ವರ್ಷವಾಯಿತು ಎಂದು ಹೇಳಿ ಅದಕ್ಕೆ ಕಾಲಾವಕಾಶ ಕೊಡಬೇಕಾಗಿ ಬಂತು ಎಂದು ಅನೇಕಾವರ್ತಿ ಹೇಳಿದ್ದೀರಿ. ಅನೇಕ ಕಡೆಗಳಲ್ಲಿ ಉದ್ದೇಶಪೂರ್ವಕವಾಗಿ ಹೆಚ್ಚು ದುಡ್ಡು ಮಾಡಿಕೊಳ್ಳುವ ಪ್ರವೃತ್ತಿ ಕಂಟ್ರಾಕ್ಟರುಗಳಿಗೆ ಇರುತ್ತದೆಯೇ ವಿನಾ, ಮಾಡುವ ಕೆಲಸವನ್ನು ಎಷ್ಟು ಬೇಗ ಮಾಡಬಹುದೋ ಅಷ್ಟು ಬೇಗ ಮಾಡದೆ ನಿಧಾನವಾಗಿ ಮಾಡುವ ದಾರಿಯನ್ನು ನೋಡುತ್ತಿರುತಾರೆ. ಇದಕ್ಕೆ ನಾನು ಒಂದೆರಡು ನಿದರ್ಶನಗಳನ್ನು ಕೊಡಬಲ್ಲೆ. ಯೂನಿಟಿ ಬಿಲ್ಡಿಂಗ್ಸ್ ಇದೆ. ಮೈಸೂರು ಬ್ಯಾಂಕಿನ ಎದುರುಗಡೆ ಕಂಬೈನ್ಡ್ ಬೋರ್ಡ್ ಬಿಲ್ಡಿಂಗ್ಸ್ ಇವೆ. ಎರಡೂ ಕಟ್ಟಡಗಳು ಸುಮಾರು ಏಕಾಲದಲ್ಲಿ ಕೆಲಸಕ್ಕೆ ಪ್ರಾರಂಭ ಮಾಡಿದುವು. ಯೂನಿಟಿ ಬಿಲ್ಡಿಂಗ್ಸ್ ಕೆಲಸ ಮುಗಿದು, ಬಾಡಿಗೆಗೆ ಕೊಟ್ಟು ಅದರಿಂದ ಪ್ರತಿಫಲವನ್ನೂ ಪಡೆಯುತ್ತಿದ್ದಾರೆ. ನಮ್ಮ ಕಂಬೈನ್ಡ್ ಆಫೀಸಸ್ ಕೆಲಸ ಇನ್ನೂ ಕುಂಟಿಕೊಂಡು ನಡೆಯುತ್ತಿದೆ. ಯಾವಾಗ ಪೂರ್ತಿಯಾಗುತ್ತದೆ ಎನ್ನುವುದು ಗೊತ್ತಿಲ್ಲ. ಹೀಗೆ ಏಕೆ? ಅಂದರೆ ಕಂಬೈನ್ಡ್ ಬಿಲ್ಡಿಂಗ್ಸ್ ಒಂದು ಲೋಕೋಪಯೋಗಿ ಇಲಾಖೆಯಿಂದ ನಡೆಸುತ್ತಿರುವ ಕೆಲಸ. ಇನ್ನೊಂದು ಅವರೇ ನಿಂತುಕೊಂಡು ಸೂಪರ್‌ವೈಸ್ ಮಾಡಿ ಖಾಸಗಿಯಾಗಿ ನಡೆಸುತ್ತಿರುವುದು. ಅಲ್ಲಿ ಮಾತ್ರ ಬೇಗ ಕೆಲಸವಾಗುವುದಕ್ಕೆ ಕಾರಣವೇನು, ಇಲ್ಲಿ ನಿಧಾನವಾಗುವುದಕ್ಕೆ ಕಾರಣವೇನು? ಯಾರದು ತಪ್ಪು ಎನ್ನುವುದನ್ನು ಕಂಡುಹಿಡಿಯಬೇಕಾಗಿದೆ. ನಮ್ಮ ಇಲಾಖೆಯಲ್ಲಿ ಬಹಳ ತಪು ಇದೆ. ಮೇಲಿನಿಂದ ಕೆಳಗಿನವರೆಗೂ ಮಾಮೂಲು, ಕಮಿಷನ್ ಬರುತ್ತದೆ. ಆದಷ್ಟು ನಿಧಾನವಾಗಿ ಕೆಲಸ ನಡೆಯಲಿ ಎಂದು ಮುಂದಕ್ಕೆ ಹಾಕುತ್ತಾ ಇರಬಹುದು ಎನ್ನುವ ಪ್ರವೃತ್ತಿ ಇದೆ. ಕಂಟ್ರಾಕ್ಟರುಗಳು ಮತ್ತು ಇಂಜಿನಿಯರುಗಳು ಷಾಮೀಲಾಗಿ, ಕಂಟ್ರಾಕ್ಟರುಗಳು ಅನುಕೂಲ ಮಾಡಿಕೊಳ್ಳುತ್ತಾರೆ, ಇವರಿಬ್ಬರೂ ಹೊಂದಿಕೊಂಡು ಕೆಲಸ ಮಾಡುವುದರಿಂದ ಟೆಂಪೊ ಆಫ್ ಕನ್‌ಸ್ಟ್ರಕ್ಷನ್ ಇರುವುದಿಲ್ಲ.

ಹೌಸಿಂಗ್ ಬೋರ್ಡಿನಿಂದ ಬೆಂಗಳೂರಿನಲ್ಲಿ ಮನೆಗಳನ್ನು ಕಟ್ಟಿಸಿದ್ದಾರೆ. ಮಹಾಲಕ್ಷ್ಮಿ ಲೇಔಟ್‌ನಲ್ಲಿ ಕಟ್ಟಿಸಿರುವ ಮನೆಗಳನ್ನು ನೋಡಿದರೆ, ನೀರು ಒಳಗೆ, ಮನೆ ಹೊರಗೆ ಎನ್ನುವಂತಾಗಿದೆ. ಹೆಂಚು, ಚಾವಣಿ ಎಲ್ಲ ಹೋಗಿದೆ. ಎಲ್ಲರೂ ಬಂದು ನೋಡಿಕೊಂಡು ಹೋದರು. ಮಳೆ ಬಂದಾಗಲೆಲ್ಲ ನೀರು ಒಳಗೇ ಸೋರುತ್ತದೆ, ಜನಗಳು ಇರುವುದಕ್ಕೆ ಆಗುತ್ತಿಲ್ಲ. ಇವು ಸಾಮಾನ್ಯ ಕಾರ್ಮಿಕರು, ಸರ್ಕಾರಿ ನೌಕರರು ಮತ್ತು ಮಧ್ಯಮ ವರ್ಗದವರಿಗೆಂದು ಕಟ್ಟಿರುವ ಮನೆಗಳು. ಈ ರೀತಿ ಆದರೆ ಇಲಾಖೆಯ ಇಂಜಿನಿಯರುಗಳಲ್ಲಿ ಹೇಗೆ ನಂಬಿಕೆ ಬರಬೇಕು? ತನಿಖೆ ನಡೆಸಿ ಸರಿ ಮಾಡುತ್ತೇವೆಂದು ಹೇಳಿದರು. ಇಲ್ಲಿಯವರೆಗೂ ಸರಿ ಮಾಡಿಲ್ಲ. ಮೇಲ್ಛಾವಣಿ ಹಾಗೆಯೇ ಇದೆ. ಈಗ ಮಳೆ ಬರುತ್ತಿದೆ, ಪುನಃ ಸೋರುತ್ತದೆ. ಇಂಥ ಕೆಲಸ ಕಂಟ್ರಾಕ್ಟರುಗಳು ಮಾಡುತ್ತಾರೆ. ಅವರ ಜೊತೆಯಲ್ಲಿ ಕೆಲವರು ಷಾಮೀಲಾಗಿರುತ್ತಾರೆ. ಮಾನ್ಯ ಮಂತ್ರಿಗಳು 26 ಜನರನ್ನು ಸಸ್ಪೆಂಡ್ ಮಾಡಿದ್ದಾರೆ, ಕಾರ್ಯಕ್ರಮ ತೆಗೆದುಕೊಂಡಿದ್ದಾರೆ. ಸಸ್ಪೆನ್‌ಷನ್‌ನಲ್ಲಿ ಅಧಿಕಾರಿಗಳನ್ನು ಇಟ್ಟಿರುವ ವಿಚಾರದಲ್ಲಿ ನನ್ನದು ಭಿನ್ನಾಭಿಪ್ರಾಯವಿಲ್ಲ. ಲಂಚ ರುಷುವತ್ತು ತೆಗೆದುಕೊಳ್ಳುತ್ತಾರೆ, ಸರಿಯಾಗಿ ಕೆಲಸ ಮಾಡುವುದಿಲ್ಲ, ಅಕ್ರಮ ವ್ಯವಹಾರ ಇಟ್ಟುಕೊಂಡಿರುತ್ತಾರೆ, ಅಂಥವರನ್ನು ಸಸ್ಪೆಂಡ್ ಮಾಡಲೇಬೇಕಾಗುತ್ತದೆ. ಉಗ್ರವಾದ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಇಲ್ಲಿ ಏನಾಗಿದೆ ಎಂದರೆ ನಿಮ್ಮ ದೃಷ್ಟಿ ಸರಿಯಾಗಿ ಹರಿದಿಲ್ಲ ಎಂದು ಕಾಣುತ್ತದೆ. ನಿಮ್ಮ ದೃಷ್ಟಿ ಸರಿಯಾಗಿ ಹರಿಯಬೇಕು. ಯಾರು ತಪ್ಪಿತಸ್ಥರು ಎಂದು ಕಂಡುಹಿಡಿದು ಕ್ರಮ ತೆಗೆದುಕೊಂಡು ಮಾಡುವ ಕೆಲಸ ಸರಿಯಾಗಿ ನಡೆಯುವಂತೆ ಮಾಡಬೇಕು ಎಂದು ನಾನು ಹೇಳುತ್ತೇನೆ. ಬರೀ ಸಸ್‌ಪೆನ್‌ಷನ್‌ನಲ್ಲಿಟ್ಟರೆ ಎಲ್ಲ ಸರಿಹೋಗುತ್ತದೆ ಎಂದು ನಾನು ಹೇಳುವುದಿಲ್ಲ.

ಅದರಿಂದ ಸ್ವಲ್ಪ ಹೆದರಿಕೆ ಬರುತ್ತದೆ. ಒಂದು ಇಲಾಖೆಯಲ್ಲಿ ಸಸ್ಪೆಂಡ್ ಮಾಡಿ 15 ದಿವಸದ ನಂತರ ಮತ್ತೆ ಕೆಲಸಕ್ಕೆ ಕೆಲವರನ್ನು ತೆಗೆದುಕೊಂಡರು. ಆ ರೀತಿ ತಮ್ಮ ಇಲಾಖೆಯಲ್ಲಿ ಆಗಬಾರದು ಎಂದು ಮಾತ್ರ ಹೇಳುತ್ತಿದ್ದೇನೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ತೀವ್ರವಾದ ಗಮನವನ್ನು ಕೊಡಬೇಕು, ಟೆಂಪೊ ಆಫ್ ಕನ್‌ಸ್ಟ್ರಕ್ಷನ್ ಹೆಚ್ಚಬೇಕು, ಇನ್ನೂ ಹೆಚ್ಚಿನ ರೀತಿಯಲ್ಲಿ ಕ್ರಮ ತೆಗೆದು ಕೊಳ್ಳಬೇಕು ಮತ್ತು ಇದಕ್ಕೆ ಸೂಕ್ತವಾದ ಪರಿಹಾರವನ್ನು ಕಂಡುಹಿಡಿಯಬೇಕು ಎಂದು ಹೇಳುತ್ತೇನೆ.

ಈ ದಿನ ಸರ್ಕಾರ ಅನೇಕ ಕೆಲಸಕಾರ್ಯಗಳನ್ನು ಕಂಟ್ರಾಕ್ಟರುಗಳಿಗೆ ಕೊಡುತ್ತಿದೆ. ಕಂಟ್ರಾಕ್ಟರುಗಳಿಗೆ ಕೊಡುವ ಪದ್ಧತಿಯನ್ನು ಸ್ವಲ್ಪಮಟ್ಟಿಗೆ ತಪ್ಪಿಸಿ ಇಲಾಖೆಯಿಂದಲೇ ಮಾಡಿಸುವುದು ಒಳ್ಳೆಯದು ಎಂದು ನನ್ನ ಅಭಿಪ್ರಾಯ. ಇಲಾಖೆಯ ಇಂಜಿನಿಯರುಗಳಿಂದ ಅಥವಾ ಅಗತ್ಯವಾದಲ್ಲಿ ಹೊಸದಾಗಿ ಇಂಜಿನಿಯರುಗಳನ್ನು ನೇಮಕ ಮಾಡಿ ಅವರಿಂದ ಕೆಲಸ ನಡೆಸಿ, ಸರಿಯಾದ ಹತೋಟಿಯನ್ನು ಇಟ್ಟುಕೊಂಡರೆ ಇನ್ನೂ ಒಳ್ಳೆಯದಾಗುತ್ತದೆ, ಆಡಳಿತದ ದೃಷ್ಟಿಯಿಂದ ಖರ್ಚು ಕಡಮೆಯಾಗುತ್ತದೆ, ಲಾಭ ಜಾಸ್ತಿ ಬರುತ್ತದೆ, ಕೆಲಸ ಬೇಗ ನಡೆಯುತ್ತದೆ, ಮತ್ತು ಕ್ವಾಲಿಟಿ ಬಗ್ಗೆ ಕೂಡ ಹತೋಟಿ ಇಟ್ಟುಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ರಾಷ್ಟ್ರ ಮಟ್ಟದಲಿ ನ್ಯಾಷನಲ್ ಕನ್‌ಸ್ಟ್ರಕ್ಷನ್ ಕಂಪೆನಿ ಇದೆ. ಅದೇ ತರಹ ರಾಜ್ಯ ಮಟ್ಟದಲ್ಲೂ ಒಂದು ಕನ್‌ಸ್ಟ್ರಕ್ಷನ್ ಕಂಪನಿ ಇದೆ.

Sri H. M. CHANNABASAPPA.—Our past experience has not been quite happy both at the notional level as well as at the State level.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಮಂತ್ರಿಗಳ ವಾದವನ್ನು ಕೇಳಿದ್ದೇನೆ. ಪಬ್ಲಿಕ್ ಸೆಕ್ಟರ್ ಸರಿಯಾಗಿ ನಡೆಯುವುದಿಲ್ಲವೆಂದು ಅವರು ಅನೇಕಾವರ್ತಿ ಹೇಳಿದ್ದಾರೆ.

Sri H. M. CHANNABASAPPA.—Because the hon. member raised that point, I had to say that. That does not mean that the future experience will be bad. But the past experience has not been quite happy both at the national level and at the State level.

Sri M. S. KRISHNAN.—The argument has always been that the public sector Construction Company or the Construction Company of the Government here are not functioning well. The same argument is told about industries also. I do not accept these fallacious arguments.

Sri H. M. CHANNABASAPPA.—I wanted to pass on the information that was at my hands.

Sri M. S. KRISHNAN.—So, less amount of work should be given to the contractors and more to this Construction Company. If there are any faults or defects in this Construction Co., that has to be removed, but the Government should not say that because of those faults it was handed over to the private sector. If that approach is there, it is not correct.

Sri H. M. CHANNABASAPPA.—I passed on the information for the benefit of the hon. Member.

Sri M. S. KRISHNAN.—I thank the Hon'ble Minister. I know that these public sector concerns, whether it is in the department of Public Works or outside, quite a number of them are running under loss. But if you go deeply into the matter. I am not so competent to speak about the Construction Company—in the industries more often the monopolists in the country, the private sector is trying to sabotage the public sector, than so see that it is helped. But, as a person in authority, having accepted the principle of socialism, it is very necessary to develop this State sector, and remove the difficulties, if there are any, in this Construction Company.

(Sri M. S. Krishnan)

ತಮ್ಮ ಡಿಪಾರ್ಟ್‌ಮೆಂಟಿನಲ್ಲಿ ಇಟ್ಟಿಗೆ ತಯಾರು ಮಾಡುವ ಕಾರ್ಖಾನೆ ಇದೆ. ಕಾರ್ಖಾನೆ ಇರುವುದು ಒಳ್ಳೆಯದು, ಆದರೆ ಅದನ್ನು ದೊಡ್ಡ ಪ್ರಮಾಣದಲ್ಲಿ ಮಾಡತಕ್ಕಂಥಾದ್ದು ಒಳ್ಳೆಯದೆಂದು ನನ್ನ ಅಭಿಪ್ರಾಯ. ಸಮತಾವಾದ ಒಪ್ಪಿಕೊಂಡ ನಮ್ಮ ರಾಷ್ಟ್ರದಲ್ಲಿ ಹೌಸಿಂಗ್ ಫ್ಯಾಕ್ಟರಿಯನ್ನೂ ಸಹ ಈ ರೀತಿ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಇನ್ನು ಹೆಚ್ಚಾಗಿ ಬ್ರಿಕ್ ಮೇಕಿಂಗ್ ಫ್ಯಾಕ್ಟರಿಗಳನ್ನು ಮಾಡಿದರೆ ಒಳ್ಳೆಯದು. ಸರ್ಕಾರಿ ಕ್ಷೇತ್ರಗಳಿಗೆ ಬೇರೆಯವರ ಸಹಾಯ ಪಡೆದು ಸಮತಾವಾದಿ ರಾಷ್ಟ್ರಗಳಿಂದ ನೆರವು ಪಡೆದು ಮನೆಗಳನ್ನೂ ಕಟ್ಟಿಕೊಡುವುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ನಮ್ಮಲ್ಲಿರುವ ಇಟ್ಟಿಗೆ ತಯಾರಿಸುವ ಫ್ಯಾಕ್ಟರಿಗೆ ಯಾವ ಕಾನೂನುಗಳು ಅನ್ವಯಿಸುತ್ತಾ ಇಲ್ಲ. ಅಲ್ಲಿರುವ ಕಾರ್ಮಿಕರಿಗೆ ಯಾವ ಕಾನೂನು ಅನ್ವಯಿಸುವುದಿಲ್ಲ. ನೀವು ಮಾಡಿರುವ ಕಾನೂನು ಮ್ಯಾನೇಜರ್ ಮತ್ತು ಇತರರಿಗೆ ಅನ್ವಯಿಸದೆ ಹೋದರೆ, ಅನ್ಯಾಯವಾಗುತ್ತದೆ. ಇಲ್ಲಿ ಎರಡು ರೂಪಾಯಿ ಕೂಲಿ ಕೊಡುತ್ತಾರೆ, ಬೇರೆ ಕಡೆಯಲ್ಲಿ 3—4 ರೂಪಾಯಿ ಕೊಡುತ್ತಾರೆ. ಇದನ್ನೆಲ್ಲಾ ಪರಿಶೀಲನೆ ಮಾಡಿ ಅಲ್ಲಿನ ಕೂಲಿಗಾರರಿಗೆ ಸೌಕರ್ಯಗಳನ್ನು ಮಾಡಿಕೊಡಬೇಕು. ಈ ಫ್ಯಾಕ್ಟರಿಗಳು ಚೆನ್ನಾಗಿ ನಡೆಯುವ ಹಾಗೆ ಮಾಡಬೇಕು. ನೌಕರರಿಂದ ಸರಿಯಾದ ಸಹಕಾರ ಸಿಕ್ಕುವ ಹಾಗೆ ಮಾಡಬೇಕೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಚ್. ಜಿ. ಚೆನ್ನಪ್ಪ (ಮಾಗಡಿ).—ಮಾನ್ಯ ಸಭಾಪತಿಗಳೇ, ಇಲ್ಲಿಯವರೆಗೆ ಪಬ್ಲಿಕ್ ವರ್ಕ್ಸ್ ಇಲಾಖೆಯ ವಿಷಯದಲ್ಲಿ ನಮ್ಮ ಸಹೋದ್ಯೋಗಿಗಳು ಹೆಚ್ಚಿನ ಮಟ್ಟದಲ್ಲಿ ಚರ್ಚೆ ಮಾಡಿದ್ದಾರೆ. ನಾನು ಒಂದೆರಡು ಸಲಹೆಗಳನ್ನು ಕೊಟ್ಟು ನನ್ನ ಭಾಷಣವನ್ನು ಅಲ್ಪ ಕಾಲಾವಧಿಯೊಳಗೆ ಮುಕ್ತಾಯ ಮಾಡುತ್ತೇನೆ. ಈಗ ಮೇಜರ್ ಇರಿಗೇಷನ್‌ಗೆ ಹೆಚ್ಚಿನ ಪ್ರಾಶಸ್ತ್ಯ ಕೊಡುತ್ತಿದ್ದಾರೆ. ಆದರೆ ಮೈನರ್ ಇರಿಗೇಷನ್ ಅಭಿವೃದ್ಧಿ ಮಾಡದೆ ಹೋದರೆ ಕ್ಷಾಮ ನಿವಾರಣೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಜನತೆಗೆ ಅನುಕೂಲಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳನ್ನು ಮಾಡಿದರೆ ಒಂದೆರಡು ಪ್ರದೇಶಕ್ಕೆ ಅನುಕೂಲವಾಗುತ್ತದೆ. ಆದರೆ ಎಲ್ಲಾ ಕಡೆ ಅನುಕೂಲವಾಗುವುದಿಲ್ಲ. ಆದುದರಿಂದ ಮೈನರ್ ಇರಿಗೇಷನ್‌ಗೆ ಹೆಚ್ಚಿನ ಸೌಲಭ್ಯ ಆಗುತ್ತದೆಂದು ನಾನಾದರೂ ಭಾವಿಸಿಕೊಂಡಿದ್ದೇನೆ. ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳನ್ನು ಕಟ್ಟುವುದರಿಂದ ಕ್ಯಾಚ್‌ಮೆಂಟ್ ಏರಿಯಾದೊಳಗೆ ಬರತಕ್ಕ ಸಣ್ಣ ಹಳ್ಳಿಗಳಿಗೆ ಮತ್ತು ದೊಡ್ಡ ತೂರಗಳಿಗೆ ಯಾವ ವಿಧವಾದ ಪಿಕ್-ಅಪ್ ಅಥವಾ ಕೆರೆ ಕಟ್ಟುವುದಕ್ಕೆ ಅವಕಾಶವಿಲ್ಲ, ಎಂದು ಒಂದು ಆಜ್ಞೆ ಹೊರಡಿಸಿದ್ದಾರೆ. ಇಂತಹ ಒಂದು ಕ್ಯಾಚ್‌ಮೆಂಟ್ ಏರಿಯಾವನ್ನು ನಿರ್ಲಕ್ಷಿಸಿದ್ದಾರೆ. ಅಂಥ ಪ್ರದೇಶದಲ್ಲಿ ಯಾವ ವಿಧವಾದ ನೀರಾವರಿ ಸೌಲಭ್ಯವು ದೊರೆಯುವುದಿಲ್ಲ. ಕೊನೆಯಪಕ್ಷ ಲಿಫ್ಟ್ ಇರಿಗೇಶನ್ ಸೌಲಭ್ಯ ಒದಗಿಸಿ ದೊಡ್ಡ ದೊಡ್ಡ ಬಾವಿಗಳನ್ನು ತೋಡಿಸುವ ಆಲೋಚನೆ ಮಾಡುವುದಾದರೆ ಸರ್ಕಾರ ನಿಜವಾಗಿ ಜನತೆಯ ಕಷ್ಟಗಳನ್ನು ಪರಿಹಾರ ಮಾಡಿದಂತಾಗುತ್ತದೆ. ಮಾಗಡಿ ತಾಲ್ಲೂಕಿನ ಉದಾಹರಣೆಯನ್ನು ತೆಗೆದುಕೊಳ್ಳುವುದಾದರೆ, ಅಲ್ಲಿ ಕಣ್ವಾ ಪ್ರಾಜೆಕ್ಟಿನ ಕ್ಯಾಚ್‌ಮೆಂಟ್ ಏರಿಯಾ ಬರುತ್ತದೆ. ಬೆಂಗಳೂರು ವಾಟರ್ ಸಪ್ಲೈ ಮಾಡುವ ಅರ್ಕಾವತಿ ಕ್ಯಾಚ್‌ಮೆಂಟ್ ಏರಿಯಾ ಕೂಡ ಬರುವುದರಿಂದ ಅಲ್ಲಿ ಯಾವ ವಿಧವಾದ ಸಣ್ಣ ಕೆರೆಗಳನ್ನು, ಪಿಕ್ ಅಪ್‌ಗಳನ್ನು ಕಟ್ಟುವುದಕ್ಕೆ ಅವಕಾಶವಿಲ್ಲ. ಹಿಂದೆ ಕಟ್ಟಿರತಕ್ಕ ಹಳೆ ಕೆರೆಗಳು ನಾದುರಸ್ತು ಆಗಿವೆ. ಹಣ ಕೇಳಿದರೆ ಮೈನರ್ ಇರಿಗೇಷನ್ ಹೆಡ್‌ನಲ್ಲಿ ಹಣ ಇಲ್ಲ ಎಂದು ಹೇಳುತ್ತಾರೆ. ಪಾಳೆಗಾರರು ಹಿಂದೆ ಕಟ್ಟಿದಂಥ 44 ಸಣ್ಣ ಸಣ್ಣ ಕೆರೆಗಳು ನಾದುರಸ್ತು ಆಗಿವೆ. ಅದಕ್ಕೆ ಹಣ ಒದಗಿಸಿ ತಕ್ಷಣ ರಿಪೇರಿ ಮಾಡಿಕೊಡುವುದಾದರೆ ಹಳ್ಳಿಯ ಜನರಿಗೆ ಹೆಚ್ಚಿನ ನೀರಾವರಿ ಸೌಲಭ್ಯ ದೊರಕಿದಂತಾಗುತ್ತದೆ. ದೊಡ್ಡ ದೊಡ್ಡ ಬಾವಿಗಳನ್ನು ತೋಡಿಸಿ, ನೀರನ್ನು ಲಿಫ್ಟ್ ಇರಿಗೇಷನ್ ಮೂಲಕ ರೈತರಿಗೆ ಒದಗಿಸುವ ನೀರಾವರಿ ಯೋಜನೆಗಳನ್ನು ಕ್ಯಾಚ್‌ಮೆಂಟ್ ಏರಿಯಾದಲ್ಲಿ ಪೂರ್ಣಗೊಳಿಸಬೇಕು ಎಂದು ಮಾನ್ಯ ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

ಮತ್ತೊಂದು ವಿಷಯ ಸಣ್ಣ ಸಣ್ಣ ಕೆರೆಗಳು ಪಿಕ್-ಅಪ್ ಕಟ್ಟಿರುವ ಕಡೆ ಅದರ ಹಿಂಭಾಗದಲ್ಲಿ ಚಾನಲ್ ಮಾಡಿದೆ, ಚಾನಲ್ ಮಾಡದಿರುವುದರಿಂದ, ಅದರ ನೀರು ಉಪಯೋಗವಾಗುವುದಿಲ್ಲ. ಜಮೀನಿನವರು ತಮ್ಮ ಚಾನಲ್ ತೋಡುವುದಕ್ಕೆ ಅವಕಾಶ ಕೊಡುವುದಿಲ್ಲ ಎಂದು ಗುದ್ದಾಡಿ ಸಾಯುತ್ತಾರೆ. ಕೆರೆ ಕಟ್ಟುವುದರಿಂದ ಅನುಕೂಲವಾಗಿಲ್ಲ. ಇಂತಹ ಸಂಕಟಕ್ಕೆ ಜನ ಸಿಕ್ಕಿ ಕೋರ್ಟು ಕಚೇರಿಗಳಿಗೆ ಅಲೆಯುತ್ತಿದ್ದಾರೆ. ಜನಗಳು ಕಾಲುವೆಗಳನ್ನು ಮಾಡಬೇಕೆಂದು ಸರ್ಕಾರದವರು ಹೇಳುತ್ತಾರೆ. ಕೆರೆಗಳಿಗೆ ಪಿಕ್‌ಅಪ್ 20—30 ಸಾವಿರ ರೂಪಾಯಿ ಖರ್ಚುಮಾಡಿ ಪಿಕ್ ಅಪ್ ಕಟ್ಟುವಾಗ 1---2 ಸಾವಿರ ಖರ್ಚುಮಾಡಿ ಕಾಲುವೆಗಳನ್ನು ಮಾಡಿಕೊಟ್ಟರೆ ಹೆಚ್ಚಿನ ಸೌಲಭ್ಯ

ಆಗುತ್ತದೆ ಎಂದು ಮನಗಾಣಬೇಕು. ಈ ಕಾಲುವೆಗಳನ್ನು ಮಾಡಿಸಿಕೊಟ್ಟರೆ ಕೆರೆ ಕಟ್ಟುವುದು ಸಾರ್ಥಕವಾಗುತ್ತದೆ. ಜನರು ಕೋರ್ಟು ಕಚೇರಿಗಳಿಗೆ ಹೋಗುವುದು ತಪ್ಪುತ್ತದೆ. ಇನ್ನು ಐ.ವಿ.ಸಿ. ರೋಡುಗಳು ಎಂದು ಏನು ಮಾಡಿದ್ದಾರೆ, ಅವು ನಾದುರಸ್ತಾಗಿವೆ. ಅನೇಕ ಜನರು ಅವರ ಜಮೀನಿನಲ್ಲಿ ದಾರಿ ಬಿಟ್ಟು ಕೊಟ್ಟು ರಸ್ತೆ ಮಾಡಿಸಿದ್ದಾರೆ. ಹೀಗೆ ರಸ್ತೆಗಳು ನಾದುರಸ್ತು ಆಗಿರುವುದರಿಂದ ಯಾವ ರೈತರು ರಸ್ತೆಗಾಗಿ ಜಮೀನು ಬಿಟ್ಟುಕೊಟ್ಟಿದ್ದಾರೋ ಅವರು ಜಮೀನಿನಲ್ಲಿ ಸಾಗುವಳಿ ಮಾಡುವುದಕ್ಕೆ ಶುರು ಮಾಡಿದ್ದಾರೆ. ಆದ್ದರಿಂದ ಐ. ವಿ. ಸಿ. ರೋಡುಗಳ ರಿಪೇರಿಗಾಗಿ ಸರ್ಕಾರದವರು ತಕ್ಷಣ ಗ್ರಾಂಟ್ ಕೊಡದೆ ಹೋದರೆ ಐ. ವಿ. ಸಿ. ರೋಡುಗಳ ಸ್ಥಿತಿ ಚಿಂತಾಜನಕವಾಗಿರುತ್ತದೆ. ಮಾನ್ಯ ಮಂತ್ರಿಗಳು ಹಳ್ಳಿಗಳ ಕಡೆ ಪ್ರವಾಸ ಕೈಗೊಂಡು ಐ. ವಿ. ಸಿ. ರೋಡುಗಳ ಸ್ಥಿತಿಗತಿಗಳನ್ನು ಪ್ರತ್ಯೇಕವಾಗಿ ನೋಡಿದರೆ ಈ ರಸ್ತೆಗಳ ಸ್ಥಿತಿ ಸುಧಾರಿಸುತ್ತದೆ ಎಂದು ನನಗನ್ನಿಸುತ್ತದೆ. ಅವರು ದೊಡ್ಡ ದೊಡ್ಡ ಮೇನ್ ರೋಡುಗಳಲ್ಲಿ ತಿರುಗಾಡುವ ಬದಲು ಸಣ್ಣ ಸಣ್ಣ ಹಳ್ಳಿಗಳ ರಸ್ತೆಗಳಲ್ಲಿ ಹೋಗುವುದಾದರೆ, ಅವುಗಳ ಸ್ಥಿತಿ ಚಿಂತಾಜನಕವಾಗುವುದು ತಪ್ಪುತ್ತದೆ. ಟಾರ್ ರೋಡ್ಸ್ ಮೇಲೆ ಮಣ್ಣು ಹಾಕಿದರೆ ಮಳೆ ಬಂದಾಗ ಅದು ನಿಲ್ಲುವುದಿಲ್ಲ. ಒಂದೊಂದು ಮೊಳ ಉದ್ದದ ಗುಂಡಿ ಇರುತ್ತದೆ. ದಿನ ತುಂಬದೆ ಇರುವ ಗರ್ಭಿಣಿ ಹೆಂಗಸರು ಬಸ್ಸಿನಲ್ಲಿ ಪ್ರಯಾಣ ಮಾಡಿದರೆ, ದಿವಸ ತುಂಬುವುದಕ್ಕೆ ಮುಂಚೆಯೇ ಮಗು ಜನನವಾಗುತ್ತದೆ ಎನ್ನುವುದರಲ್ಲಿ ಯಾವ ಸಂದೇಹವೂ ಇಲ್ಲ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಇದಕ್ಕೆ ಏನು ಕಾರಣ ? ಈ ರೀತಿ ಏಕೆ ಆಗುತ್ತದೆ ಎಂದು ನನಗೆ ಅರ್ಥವಾಗುವುದಿಲ್ಲ. ಕೆಲಸಗಾರರ ತಪ್ಪೋ, ಕಂಟ್ರಾಕ್ಟರ್ ತಪ್ಪೋ, ವ್ಯವಸ್ಥೆ ಅಥವಾ ಇದರ ಉಸ್ತುವಾರಿ ನೋಡುವ ಇಂಜನಿಯರ್‌ಗಳ ತಪ್ಪೋ, ಎಂದು ನನಗರ್ಥವಾಗುತ್ತಿಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳು ಹೆಚ್ಚಿನ ಶ್ರದ್ಧೆ ವಹಿಸಿ ನಾನ್ ಪಿ.ಡಬ್ಲ್ಯು.ಡಿ. ರಸ್ತೆಗಳನ್ನು ಪಿ.ಡಬ್ಲ್ಯು.ಡಿ.ಗೆ ತೆಗೆದುಕೊಂಡು ಸರಿಪಡಿಸಬೇಕೆಂದು ಹೇಳುತ್ತೇನೆ. ಶ್ರೀಮಾನ್ ಎಚ್. ಕೆ. ವೀರಣ್ಣಗೌಡರ ಕಾಲದಲ್ಲಿ ತೆಗೆದುಕೊಂಡಿರತಕ್ಕ ರಸ್ತೆಗಳು ಈವೊತ್ತಿನವರೆಗೂ ಹಾಗೆ ಉಳಿದಿವೆ. ಒಂದು ಹಿಡಿ ಮಣ್ಣು ಕೂಡ ಹಾಕಿಲ್ಲ. ಹೆಸರಿಗೆ ಮಾತ್ರ ಪಿ.ಡಬ್ಲ್ಯು.ಡಿ. ರಸ್ತೆ ಎಂದು ಇದೆ. ಅದರ ಮೇಲೆ ಜನಗಳು ತಿರುಗಾಡುವುದಕ್ಕೆ ಆಗದೆ ಯಾವ ವಿಧವಾದ ಪ್ರಯಾಣ ಮಾಡುವುದಕ್ಕೆ ಆಗದೆ ಇರುವ ರಸ್ತೆಗಳು ಆಗಿವೆ. ಇಂಜನಿಯರುಗಳು ಗ್ರಾಂಟ್ ಇಲ್ಲ, ಈ ಕೆಲಸ ತೆಗೆದುಕೊಳ್ಳಲು ಬ್ಯಾನ್ ಇದೆ, ಬ್ಯಾನ್ ಲಿಫ್ಟ್ ಮಾಡಿಲ್ಲ, ಎಂದು ಹೇಳುತ್ತಾರೆ. ಇಂತಹ ಪಿ.ಡಬ್ಲ್ಯು ಡಿ.ಗೆ ಸೇರಿಸಿಕೊಂಡಿರುವ ರಸ್ತೆಗಳಿಗೆ ಗ್ರಾಂಟ್ ಕೊಟ್ಟು ಸರಿಪಡಿಸಿ ಜನಗಳು ಸಂಚಾರ ಮಾಡುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಸೂಚನೆ ಮಾಡುತ್ತೇನೆ. ಅತಿ ಮುಖ್ಯವಾಗಿ ಮಧ್ಯೆ ಮಿಸ್ಸಿಂಗ್ ಲಿಂಕ್‌ಗಳು ಎಂದು ಏನು ಹೇಳುತ್ತಾರೆ, ಈ ಕಡೆ ಪಿ.ಡಬ್ಲ್ಯು.ಡಿ. ರಸ್ತೆ ಬರುತ್ತದೆ, ಆ ಕಡೆಯೂ ರಸ್ತೆ ಬಂದು ಮಧ್ಯದ ಅಂತರದಲ್ಲಿ 4—5 ಮೈಲಿಗಳ ಮಿಸ್ಸಿಂಗ್ ಲಿಂಕಗಳು ಇಲ್ಲದೆ ಇರುತ್ತವೆ. ಅಂತಹ ಲಿಂಕುಗಳನ್ನು ತೆಗೆದುಕೊಂಡು ಪೂರ್ತಿ ಮಾಡುವುದರಿಂದ ಜನರ ಪ್ರಯಾಣ ಸೌಲಭ್ಯ ಒದಗಿ ಹೆಚ್ಚಿನ ಅನುಕೂಲವಾಗುತ್ತದೆ ಮತ್ತು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ದೂರ ಕಡಿಮೆಯಾಗುತ್ತದೆ. ಇಂತಹ ಸಲಹೆಗಳಿಗೆ ಮಾನ್ಯ ಮಂತ್ರಿಗಳು ಗಮನ ಕೊಡಬೇಕು ಎಂದು ಈ ಸಂದರ್ಭದಲ್ಲಿ ನಾನು ಅವರನ್ನು ಒತ್ತಾಯಪಡಿಸುತ್ತೇನೆ. ಇನ್ನೊಂದು ವಿಷಯ. ರಾಜ್ಯಾದ್ಯಂತ ನಡೆದಂತೆ ಶರಾವತಿ ಮತ್ತು ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳ ಕರ್ಮಕಾಂಡ ಕೇಳಿ ನಮಗೂ ಬೇಜಾರಾಗಿದೆ. ಜನಗಳಿಗೂ ಬೇಜಾರು ಆಗಿದೆ. ಈ ಕರ್ಮ ಕಾಂಡವನ್ನು ಯಾರು ತಪ್ಪಿತಸ್ತರು ಎಂದು ಆದಷ್ಟು ಜಾಗ್ರತೆ ತೀರ್ಮಾನ ಮಾಡಿ ಮುಗಿಸಿದರೆ ಒಳ್ಳೆಯದು. ಸೆಷನ್ ನಡೆಯುವಾಗ ಕರ್ಮಕಾಂಡ ಗೊಂದಲ ಇರುತ್ತದೆ. ಸೆಷನ್ ಮುಗಿದ ಮೇಲೆ ನಿಂತು ಹೋಗುತ್ತದೆ. ಇದಕ್ಕೆ ಒಂದು ಸಮಿತಿಯನ್ನು ನೇಮಕ ಮಾಡಿ ಎನ್‌ಕ್ವೈರಿ ಮಾಡಿ ತಪ್ಪಿತಸ್ತರಿಗೆ ಶಿಕ್ಷೆ ಕೊಡುವುದು ಅಥವಾ ಮನ್ನಾ ಮಾಡುವುದು ಹೀಗೆ ಮಾಡಿದರೆ ಅನುಕೂಲವಾಗುತ್ತದೆ. ಇಲ್ಲದೆ ಹೋದರೆ ತಾವು ಈ ಕರ್ಮಕಾಂಡದಲ್ಲಿ ಸಿಕ್ಕಿ ನರಳಬೇಕಾಗುತ್ತದೆ.

ಮತ್ತೊಂದು ವಿಷಯ. ಪಿ.ಡಬ್ಲ್ಯು.ಡಿ. ಎಸ್ಟಿಮೇಟ್ ರೇಟು ಎಂದು ಹೇಳುತ್ತಾರೆ. ಕಂಟ್ರಾಕ್ಟ್ ತೆಗೆದುಕೊಂಡಾಗ ಕಡಿಮೆ ರೇಟು ಹಾಕುತ್ತಾರೆ. ಕಡಿಮೆ ಟೆಂಡರ್ ರೇಟು ಕೊಟ್ಟವರಿಗೆ ಕಂಟ್ರಾಕ್ಟ್ ಕೊಡುತ್ತಾರೆ. ಅವರು ಟೆಂಡರ್ ಅಕ್ಸೆಪ್ಟ್ ಮಾಡಿಕೊಂಡ ಮೇಲೆ ಈ ರೇಟಿನಿಂದ ಗಿಟ್ಟುವುದಿಲ್ಲ. ಈ ವರ್ಷ ಹೆಚ್ಚು ರೇಟ್ ಕೊಡಿ ಮುಂದಿನ ವರ್ಷ ಇನ್ನು ಹೆಚ್ಚು ರೇಟ್ ಕೊಡಿ ಎಂದು ಪರ್ಸಿಸ್ಟ್ ಮಾಡಿಕೊಂಡು ಹೋಗುತ್ತಾರೆ. ಆದರಿಂದ ಕೆಲಸ ಜಾಗ್ರತೆಯಾಗುವುದಿಲ್ಲ. ಟೆಂಡರ್ ಅಕ್ಸೆಪ್ಟ್ ಮಾಡುವಾಗ ಬರಿ ಲೋ ಎಸ್ಟಿಮೇಟ್, ಲೋ ಟೆಂಡರ್ ಒಂದನ್ನೇ ಕನ್ಸಿಡರ್ ಮಾಡದೆ ಯಾವುದು ಸೂಕ್ತ ಇದೆ ಎಂಬುದನ್ನು ನೋಡಿ ಅಂಥ ಟೆಂಡರ್ ಅಕ್ಸಪ್ಟ್ ಮಾಡುವುದು

(ಶ್ರೀ ಎಚ್. ಜಿ. ಚೆನ್ನಪ್ಪ)

ಒಳ್ಳೆಯದು ಎಂದು ಕಾಣುತ್ತದೆ. ಅನೇಕ ವಿಷಯಗಳನ್ನು ಮಾತನಾಡಬೇಕಾದುದು ಇತ್ತು. ಇರತಕ್ಕ ಅಲ್ಪಾವಧಿಯಲ್ಲಿ ಕೆಲವು ಸಲಹೆಗಳನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತೆಗೆದುಕೊಂಡು ಬಂದು ಅಧ್ಯಕ್ಷರಿಗೆ ವಂದಿಸಿ ನನ್ನ ಒಂದೆರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ಬಿ. ರಾಮಸ್ವಾಮಿ (ಆನೇಕಲ್).—ಸನ್ಮಾನ್ಯ ಸಭಾಪತಿಗಳೇ ಈ ದಿವಸ ಏನು ಈ ಬೇಡಿಕೆಗಳನ್ನು ಮಂತ್ರಿಗಳು ಇಟ್ಟಿದ್ದಾರೆ ಅದನ್ನು ನಾನು ಪುಷ್ಟೀಕರಿಸಿ, ಬೆಂಬಲಿಸುತ್ತಾ ಕೆಲವು ಸಲಹೆಗಳನ್ನು ಹೇಳಬೇಕೆಂದು ಇಚ್ಛೆಪಡುತ್ತೇನೆ. ನಾವು ನಮ್ಮ ಚುನಾವಣೆಯಲ್ಲಿ ಏನು ಜನತೆಗೆ ಆಶ್ವಾಸನೆಗಳನ್ನು ಕೊಟ್ಟಿದ್ದೇವೆ ಸಮಾತವಾದ ಮತ್ತು ಸಮಾಜವಾದ ಎಂದು ಹೇಳಿದ್ದೇವೆ, ಇದು ನಿಜವಾಗಿ ಅನುಷ್ಠಾನಕ್ಕೆ ಬರಬೇಕಾದರೆ ಗ್ರಾಮಾಂತರ ಪ್ರದೇಶಗಳಲ್ಲಿ ಎಲ್ಲಾ ಜನತೆಗೂ ರಸ್ತೆ ಸಾರಿಗೆ ಸೌಲಭ್ಯ ಹಾಗೂ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ನಮ್ಮ ರಾಜ್ಯ ಗ್ರಾಮಾಂತರ ಪ್ರದೇಶಗಳಿಂದ ಒಳಗೊಂಡಿದೆ. ಈ ರಾಜ್ಯದಲ್ಲಿ ಹೆಚ್ಚಿಗೆ ನಾವು ಬಡವರು ಮತ್ತು ನಿರ್ಗತಿಕರು. ಈ ಬಡರೈತರ ಬಗ್ಗೆ ಹೆಚ್ಚಿಗೆ ಗಮನಕೊಡಬೇಕು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ತಾಲ್ಲೋಕುಬೋರ್ಡು ವಿಚಾರದಲ್ಲಿ ಸರಿಯಾದ ವ್ಯವಸ್ಥೆ ಇಲ್ಲ. ಅಲ್ಲಿ ರಸ್ತೆಗಳು ಸರಿಯಾಗಿ ದುರಸ್ತು ಆಗುತ್ತಾ ಇಲ್ಲ. ತಾಲ್ಲೋಕುಮಟ್ಟದಲ್ಲಿ ಜಿಲ್ಲಾ ಮಟ್ಟದಲ್ಲಿ ಕೆಲವೇ ರಾಜಕೀಯ ಮುಖಂಡರು ಈ ರಸ್ತೆಗಳ ಕಿತ್ತಾಟದಲ್ಲಿ ಗಲಾಟೆಗಳಲ್ಲಿ ಇದ್ದಾರೆ. ಈ ಕಿತ್ತಾಟ ಗಲಾಟೆಗಳಲ್ಲಿ ಬಡ ಜನತೆಗೆ ಖಂಡಿತವಾಗಿ ಅನುಕೂಲವಾಗುತ್ತಾ ಇಲ್ಲ. ಅವರು ನೊಂದಿದ್ದಾರೆ. ನೋಯುತ್ತಿದ್ದಾರೆ ಎಂದು ನನಗಾದರೂ ಅನಿಸುತ್ತದೆ. ರಾಜಕೀಯ ಪಕ್ಷಗಳು ಜನತೆಯ ಉದ್ಧಾರಕ್ಕೋಸ್ಕರ ಕಿತ್ತಾಡಿ ಅವರ ಸೌಲಭ್ಯಗಳನ್ನು ಕಡಿಮೆ ಮಾಡುತ್ತಿದ್ದಾರೆಂದು ವಿಷಾದದಿಂದ ಇಲ್ಲಿ ಪ್ರಸ್ತಾಪ ಮಾಡಬೇಕಾಗಿದೆ. ಯಾವ ಪಕ್ಷವೇ ಆಗಲೀ ಜನತೆಯ ಉದ್ಧಾರಕ್ಕೋಸ್ಕರ ಹೋರಾಡಬೇಕು ಎಂದು ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕು. ಉದಾಹರಣೆಗೆ ಆನೇಕಲ್ ತಾಲ್ಲೋಕು ನನ್ನ ಕ್ಷೇತ್ರ, ಅಲ್ಲಿ ಸರಿಯಾದ ರಸ್ತೆಗಳಿಲ್ಲ. ಕೆಲವೇ ರಾಜಕೀಯ ಕುತಂತ್ರ ಹಾಗೂ ಹೋರಾಟದಲ್ಲಿ ವೈಯುಕ್ತಿಕವಾಗಿ ಜನತೆಯನ್ನು ಮರೆತುಬಿಟ್ಟಿದ್ದಾರೆ. ನನ್ನ ರಸ್ತೆ ಆಗಬೇಕು ಅವರ ರಸ್ತೆ ಆಗಬೇಕು ಎನ್ನುವ ಗಲಾಟೆಯಲ್ಲಿ ಸರ್ಜಾಪುರ ಹೋಬಳಿಯಲ್ಲಿ 9 ಬಿಡ್ಜ್‌ಗಳನ್ನು ಕಿತ್ತು ಹಾಕಿದ್ದಾರೆ. ಅದನ್ನು ಏತಕ್ಕೆ ಕಿತ್ತುಹಾಕಿದರು ಎಂದು ಅರ್ಥವಾಗುತ್ತಾ ಇಲ್ಲ. ಎಲೆಕ್ಷನ್ ಆದಮೇಲೆ ರಾಜಕೀಯ ಪ್ರಭಾವದಿಂದ ನಿಂತು ಹೋಗಿವೆ. ಮಾನ್ಯ ಸಚಿವರು ನಿಪುಣರು ಮತ್ತು ಚತುರರು ಎಂದು ಗೊತ್ತಿದೆ ಅವರು ಎಲ್ಲಾ ಜನರ ಆಶೋತ್ತರಗಳನ್ನು ಪೂರೈಸುತ್ತಾರೆ ಎಂದು ತಿಳಿದುಕೊಂಡಿದ್ದೇನೆ. ದಯವಿಟ್ಟು ಆನೇಕಲ್ ತಾಲ್ಲೋಕು ಸರ್ಜಾಪುರ ಹೋಬಳಿಯಲ್ಲಿ ರಸ್ತೆಗಳ ಬಗ್ಗೆ ಆಗಿರುವ ಅನ್ಯಾಯವನ್ನು ಗಮನಕ್ಕೆ ತೆಗೆದುಕೊಂಡು ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎಂದು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡುತ್ತೇನೆ. ಸರ್ಜಾಪುರ ಹೋಬಳಿಯಲ್ಲಿ 75 ಅಡಿ ಬಾವಿ ತೋಡಿದರೂ ನೀರು ಬೀಳದೆ ಜನಗಳು ಕಷ್ಟದಲ್ಲಿ ಇದ್ದಾರೆ. ಕೆಲವು ದಿವಸಗಳ ಹಿಂದೆ ಸಮಾಜಕಲ್ಯಾಣ ಸಚಿವರು ರೋಡು ವ್ಯವಸ್ಥೆ ಸರಿಯಿಲ್ಲದೆ ದಾರಿ ತಪ್ಪಿಹೋಗಿ, ರಾತ್ರಿ ಸುಮಾರು 9 ಗಂಟೆಯಲ್ಲಿ ಸಭೆಗೆ ತಡವಾಗಿ ಬಂದರು. ಅವರಲ್ಲಿ ಜನರಿಗೆ ಇರುವ ತೊಂದರೆಯನ್ನು ರಿಗ್ಸ್ ಒದಗಿಸಿಕೊಡಬೇಕಾದ ಅವಶ್ಯಕತೆಯನ್ನೂ ನಿವೇದನೆ ಮಾಡಿಕೊಂಡೆ. 25 ವರ್ಷಗಳಲ್ಲಿ ಮಾಡಿದ ಅನ್ಯಾಯ 25 ವರ್ಷಗಳಲ್ಲಿ ಆಗದೇ ಇರತಕ್ಕ ಸೌಲಭ್ಯಗಳು ನಮ್ಮ ಮಾನ್ಯ ಸ್ನೇಹಿತರು ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕು. ಅವನ್ನೆಲ್ಲಾ ಮೂರು ತಿಂಗಳಲ್ಲಿ ಸರಿ ಮಾಡಲು ಸಾಧ್ಯವಿಲ್ಲ. ನಮ್ಮ ಸರ್ಕಾರ ಬಂದು 3 ತಿಂಗಳು ಆಗಿದೆ. ಆಗಲೇ ಮಂತ್ರಿಗಳು ಆಶ್ವಾಸನೆ ಪ್ರಕಾರ ಲಂಚಗುಳಿತನ ಕಮ್ಮಿ ಮಾಡಿದ್ದೇವೆ ಎಂದು ಹೇಳಿದ್ದಾರೆ. ಚೀಫ್ ಇಂಜನಿಯರ್ ಎಕ್ಸಿಕ್ಯೂಟೀವ್ ಇಂಜನಿಯರ್‌ಗಳನ್ನು ಸಸ್ಪೆಂಡ್ ಮಾಡಿದ್ದೇ ಒಂದು ಉದಾಹರಣೆ ಹೇಳುತ್ತೇನೆ. ಹಾಗೆ ಪ್ರತಿಯೊಂದು ತಾಲ್ಲೋಕಿಗೂ 50 ಮೈಲಿ ರಸ್ತೆ ಕೊಡುತ್ತೇವೆ ಎಂದು ಹೇಳಿದ್ದೀರಿ 50 ಮೈಲಿ ಕೊಟ್ಟರೆ ಏನೂ ಸಾಧಿಸುವುದಕ್ಕೆ ಆಗುವುದಿಲ್ಲ. 100 ಮೈಲಿ ರಸ್ತೆಯನ್ನಾದರೂ ಕನಿಷ್ಟಪಕ್ಷ ಕೊಡಬೇಕು ಎಂದು ಈ ಸಂದರ್ಭದಲ್ಲಿ ಒತ್ತಾಯಮಾಡಿ ಹೇಳುತ್ತೇನೆ. ಹಾಗೆ ಆನೇಕಲ್ ತಾಲ್ಲೋಕಿನಲ್ಲಿ ಅನೇಕ ಬಾವಿಗಳು ದುರಸ್ತು ಆಗಬೇಕಾಗಿವೆ. ಟೆಂಡರ್ ಕರೆದು ಎಷ್ಟಿಮೇಲು ಆದರೂ ಸಹ ಇದುವರೆಗೂ ಯಾರಿಗೆ ಕಂಟ್ರಾಕ್ಟ್ ಕೊಡಬೇಕು ಎನ್ನುವ ಹೋರಾಟದಲ್ಲಿ, ಕಿತ್ತಾಟದಲ್ಲಿ ನಮ್ಮ ರೈತರಿಗೆ ಅನ್ಯಾಯಮಾಡುತ್ತಿದ್ದಾರೆ. ಹೀಗೆ ಮಾವಿನಕೆರೆಯಲ್ಲಿ ತಿಂಗಳಿಗೆ 2 ಆಕ್ಸಿಡೆಂಟ್ ಆಗುತ್ತವೆ. ಅಲ್ಲಿ ಬ್ರಿಡ್ಜ್ ಕೊಡಬೇಕೆಂದು ಪ್ರಾರ್ಥನೆ ಮಾಡಿದರೂ, ಶಿಫಾರಸ್ಸು ಮಾಡಿದರೂ, ಇನ್ನು ಒಂದು ಪಕ್ಷದವರು ಅದನ್ನು ವಿರೋಧ ಮಾಡಿ ಹಾಳುಮಾಡಿದ್ದಾರೆ. ಈಗಲಾದರೂ ತಮ್ಮ ಗಮನಕ್ಕೆ ತರುತ್ತೇನೆ. ತಾವು ವಿಶಾಲ

ಹೃದಯಿರು ಆನೇಕಲ್ ತಾಲ್ಲೋಕಿನಲ್ಲಿ ಏನು ಪ್ರಾಜೆಕ್ಟ್‌ಗಳು ಆಗಬೇಕಾಗಿವೆ ಕೆರೆಗಳು ಏನು ದುರಸ್ತಿ ಆಗಬೇಕಾಗಿವೆ ಅವನ್ನು ದಯವಿಟ್ಟು ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಬೆಂಗಳೂರಿನ ವೈಶಿಷ್ಟ್ಯ ಏನೆಂದರೆ, ಯಾರು ಮುಖಂಡರು ಇದ್ದಾರೋ ಆ ತಾಲ್ಲೋಕಿಗೆ ಹೆಚ್ಚು ದುಡ್ಡು ಒದಗಿಸುತ್ತಾರೆ. ಎಲ್ಲಿ ಮುಖಂಡತ್ವ ಕಡಿಮೆ ಇದೆಯೋ ಅಲ್ಲಿಗೆ ಸ್ವಲ್ಪ ಹಣ ಕೊಟ್ಟು ಏನೂ ಅನುಕೂಲ ಮಾಡಿಕೊಡುವುದಿಲ್ಲ. ಯಾವ ತಾಲ್ಲೋಕು ಹಿಂದುಳಿದಿದೆ ಆ ತಾಲ್ಲೋಕಿನ ಅಭಿವೃದ್ಧಿಗೆ ಹೆಚ್ಚಿಗೆ ಹಣ ಕೊಡಬೇಕೆಂದು ಈ ಸಂದರ್ಬದಲ್ಲಿ ಪ್ರಾರ್ಥನೆ ಮಾಡುತ್ತೇನೆ. ನಾನು ಪಿಡಬ್ಲ್ಯೂಡಿ ಇಲಾಖೆ ಕಾರ್ಯದರ್ಶಿಯವರನ್ನು ಅನೇಕಲ್ ತಾಲ್ಲೋಕಿನ ಸಬ್‌ಡಿವಿಜನ್ ಶಿಫ್ಟ್ ಮಾಡಿ ಬೇರೆ ತಾಲ್ಲೋಕಿಗೆ ಯಾತಕ್ಕೆ ಕೊಟ್ಟಿದ್ದಾರೆ ಎಂದು ಕೇಳಿದೆ. ಅವರು ಬಹಳ ಕರುಣೆಯ ರೀತಿಯಲ್ಲಿ ಹೇಳಿದರು. ತುಂಬಾ ಸಂತೋಷವಾಯಿತು. ಆಗಲೇ ಸೂಪರಿಂಟೆಂಡಿಂಗ್ ಇಂಜಿನಿಯರಿಗೆ ಬರೆದಿದ್ದೇವೆ ಯಾತಕ್ಕೆ ಕ್ರಮ ತೆಗೆದುಕೊಂಡಿಲ್ಲ ಎಂದು ವಿಚಾರಿಸುತ್ತೇನೆ ಎಂದು ಹೇಳಿದರು. ನನಗಾದರೂ ಅನಿಸುತ್ತದೆ ನಮ್ಮ ತಾಲ್ಲೋಕಿನಲ್ಲಿರುವ ಅಸಿಸ್ಟೆಂಟ್ ಇಂಜಿನಿಯರ್ ಬೆಂಗಳೂರಿನಲ್ಲಿ ವಾಸಮಾಡಿಕೊಂಡು ಇರುವುದರಿಂದ ಅವರು ಬಡವರ ಕಷ್ಟ ನೋಡಿಕೊಳ್ಳುವುದಕ್ಕೆ ಮತ್ತು ಕಾಮಗಾರಿಗಳನ್ನು ನೋಡಿಕೊಳ್ಳುವುದಕ್ಕೆ ಸಾಧ್ಯ ಆಗುತ್ತಾ ಇಲ್ಲ. ರಸ್ತೆ ದುರಸ್ತು ಮಾಡಬೇಕು ಎಂದು ಏನು ನಾವು ಆಸೆ ಇಟ್ಟುಕೊಂಡಿದ್ದೇವೆ ಅದು ಸಾಧ್ಯವಾಗುತ್ತಿಲ್ಲ.

ಮಾನ್ಯ ಸಚಿವರಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ ಅದಷ್ಟು ಬೇಗ ಬೆಂಗಳೂರಿನಲ್ಲಿರುವ ಸಬ್-ಡಿವಿಜನನ್ನು ಆನೇಕಲ್ ತಾಲ್ಲೂಕ್‌ಗೆ ಷಿಫ್ಟ್ ಮಾಡಿಕೊಡಬೇಕೆಂದು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ರೀತಿ ವರ್ಗಾವಣೆ ಮಾಡುವುದರಲ್ಲಿ ಹೆಚ್ಚಿನ ಅನುಕೂಲಗಳಿರುವುದು ಕಂಡುಬಂದರೂ ಕೂಡ ಇದುವರೆಗೆ ಮಾಡಿಲ್ಲ. ಎಕ್ಸಿಕ್ಯುಟಿವ್ ಇಂಜಿನಿಯರ್ ಅವರು ಅದರ ಬಗ್ಗೆ ಕ್ವೈರಿ ಹಾಕಿದ್ದಾರೆಂದು ಕೇಳಿದ್ದೇನೆ. ಆ ರೀತಿ ಹಾಕುವುದಕ್ಕೆ ವೆಸ್ಟೆಡ್ ಇಂಟರೆಸ್ಟ್ ಏನು ಇದೆಯೋ ನನಗೆ ಗೊತ್ತಿಲ್ಲ. ಇದಕ್ಕೆಲ್ಲಾ ಮಾನ್ಯ ಸಚಿವರು ಗಮನ ಕೊಡವೆ ಕೂಡಲೇ ವರ್ಗ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

4–30 P.M.

ಇನ್ನು ಸರ್ವಿಸ್ ಮ್ಯಾಟರ್ಸ್‌ನಲ್ಲಿ ಹೇಳುವುದಾದರೆ, ಸುಮಾರು 460 ಜನ ಜೂನಿಯರ್ ಇಂಜಿನಿಯರ್ಸ್‌ನ್ನು ಅಪಾಯಿಂಟ್ ಮಾಡಿದ್ದೀರಿ. ಆದರೆ ಹರಿಜನರಿಗೆ ಸರಿಯಾದ ಪ್ರಾತಿನಿಧ್ಯ ಕೊಟ್ಟಿಲ್ಲ. ಇದರಿಂದ ಹರಿಜನರಿಗೆ ಅನ್ಯಾಯವಾಗಿದೆ. 6 ಜನ ಎಕ್ಸಿಕ್ಯುಟಿವ್ ಇಂಜಿನಿಯರ್‌ಗಳನ್ನು ನೇಮಕ ಮಾಡುವಾಗಲೂ ಸಹ ಹರಿಜನರಿಗೆ ಪ್ರಾತಿನಿಧ್ಯ ಕೊಟ್ಟಿಲ್ಲ. ಇಲ್ಲೂ ಸಹ ಅನ್ಯಾಯ ಮಾಡಿದ್ದೀರಿ. ಇನ್ನು ಮುಂದೆಯೂ ಸಹ ಇವರಿಗೆ ಈ ಇಲಾಖೆಯಲ್ಲಿ ಅನ್ಯಾಯಗಳಾಗದಂತೆ ನೋಡಿಕೊಳ್ಳಬೇಕು. ರಾಜ್ಯಾಂಗದ ಪ್ರಾಕಾರ ಇವರಿಗೆ ಏನು ಒಂದು ಹಕ್ಕುಗಳು ಇವೆಯೋ ಅದರ ಪ್ರಕಾರ ಅಪಾಯಿಂಟ್‌ಮೆಂಟ್ ಮತ್ತು ಭಡ್ತಿಗಳನ್ನು ಕೊಡುವಾಗ ಪ್ರತಿಧ್ಯ ಕೊಡಬೇಕು ಮತ್ತು ಇವರ ಬಗ್ಗೆ ಹೆಚ್ಚಿನ ಮಮತೆಯನ್ನು ಇಟ್ಟುಕೊಳ್ಳಬೇಕು. ಏಕೆಂದರೆ ಸರ್ಕಾರ ಆರಿಸಿ ಆಡಳಿತಕ್ಕೆ ಬಂದಿರುವುದು ಅವರಿಂದಲೇ ಆಗಿರುವುದರಿಂದ ಅವರಿಗೆ ಹೆಚ್ಚಿನ ಅನುಕೂಲಗಳನ್ನು ಕಲ್ಪಿಸಿಕೊಡಬೇಕು. ಇವರ ಮೇಲೆ ಹೆಚ್ಚಿನ ಕರುಣೆಯಿಟ್ಟು ಎಲ್ಲ ಕ್ಷೇತ್ರಗಳಲ್ಲಿಯೂ ನ್ಯಾಯವಾದ ರೀತಿಯಲ್ಲಿ ಅವರಿಗಿರುವ ಹಕ್ಕುಗಳನ್ನು ಕಲ್ಪಿಸಿಕೊಡಬೇಕೆಂದು ಕಳಕಳಿಯಿಂದ ಪ್ರಾರ್ಥಿಸಿಕೊಳ್ಳುತ್ತೇನೆ.

ಲೇಬರ್ ಕಾಂಟ್ರಾಕ್ಟ್ ಅಂಡ್ ಕನ್‌ಸ್ಟ್ರಕ್ಷನ್ ಸೊಸೈಟಿಸ್ ಎಂಬುದಾಗಿ ರಾಜ್ಯದಲ್ಲಿ ಇವೆ. ಇವುಗಳಿಗೆ 25 ಸಾವಿರ ರೂಪಾಯಿಗಳ ಕೆಲಸಗಳನ್ನು ಟೆಂಡರ್ ಇಲ್ಲದೆ ಕೊಡಲಾಗುತ್ತಿತ್ತು. ಆದರೆ ಹಿಂದಿನ ಸರ್ಕಾರದವರು ಈ ಕ್ರಮವನ್ನು ತಪ್ಪಿಸಿಬಿಟ್ಟರು. ಹಿಂದಿನ ಸರ್ಕಾರದವರು ಮಾಡಿದ ಈ ತಪ್ಪಿಗೆ ಬಡ ಕೂಲಿಗಾರರಿಗೆ ಬಹಳ ತೊಂದರೆಯಾಯಿತು. ಈಗಿನ ಸರ್ಕಾರದವರಾದರೂ ಸಹ ಹಿಂದೆ ಇದ್ದಂತೆ 25 ಸಾವಿರ ರೂಪಾಯಿಗಳವರೆಗಿನ ಕೆಲಸವನ್ನು ಟೆಂಡರಗಳಿಲ್ಲದೆ ಈ ಸೊಸೈಟಿಗಳವರಿಗೆ ಕೊಡುವುದನ್ನು ಮುಂದುವರಿಸಬೇಕೆಂದು ಹೇಳುತ್ತೇನೆ. ಈಗ ಇಕಾನಮಿ ಆರ್ಡರ್ ಏನಿದೆ ಅದನ್ನು ಅದಷ್ಟು ಜಾಗ್ರತೆ ಲಿಫ್ಟ್ ಮಾಡಿದರೆ ಬಡ ಜನತೆಗೆ ಅನುಕೂಲವಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಸುತ್ತೇನೆ. ಮಾನ್ಯ ಮಂತ್ರಿಗಳು ಕೆಲವು ಇಂಜಿನಿಯರ್‌ಗಳನ್ನು ಸಸ್ಪೆಂಡ್ ಮಾಡಿದ್ದಾರೆ. ಅದರ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಯಾರು ದಕ್ಷರು, ನೀತಿವಂತರು, ಬುದ್ಧಿವಂತರು, ಪ್ರಾಮಾಣಿಕರು ಇರುತ್ತಾರೋ ಅವರ ಬಗ್ಗೆ ಸರ್ಕಾರದವರು ಸಹಾನುಭೂತಿ ತೋರಿಸಬೇಕೆಂದು ಹೇಳುತ್ತೇನೆ. ತಪ್ಪಿತಸ್ಥರಿಗೆ ಶಿಕ್ಷೆ ಕೊಡುವ ಸಮಯದಲ್ಲಿ ತಪ್ಪು ಮಾಡದ ಮುಗ್ಧರಿಗೂ ಸಹ ಸೇರಿಸಿಕೊಂಡು ಶಿಕ್ಷೆ ಕೊಟ್ಟಿದ್ದೇ ಆದರೆ

(ಶ್ರೀ ಎಂ. ಬಿ. ರಾಮಸ್ವಾಮಿ)

ಅದರಿಂದ ಇಡೀ ಇಲಾಖೆಯಲ್ಲಿಯೇ ಡೀ-ಮಾರಲೈಜೇಷನ್ ಆಗುತ್ತದೆ. ಇನ್‌ಸೆಂಟಿವ್ ಹೋಗಿ ಬಿಡುತ್ತದೆ. ಆಗ ಯಾರೂ ಸರಿಯಾಗಿ ಕೆಲಸ ಮಾಡುವುದಿಲ್ಲ. ಸರ್ಕಾರದ ಯಾವ ಆರ್ಡರ್‌ಗಳನ್ನು ಸರಿಯಾಗಿ ಪರಿಪಾಲನೆ ಮಾಡುವುದಿಲ್ಲ. ಈ ಕಾರಣದಿಂದ ಯಾರು ಅನ್ಯಾಯ ಮಾಡಿದ್ದಾರೆ ಅಂತಹ ವರಿಗೆ ಮಾತ್ರ ಶಿಕ್ಷೆ ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ.

ಕಂಟ್ರಾಕ್ಟ್ ಕೊಡುವ ವಿಚಾರದಲ್ಲಿ ಹೇಳುವುದಾದರೆ, ಕ್ಲಾಸ್ ಒಂದರಿಂದ ಹಿಡಿದು ಕ್ಲಾಸ್ ನಾಲ್ಕರವರೆಗೆ ಎಲ್ಲ ಕೆಲಸಗಳನ್ನು ಇಂದು ಶ್ರೀಮಂತ ಕಂಟ್ರಾಕ್ಟರ್‌ಗಳೇ ಮಾಡುತ್ತಿದ್ದಾರೆ. ಒಂದೇ ವರ್ಗದವರು ಮತ್ತು ಒಂದೇ ಜಾತಿಯವರು ಎಲ್ಲ ಕೆಲಸಗಳನ್ನು ಕಂಟ್ರಾಕ್ಟ್ ತೆಗೆದುಕೊಂಡು ಮಾಡುತ್ತಿದ್ದಾರೆ. ಇದರಿಂದಾಗಿ ಹರಿಜನರಿಗೆ ಪ್ರಾತಿನಿಧ್ಯ ಇಲ್ಲದಂತಾಗಿದೆ. ಕಂಟ್ರಾಕ್ಟ್ ಕೊಡುವಾಗ ಹರಿಜನರಿಗೂ ಸಹ ಸಾಕಷ್ಟು ಪ್ರಾತಿನಿಧ್ಯ ಕೊಟ್ಟು ಅವರು ಸಹ ಮುಂದೆ ಬರುವುದಕ್ಕೆ ಸಹಾಯ ಮಾಡಬೇಕೆಂದು ಈ ಸಂದರ್ಭದಲ್ಲಿ ಕಳಕಳಿಯಿಂದ ಬೇಡಿಕೊಳ್ಳುತ್ತೇನೆ.

ವಿದ್ಯುಚ್ಛಕ್ತಿ ಬೋರ್ಡಿನಲ್ಲಿ ಇಂದು ಇರುವ ಅಧ್ಯಕ್ಷರು ಬಹಳ ತಜ್ಞರಾಗಿದ್ದಾರೆಂದು ನನಗನ್ನಿಸುತ್ತದೆ ಅವರು ಪ್ರಾಮಾಣಿಕರಾಗಿದ್ದಾರೆ. ಆದರೆ ಈ ಬೋರ್ಡಿನಲ್ಲಿ ಸಿ. ಅಂಡ್ ಆರ್ ರೂಲ್ಸ್ ಇಲ್ಲ. ಈ ಕಾರಣದಿಂದ ಉದ್ಯೋಗಗಳಲ್ಲಿ ಹರಿಜನ ಮತ್ತು ಗಿರಿಜನರಿಗೆ ಪ್ರಾತಿನಿಧ್ಯ ಸಿಗುತ್ತಿಲ್ಲ. ಇನ್ನು ಮುಂದೆ ಯಾದರೂ ಸಹ ರಾಜ್ಯಾಂಗದಲ್ಲಿ ಹೇಳಿರುವಂತೆ ಇವರಿಗೆ 18 ಪರ್‌ಸೆಂಟ್ ಮೀಸಲು ಸ್ಥಾನಗಳನ್ನು ಈ ಬೋರ್ಡಿನಲ್ಲಿಯೂ ಸಹ ಕೊಡಿಸುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಅವಕಾಶ ಮಾಡಿಕೊಡುತ್ತಾರೆಂದು ತಿಳಿದುಕೊಂಡು, ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎ. ವಿ. ಮುನಿಸ್ವಾಮಿ (ಮಾಲೂರು).—ಸನ್ಮಾನ್ಯ ಸಭಾಪತಿಯವರೇ, ನಮ್ಮ ಲೋಕೋಪಯೋಗಿ ಮಂತ್ರಿಗಳು ಮಂಡಿಸಿರುವಂತಹ ಬೇಡಿಕೆಗಳನ್ನು ಸಂಪೂರ್ಣವಾಗಿ ಅನುಮೋದಿಸುತ್ತಾ ಕೆಲವು ವಿಚಾರಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ಎದುರು ಪಕ್ಷದ ಸದಸ್ಯರು ಎರಡು ದಿವಸಗಳಿಂದ ಈ ಡಿಮ್ಯಾಂಡ್ ಮೇಲೆ ಮಾತನಾಡಿದ್ದನ್ನು ನಾನು ನೋಡುತ್ತಿದ್ದೇನೆ. ಎಲ್ಲ ಸದಸ್ಯರು ಬಹಳವಾಗಿ ವಿರೋಧ ಮಾಡಿದ್ದಾರೆ. ಆದರೆ ಆ ರೀತಿ ವಿರೋಧ ಮಾಡಿದವರು ಈ ಬಡ್ಜೆಟ್ ಮೇಲಿರುವ ಗ್ರಾಂಟ್‌ಗಳನ್ನು ರೀಅಪ್ರೋಪ್ರಿಯೆಟ್ ಮಾಡಿ ಎಂದು ಯಾರೂ ಸಹ ಹೇಳುತ್ತಿಲ್ಲ. ಅಂದರೆ ಪರೋಕ್ಷವಾಗಿ ಎಲ್ಲರೂ ಈ ಗ್ರಾಂಟ್‌ಗಳಿಗೆ ಅನುಮತಿ ಕೊಡುತ್ತಿದ್ದಾರೆಂದು ಅರ್ಥವಾಗುತ್ತದೆ. ವಿರೋಧ ಮಾಡಿದಂಥ ಸದಸ್ಯರುಗಳು ನಮಗೆ ಈ ಗ್ರಾಂಟುಗಳು ಬೇಡ ಎಂದು ಹೇಳಿದ್ದರೆ ಚೆನ್ನಾಗಿರುತ್ತಿತ್ತು. ಆದರೆ ಮಾತನಾಡಿದಂಥ ವಿರೋಧಪಕ್ಷದ ಸದಸ್ಯರುಗಳು ಮೊದಲು ವಿರೋಧ ಮಾಡಿ ಅನಂತರ ನಮಗೆ ಆ ರಸ್ತೆ ಮಾಡಿಸಿಕೊಡಬೇಕು, ಈ ಸೇತುವೆ ಮಾಡಿಸಿಕೊಡಬೇಕು ಮುಂತಾಗಿ ಬೇಡಿಕೆಗಳನ್ನು ಇಟ್ಟರು. ಇದನ್ನು ನಾನು ಒಂದು ನದಿಗೆ ಹೋಲಿಕೆ ಮಾಡುತ್ತೇನೆ. ನದಿ ನೀರು ಮೊದಲು ಬೆಟ್ಟದ ಮೇಲಿನಿಂದ ಹರಿದು ಬರುವಾಗ ಬಹಳ ದೊಡ್ಡದಾಗಿ ಶಬ್ದ ಮಾಡಿಕೊಂಡು ಹರಿದು ಕೆಳಗೆ ಬರುತ್ತಿರುತ್ತದೆ. ಆಗ ನೀರನ್ನು ನೋಡುವುದಕ್ಕೆ ಬಹಳ ಚೆನ್ನಾಗಿರುತ್ತದೆ. ಅದೇ ನೀರು ಬಯಲು ಜಾಗಗಳಲ್ಲಿ ಹರಿಯುವಾಗ ಶಬ್ದ ಮಾಡದೆ ನಿಶ್ಶಬ್ದವಾಗಿಬಿಡುತ್ತದೆ. ಅದರಂತೆ ಮಾನ್ಯ ವಿರೋಧಪಕ್ಷದವರು ಮೊದಲು ಶಬ್ದ ಮಾಡುತ್ತಾ ಎಲ್ಲವನ್ನೂ ವಿರೋಧಮಾಡುತ್ತೇವೆಂದು ಹೇಳುತ್ತಾರೆ. ಕೊನೆಕೊನೆಯಲ್ಲಿ ನಮಗೆ ನಾಲೆ ಬೇಕು, ಕಟ್ಟೆ ಬೇಕು, ರಸ್ತೆ ಬೇಕು ಎಂದು ಹೇಳುವುದಕ್ಕೆ ಪ್ರಾರಂಭ ಮಾಡುತ್ತಾರೆ. ಅಂದರೆ ಪರೋಕ್ಷವಾಗಿ ಅವರು ಸಹ ಈ ಗ್ರಾಂಟ್‌ಗಳಿಗೆ ಸಮ್ಮತಿ ಕೊಡುತ್ತಿದ್ದಾರೆ. ಬಿಜಾಪುರ ಜಿಲ್ಲೆ ಬಹಳ ಹಿಂದುಳಿದಿದೆ ಎಂಬುದಾಗಿ ಎರಡು ಕಡೆಯ ಸದಸ್ಯರು ಸಹ ಕಳೆದ ಎರಡು ದಿವಸಗಳಿಂದ ಹೇಳುತ್ತಲೇ ಇದ್ದಾರೆ. ಆದರೆ ನಾನು ಹೇಳುವುದು ಏನೆಂದರೆ, ಬಿಜಾಪುರ ಜಿಲ್ಲೆಯೊಂದರಲ್ಲೇ ಕ್ಷಾಮವಿಲ್ಲ. ಕೋಲಾರ ಜಿಲ್ಲೆಯಲ್ಲಿಯೂ ಸಹ ಕ್ಷಾಮವಿದೆ. ಅಲ್ಲಿಯ ಜನರು ಸುಭಿಕ್ಷವನ್ನು ಇನ್ನೂ ನೋಡಿಲ್ಲ. ಕಳೆದ ಎರಡು ವರ್ಷಗಳಿಂದ ಸರಿಯಾಗಿ ಮಳೆ ಬಂದಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಬಿಜಾಪುರ ಜಿಲ್ಲೆಯಿಂದ ಆರಿಸಿ ಬಂದಂಥ ಸದಸ್ಯರು ಆ ಜಿಲ್ಲೆಯ ಪರಿಸ್ಥಿತಿಯ ಬಗ್ಗೆ ಹೇಳಿದರೆ ಈ ಸದಸ್ಯರು ಏತಕ್ಕೆ ಆಕ್ಷೇಪ ಮಾಡಬೇಕು.

ಶ್ರೀ ಎ. ವಿ. ಮುನಿಸ್ವಾಮಿ.—ಮಾನ್ಯ ಸದಸ್ಯರು ನಾನು ಮಾತನಾಡುವಾಗ ಇಂಟರಪ್ಟ್ ಮಾಡಬಾರದು. ನಾವು ಅವರು ಮಾತನಾಡುವಾಗ ಸುಮ್ಮನೆ ಕುಳಿತು ಕೇಳುವಂತೆ ನಾವು ಮಾತನಾಡುವಾಗಲೂ ಸಹ ಅವರು ಸುಮ್ಮನೆ ಕುಳಿತು ಕೇಳಬೇಕೆಂದು ಹೇಳುತ್ತೇನೆ.

Mr. DEPUTY SPEAKER.—Sri Konandur Lingappa, may please note that the hon. Member has put forward an unimpeachable argument which you can never meet. If he realises the impact of the argument, he should not interrupt again.

ಶ್ರೀ ಕಾಗೋಡು ತಿಮ್ಮಪ್ಪ.—ಬಿಜಾಪುರ ಜಿಲ್ಲೆಯವರು ಅವರ ಜಿಲ್ಲೆಯ ಬಗ್ಗೆ ಹೇಳಿದ್ದಕ್ಕೆ ಇವರೇಕೆ ಅಕ್ಷೇಪಮಾಡಬೇಕು ?

ಉಪಾಧ್ಯಕ್ಷರು.—ಅವರು ಹೇಳುತ್ತಿರುವುದು ಏನೆಂದರೆ, ವಿರೋಧಪಕ್ಷದ ಸದಸ್ಯರು ಮೊದಲು ಬೇಡಿಕೆಗಳನ್ನು ವಿರೋಧಿಸಿ ನಂತರ ತಮಗೆ ಅದು ಬೇಕು, ಇದು ಬೇಕು ಎಂದು ಕೇಳುತ್ತಾರೆ ಎಂಬುದಾಗಿ.

ಶ್ರೀ ಎ. ವಿ. ಮುನಿಸ್ವಾಮಿ.—ವಿರೋಧಪಕ್ಷದವರು ಪರೋಕ್ಷವಾಗಿ ಬೇಡಿಕೆಗಳಿಗೆ ಅನುಮತಿ ಕೊಡುತ್ತಿದ್ದಾರೆ. ಇದರ ಜೊತೆಗೆ ನಾವು ಮಾತನಾಡುವಾಗ ವಿರೋಧಪಕ್ಷದವರು ಮಧ್ಯೆ ಮಧ್ಯೆ ಮಾತನಾಡಿ ನಮ್ಮ ಸಮಯವನ್ನು ಹಾಳು ಮಾಡುತ್ತಿದ್ದಾರೆ. ನಮ್ಮ ಸೌಜನ್ಯವನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ. ಇನ್ನು ಮುಂದೆ ಅಧ್ಯಕ್ಷರು ಪಕ್ಷಗಳಲ್ಲಿರುವ ಸದಸ್ಯರನ್ನು ಗಣನೆಗೆ ತೆಗೆದುಕೊಂಡು ಅದರ ಒಂದು ಆಧಾರದ ಮೇಲೆ ಸಮಯವನ್ನು ಅಲಾಟ್‌ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತು ತಮ್ಮ ಮೂಲಕ ನಮ್ಮ ಪಕ್ಷದ ವಿಪ್‌ಗೂ ಕೂಡ ಕೇಳಿಕೊಳ್ಳುತ್ತೇನೆ.

ಮಾನ್ಯ ಪಬ್ಲಿಕ್‌ವರ್ಕ್ಸ್ ಶಾಖೆಯ ಮಂತ್ರಿಗಳಾದ ಶ್ರೀಮಾನ್ ಚನ್ನಬಸಪ್ಪನವರು ಇದನ್ನು ಸ್ವಲ್ಪ ಗಮನಿಸಬೇಕು. ನಮ್ಮ ಜಿಲ್ಲೆಯಲ್ಲಿ ಗದ್ದೆ ಬೆಳೆ ಬರಬೇಕಾದರೆ ಬಹಳ ಕಷ್ಟ. ಏತಕ್ಕೆಂದರೆ ನಮ್ಮ ಕೋಲಾರ ಜಿಲ್ಲೆಯಲ್ಲಿ ಮಳೆ ಸರಿಯಾಗಿ ಆಗುವುದಿಲ್ಲ. ಕೆರೆಗಳು ಸರಿಯಾಗಿ ತುಂಬುವುದಿಲ್ಲ. ಕೆಲವು ಕಡೆ ಒಂದು ವರ್ಷಕ್ಕೆ 2-3 ಬೆಳೆ ತೆಗೆಯುತ್ತಾರೆ. ಹೀಗಿರುವಾಗ ನಮ್ಮ ಅರ್ಥ ಮಂತ್ರಿಗಳು ಎಲ್ಲರಿಗೂ ಒಂದೇ ವಿಧವಾದ ಫ್ಲಾಟರೇಟ್ ನೀರಿನ ತೆರಿಗೆಯನ್ನು ಹಾಕಿದ್ದಾರೆ. ನಮ್ಮ ಕೋಲಾರ ಜಿಲ್ಲೆಯಲ್ಲಿ ಒಂದು ಬತ್ತದ ಅಥವಾ ಗದ್ದೆ ಬೆಳೆಯಾಗಬೇಕಾದರೆ 2-3 ಸಾರಿ ಕೆರೆ ತುಂಬಬೇಕಾಗುತ್ತದೆ. ಅದಕ್ಕೆ ಸರಿಯಾಗಿ ಮಳೆ ಬೇರೆ ಸರಿಯಾಗಿ ಆಗುವುದಿಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳಾದ ಶ್ರೀಮಾನ್ ಚನ್ನಬಸಪ್ಪನವರು ನಮ್ಮ ಕೋಲಾರ ಜಿಲ್ಲೆಯಲ್ಲಿ ಒಂದು ಸಾರಿ ಕೆರೆ ತುಂಬಿದರೆ ಬತ್ತದ ಬೆಳೆ ಬರುವ ಹಾಗೆ ನಮ್ಮ ಕೆರೆಗಳನ್ನು ರಿಪೇರಿ ಮಾಡಿಸಿಕೊಟ್ಟು, ಬೇಕಾದರೆ ನೀರು ಕರ ಹಾಕಿ ವಸೂಲು ಮಾಡಿಕೊಳ್ಳಿ ನಾನು ಅದಕ್ಕೆ ಬೇಡ ಎಂದು ಹೇಳುವುದಿಲ್ಲ. ನಾವು ಒಂದು ಬಾವಿಯನ್ನು ತೋಡಿ ಮೇಲಕ್ಕೆ ನೀರು ತರಬೇಕಾದರೆ ಭಗೀರಥ ಪ್ರಯತ್ನಮಾಡಿ ಪಾತಾಳ ಗಂಗೆಯನ್ನು ತರಬೇಕು. ಒಂದು ಬಾವಿಯನ್ನು ತೆಗೆದು ಅದಕ್ಕೆ ಪಂಪುಸೆಟ್ಟು ಹಾಕಿ ನೀರನ್ನು ಒದಗಿಸಿಕೊಳ್ಳಬೇಕಾದರೆ 10, 15, 20 ಸಾವಿರ ರೂಪಾಯಿಗಳವರೆಗೂ ನಾವು ಖರ್ಚು ಮಾಡಬೇಕಾಗುತ್ತದೆ. ನಮ್ಮ ಪಬ್ಲಿಕ್‌ವರ್ಕ್ಸ್ ಶಾಖೆಯ ಮಂತ್ರಿಗಳು ವಿದ್ಯುಚ್ಛಕ್ತಿ ಬೋರ್ಡ್ ಮಾಡಿ ನಮಗೆ ಬಹಳ ತೊಂದರೆ ಕೊಡುತ್ತಿದ್ದಾರೆ. ಮೊದಲು 1965ನೇ ಇಸವಿಯಲ್ಲಿ ಪಂಪುಸೆಟ್ಟುಗಳಿಗೆ ಒಂದು ಎಚ್. ಪಿ ವಿದ್ಯುಚ್ಛಕ್ತಿಯನ್ನು ಕೊಡಬೇಕಾದರೆ ಬೋರ್ಡಿನವರು 2,500 ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದರು. ಈಗ ಅದನ್ನು 1,250 ರೂಪಾಯಿಗಳಿಗೆ ಇಳಿಸಿದ್ದಾರೆ. ಅದರ ಜೊತೆಗೆ ಕಬ್ಬಿಣ ಮತ್ತು ಇತರ ಎಲೆಕ್ಟ್ರಿಕ್ ಸಾಮಾನುಗಳ ಬೆಲೆ ಜಾಸ್ತಿಯಾಗಿದೆ, ಆದ್ದರಿಂದ ಯಾರಾದರೂ ರೈತರು ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಕೇಳಿದರೆ ಅದು ನಾನ್ ರೆಮ್ಯುನರೇಟಿವ್, ನಾನ್ ಫೀಜಬಲ್ ಎಂದು ಹೇಳಿ ಲೈನ್ ಹಾಕುವುದಿಲ್ಲ, ವಿದ್ಯುಚ್ಛಕ್ತಿ ಕೊಡುವುದಿಲ್ಲ. ಆದ್ದರಿಂದ ಇದು ರೈತರಿಗೆ ತೊಂದರೆಯಾಗುತ್ತದೆ. ಈ ಬಗ್ಗೆ ಮಾನ್ಯ ಮಂತ್ರಿಗಳು ತಮ್ಮ ಗಮನವನ್ನು ಹರಿಸಬೇಕು. ನಮಗೆ ಮೊದಲು ಎಲೆಕ್ಟ್ರಿಸಿಟಿ ಬೋರ್ಡಿನವರು ಪ್ರೈಮರಿ ಲೈನು ಎಳೆದುಕೊಟ್ಟರೆ ಮುಂದೆ ರೈತರು ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿಯನ್ನು ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ.

ಶರಾವತಿಯ ಬಗ್ಗೆ ನಾನು ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಈ ಶರಾವತಿಯ ಕರ್ಮಕಾಂಡ ಮೊದಲು ಶುರು ಆದುದ್ದು ಶ್ರೀಮಾನ್ ಚನ್ನಬಸಪ್ಪನವರ ಕಾಲದಲ್ಲಿ; ಇವರೇ ಅಲ್ಲಿ ಕಂಟ್ರಾಕ್ಟ್ ಸಿಸ್ಟಂ ಜಾರಿಗೆ ತಂದು ಆ ಕೆಲಸವನ್ನು ಕಂಟ್ರಾಕ್ಟ್ ಕೊಟ್ಟರು ಎಂದು ಕೆಲವು ಮಾನ್ಯ ಸದಸ್ಯರು ಹೇಳಿದರು. ಈ ಶರಾವತಿಯ ಕೆಲಸಕಾರ್ಯಗಳು ಶ್ರೀಮಾನ್ ಚನ್ನಬಸಪ್ಪನವರ ಕಾಲದಲ್ಲಿ ಯಾವ ರೀತಿಯಾಗಿ ನಡೆದಿದೆ, ಆಮೇಲೆ ಎಷ್ಟರಮಟ್ಟಿಗೆ ನಡೆದಿದೆ ಎಂಬುದು ಎಲ್ಲರಿಗೂ ಗೊತ್ತಿದೆ. ಆದ್ದರಿಂದ ಈ ಶರಾವತಿಯಲ್ಲಿ ನಡೆದಿರತಕ್ಕ ಅವ್ಯವಹಾರಕ್ಕೆ ಹಿಂದೆ ಅಧಿಕಾರದಲ್ಲಿದ್ದವರೇ ಜವಾಬ್ದಾರರು ಎಂದು ನಾವು ಹೇಳಬೇಕಾಗಿದೆ.

(ಶ್ರೀ ಎ. ಪಿ. ಮುನಿಸ್ವಾಮಿ)

ಈಗ ಕೆಲವು ಅಧಿಕಾರಿಗಳನ್ನು ಸಸ್ಪೆಷನ್‌ನಲ್ಲಿ ಇಟ್ಟಿರತಕ್ಕ ವಿಷಯದಲ್ಲಿ ಕೆಲವು ಮಾನ್ಯ ಸದಸ್ಯರು ಬಹಳ ಉದ್ವಿಗ್ನರಾಗಿ ಮಾತನಾಡುತ್ತಾ ಅದು ಸರಿಯಿಲ್ಲ ಎಂದು ಹೇಳಿದರು. ಈಗ ಯಾರಾದರೂ ತಪ್ಪು ಮಾಡಿದರ ಅವರನ್ನು ಸಸ್ಪೆನ್‌ಷನ್ ಮಾಡದಿದ್ದರೆ ಹೇಗಾಗುತ್ತದೆ? ಯಾವ ಅಧಿಕಾರಿಗಳನ್ನು ಸಸ್ಪೆನ್‌ಷನ್ ಮಾಡಿದ್ದಾರೆಯೋ ಅವರನ್ನು ವಿಚಾರಣೆ ಮಾಡುತ್ತಾರೆ ಅವರು ತಪ್ಪಿತಸ್ಥರಾಗಿದ್ದರೆ ಅವರಿಗೆ ಸರಿಯಾದ ಶಿಕ್ಷೆಯನ್ನು ಕೊಡಲಿ. ಯಾವ ಇಲಾಖೆಯಲ್ಲಿ ಆಗಲಿ ಲಂಚಕೊಡದೇ ಯಾವ ಕೆಲಸವೂ ಆಗುವುದಿಲ್ಲ. ಅದರಲ್ಲೂ ಕೋ-ಆಪರೇಟಿವ್ ಡಿಪಾರ್ಟ್‌ಮೆಂಟಿನಲ್ಲಿ ಕೂಡ ಲಂಚ ಕೊಡದಿದ್ದರೆ ಕೆಲಸಗಳು ಆಗುವುದಿಲ್ಲ. ಇಷ್ಟು ಹೇಳಿ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಚ್. ಎಂ. ಚನ್ನಬಸಪ್ಪ (ಲೋಕೋಪಯೋಗಿ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ ನಿನ್ನೆ ಮತ್ತು ಇವೊತ್ತಿನದಿವಸ ಈ ಕಡೆ ಹಾಗೂ ಆ ಕಡೆ ಮಾನ್ಯ ಸದಸ್ಯರುಗಳು ಎಲ್ಲರೂ ಕೂಡ ಬಹಳ ಸಂಯಮದಿಂದ ಲೋಕೋಪಯೋಗಿ ಖಾತೆಯ ಬೇಡಿಕೆಗಳು ಏನಿವೆ ಅವುಗಳ ಬಗ್ಗೆ ಚರ್ಚೆ ಮಾಡುತ್ತಾ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅವರು ಉಪಯುಕ್ತವಾದ ಸಲಹೆಗಳನ್ನು ಸಹ ಕೊಟ್ಟಿದ್ದಾರೆ. ಮತ್ತು ಕಟುವಾದ ಟೀಕೆಗಳನ್ನೂ ಕೂಡ ಮಾಡಿದ್ದಾರೆ. ಅವೆಲ್ಲವನ್ನೂ ಕೂಡ ನಾನು ಬಹಳ ಆದರದಿಂದ ಆಲಿಸಿದ್ದೇನೆ. ಮತ್ತು ಎಲ್ಲೆಲ್ಲಿ ಉಪಯುಕ್ತವಾದ ಸಲಹೆಗಳನ್ನು ಕೊಟ್ಟರು ಅವುಗಳನ್ನೆಲ್ಲಾ ತೀವ್ರಾಸಕ್ತಿಯಿಂದ ಅನುಸರಿಸಬೇಕು ಎಂಬ ಅಭಿಪ್ರಾಯವುಳ್ಳವನಾಗಿದ್ದೇನೆ. ಎಲ್ಲಿ ಎತ್ತಿರಿಸಿ ಟೀಕೆ ಟಿಪ್ಪಣಿ ಮಾಡಿದ್ದಾರೆ ಅವುಗಳಿಗೆಲ್ಲಾ ತಕ್ಕ ಸಮಂಜಸವಾದ ಉತ್ತರವನ್ನು ಕೊಡಬೇಕಾದ್ದು ನನ್ನ ಕರ್ತವ್ಯ ಇದೆ. ಟೀಕೆಟಿಪ್ಪಣಿಗಳನ್ನು ಮಾಡಿದವರು ಸದುದ್ದೇಶದಿಂದ ಮಾಡಿದ್ದಾರೆ ಎನ್ನತಕ್ಕಂಥಾದ್ದು ನನ್ನ ಅಭಿಪ್ರಾಯ. ಒಟ್ಟಿನಲ್ಲಿ ರಾಜ್ಯದಲ್ಲಿ ಒಳ್ಳೆಯ ಸರ್ಕಾರ ಸ್ಥಾಪನೆಯಾಗಬೇಕು, ಸತ್ಯಸಂಧತೆಯ ಅಧಾರದ ಮೇಲೆ ಕೆಲಸ ಮಾಡತಕ್ಕ ಆಡಳಿತ ವರ್ಗ, ಸರ್ಕಾರ ಸ್ಥಾಪನೆಯಾಗಬೇಕು, ಆದರಿಂದ ದೇಶಕ್ಕೆ ಹೆಚ್ಚಿನ ಪ್ರಯೋಜನ ಆಗಬೇಕು ಎಂದು ನಮ್ಮ ಮತ್ತು ನಿಮ್ಮೆಲ್ಲರ ಮೂಲ ಗುರಿ. ಆ ಗುರಿಯನ್ನು ಮುಟ್ಟುವುದಕ್ಕೆ ಯಾವ ಯಾವ ಮಾರ್ಗಗಳನ್ನು ನಾವು ಅನುಸರಿಸಿದ್ದೇವೆ ಅದರಲ್ಲಿ ಅಲ್ಪಸಲ್ಪ ಭಿನ್ನಾಭಿಪ್ರಾಯ ಇರಬಹುದೇ ವಿನಾ, ಮೂಲಭೂತ ಗುರಿಯನ್ನು ಮುಟ್ಟುವ ವಿಷಯದಲ್ಲಿ ನಮಗೂ ನಿಮಗೂ ಭಿನ್ನಾಭಿಪ್ರಾಯಗಳಿಲ್ಲ. ಒಳ್ಳೆಯ ಸರ್ಕಾರವನ್ನು ಸ್ಥಾಪನೆ ಮಾಡಬೇಕು, ದಕ್ಷತೆಯ ಆಧಾರದ ಮೇಲೆ ಕೆಲಸ ಮಾಡತಕ್ಕ ಸರ್ಕಾರ ಸ್ಥಾಪನೆಯಾಗಬೇಕು, ಪ್ರಾಮಾಣಿಕತೆಯಿಂದ ಕೆಲಸ ಮಾಡತಕ್ಕ ಸರ್ಕಾರ ಸ್ಥಾಪನೆಮಾಡಬೇಕು ಎಂಬುದು ನಮ್ಮಿಬ್ಬರ ಗುರಿ. ನಾವು ಹೋಗತಕ್ಕ ಮಾರ್ಗಗಳಲ್ಲಿ ಸ್ವಲ್ಪ ಹೆಚ್ಚೂ ಕಡಿಮೆ ಇದ್ದರೆ ಅವುಗಳನ್ನು ಕುರಿತು ಸಮಾಲೋಚನೆ ಮಾಡಿ ಸರಿಪಡಿಸಿ ಕೊಳ್ಳತಕ್ಕದ್ದು ನಮ್ಮ ಕರ್ತವ್ಯ ಇದೆ. ವಿರೋಧ ಪಕ್ಷದವರು ಒಂದು ರೀತಿಯಲ್ಲಿ ನಮಗೆ ಸಹಾಯಕರು. ಏತಕ್ಕೆಂದರೆ ಆಡಳಿತದಲ್ಲಿ ಏನು ಲೋಪದೋಷಗಳು ಇವೆ ಅವುಗಳನ್ನೆಲ್ಲಾ ಎತ್ತಿತೋರಿಸಿ ಅವುಗಳನ್ನು ಸರಿಪಡಿಸಿಕೊಳ್ಳುವುದಕ್ಕೆ ಸಹಾಯಕರಾಗಿದ್ದಾರೆ. ಆದ್ದರಿಂದ ಅವರು ಹೇಳತಕ್ಕದ್ದು ಸರಿಯಿಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಒಂದೊಂದುವೇಳೆ ಆಡಳಿತಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿ ಅವರಲ್ಲಿ ಕರಾರುವಾಕ್ ಆದ ಅಂಕಿ ಅಂಶಗಳು ಇರುವುದಿಲ್ಲ. ಅವರು ಸರಿಯಾದ ಅಂಕಿ ಅಂಶಗಳನ್ನು ಇಟ್ಟುಕೊಂಡು ಅವರೂ ಕೂಡ ತಮ್ಮ ಟೀಕೆಟಿಪ್ಪಣಿಗಳನ್ನು ರಚನಾತ್ಮಕವಾದ ರೀತಿಯಲ್ಲಿ ಮಾಡುವುದರಲ್ಲಿ ಯಾವ ಅಭ್ಯಂತರವೂ ಇರುವುದಿಲ್ಲ. ಆದ್ದರಿಂದ ಈ ಬೇಡಿಕೆಗಳ ಮೇಲೆ ಈ ಸಭೆಯಲ್ಲಿ ಏನೇನು ಟೀಕೆಟಿಪ್ಪಣಿಗಳು ನಡೆದಿವೆ ಅವುಗಳನ್ನೆಲ್ಲಾ ನಾನು ಬಹಳ ವಿಶ್ವಾಸದಿಂದ ಆಲಿಸಿ ಪ್ರತಿಯೊಬ್ಬರ ಟೀಕೆಗಳನ್ನು ನೋಟು ಮಾಡಿಕೊಂಡಿದ್ದೇನೆ. ಇದರಲ್ಲಿ ಎಲ್ಲೆಲ್ಲಿ ಏನೇನು ಕೆಲಸಗಳು ಆಗಬೇಕು, ರಸ್ತೆಗಳ ವಿಷಯ, ವಿದ್ಯುಚ್ಛಕ್ತಿ ವಿಷಯ, ಕೆರೆಕಟ್ಟೆಗಳ ನಿರ್ಮಾಣ, ಜಲಾಶಯಗಳ ನಿರ್ಮಾಣ ಇವುಗಳೆಲ್ಲವನ್ನೂ ಕೂಡ ಅನೇಕ ಮಾನ್ಯ ಸದಸ್ಯರು ಅವರವರ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ವಿಚಾರಗಳನ್ನು ತಿಳಿಸಿದ್ದಾರೆ. ಅವುಗಳೆಲ್ಲವನ್ನೂ ಒಂದೊಂದಾಗಿ ತೆಗೆದುಕೊಂಡು ಅವುಗಳಿಗೆ ಉತ್ತರವನ್ನು ಕೊಡುವ ಬದಲು ರಸ್ತೆಗಳ ವಿಷಯದಲ್ಲಿ, ವಿದ್ಯುಚ್ಛಕ್ತಿ ಸರಬರಾಜು ವಿಷಯದಲ್ಲಿ ಮತ್ತು ಸಣ್ಣಪುಟ್ಟ ನೀರಾವರಿ ವಿಷಯದಲ್ಲಿ ಸರ್ಕಾರದ ಯೋಚನೆ ಏನಿದೆ ಎಂಬುದನ್ನು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ. ಅದನ್ನು ಯಾವರೀತಿ ಅನುಸರಿಸಬೇಕು ಮತ್ತು ಎಲ್ಲೆಲ್ಲಿ ತಾರತಮ್ಯ ಇದೆಯೆಂದು ಹೇಳುತ್ತಾರೆಯೋ ಅವುಗಳೆಲ್ಲವನ್ನೂ ಸರಿಪಡಿಸಿದರೆ ರಾಜ್ಯದ ಎಲ್ಲಾ ಭಾಗಗಳು ಚೆನ್ನಾಗಿ ಬೆಳೆದು ಬರುವುದಕ್ಕೆ ಅವಕಾಶವಾಗುತ್ತದೆ. ಇದಕ್ಕೆ ಸಂಬಂಧಪಟ್ಟ

ನೀತಿ ನಿಯಮವನ್ನು ರೂಪಿಸಿಕೊಂಡರೆ ಆಗ ತನ್ನಷ್ಟಕ್ಕೆ ತಾನೆ ಕಾರ್ಯಚಟುವಟಿಕೆಗಳು ಚೆನ್ನಾಗಿ ನಡೆಯುತ್ತವೆ. ಬರೀ ನೀತಿನಿಯಮವನ್ನು ರೂಪಿಸುವುದು ಅಷ್ಟೇ ಅಲ್ಲ, ಆಡಳಿತ ವರ್ಗ ಕೂಡ ನಿಷ್ಠೆ, ಪ್ರಾಮಾಣಿಕತೆ ಮತ್ತು ದಕ್ಷತೆಯಿಂದ, ದೇಶಪ್ರೇಮದಿಂದ ಕೆಲಸ ಮಾಡುವಂತೆ ವ್ಯವಸ್ಥೆ ಮಾಡಬೇಕಾಗುತ್ತದೆ.

ಈ ಎರಡು ಕೆಲಸಗಳು ಆಯಿತೆಂದರೆ ನಮ್ಮ ನಿಮ್ಮ ಗುರಿ ಮುಟ್ಟಿದ ಹಾಗೆ ಆಗುತ್ತದೆ. ಇನ್ನು ನೀತಿ ನಿಯಮಗಳ ವಿಷಯದ ಮೇಲೆ ಸ್ವಲ್ಪ ಹೇಳಬೇಕಾಗುತ್ತದೆ. ಇದುವರೆವಿಗೂ ಮಾತನಾಡಿದಂತಹ ಹಲವರು ಬಹಳವಾಗಿ ಮನಸ್ಸಿನ ಉತ್ಸುಕತೆಯಿಂದ ಅನೇಕ ಅಭಿಪ್ರಾಯ ಗಳನ್ನು ಹೊರಗೆಡಹುವಾಗ ಅನೇಕ ತಪ್ಪು ತಿಳಿವಳಿಕೆಯಿಂದ ಕೂಡಿ ಬಂದಂತ ಕೆಲವು ಅಂಶಗಳನ್ನು ಹೊರಗೆಡವಿದ್ದಾರೆ. ಉದಾಹರಣೆಗೆ ನಮಗೆ ದಕ್ಷತೆಯಿಂದ ಕೆಲಸ ಮಾಡತಕ್ಕ ಆಡಳಿತ ವರ್ಗ ಬೇಕು ಪ್ರಾಮಾಣಿಕತೆಯಿಂದ ಕೆಲಸ ಮಾಡುವ ಆಡಳಿತ ವರ್ಗಬೇಕು, ಮತ್ತು ಒಂದು ವೇಳೆ ದಕ್ಷತೆ ಇಲ್ಲ ದಿದ್ದರೆ ಅದನ್ನು ಆದಷ್ಟು ಹೆಚ್ಚು ಮಾಡಬೇಕು ; ಎಲ್ಲಿ ಅದಕ್ಷತೆ ಕಂಡು ಬರುತ್ತದೆ, ಅದನ್ನು ತಪ್ಪಿಸಿ, ಪ್ರಾಮಾಣಿಕ ಅಧಿಕಾರಿಗಳನ್ನು ಅಲ್ಲಿ ಹಾಕಿ ಸರಿಪಡಿಸಬೇಕು. ಇದರಲ್ಲಿ ನಾವು ಕಾರ್ಯೋ ನ್ಮುಖರಾಗಬೇಕೇ, ಬೇಡವೇ ಎಂಬುದನ್ನು ನಾವು ಮೊದಲು ತೀರ್ಮಾನ ಮಾಡಬೇಕು. ದಕ್ಷ ಆಡಳಿತ ವರ್ಗ ಇರಬೇಕು, ಪ್ರಾಮಾಣಿಕತೆಯಿಂದ ಕೆಲಸ ಮಾಡುವ ಆಡಳಿತ ವರ್ಗ ನಮಗೆ ಬೇಕೆಂದ ಮೇಲೆ ರೀತಿ ನೀತಿಗಳನ್ನು ಅನುಸರಿಸಿ, ವಿಧಿ ನಿಯಮಗಳನ್ನು ಅನುಸರಿಸಿ, ತಪ್ಪಿತಸ್ಥರಿಗೆ ಉಗ್ರ ವಾಗಿ ಶಿಕ್ಷೆ ವಿಧಿಸುವುದರಲ್ಲಿ ನಾವೂ ನೀವೂ ಒಮ್ಮತವಾಗಿರಬೇಕು. ಅದು ಬಿಟ್ಟು ಬಿಟ್ಟು ಎತ್ತು ಏರಿಗೆಳೆಯಿತು, ಕೋಣ ನೀರಿಗೆಳೆಯಿತು ಎಂದ ಹಾಗೆ, ಈ ಬಗ್ಗೆ ನಾವು ಜಂಜಾಟಕ್ಕೆ ಹೊರಟರೆ, ಆಗ ಆಡಳಿತ ಕುಸಿದು ಬೀಳುತ್ತದೆ. ಶೀಘ್ರವಾಗಿ ವಿಧಿನಿಯಮಗಳಿಗನುಸಾರವಾಗಿ ಪ್ರಾಮಾಣಿ ಕತೆಯನ್ನು ಹೆಚ್ಚಿಸಲು, ಅಧಕ್ಷರನ್ನು ದಂಡಿಸಲು ಕಾರ್ಯಕ್ರಮಗಳನ್ನು ತೆಗೆದುಕೊಂಡರೆ, ಅದರ ಮೇಲೆ ಉಗ್ರವಾದ ಟೀಕೆ ಟಿಪ್ಪಣಿಗಳನ್ನು ಮಾಡಲು ಹೊರಟರೆ ಆಗ ನಾವು ನಿಜವಾದ ಮಾರ್ಗದಲ್ಲಿ ಹೋಗುತ್ತಿದ್ದೇವೆಯೇ ಎಂಬುದನ್ನು ಪ್ರಶ್ನೆ ಮಾಡಬೇಕಾಗಿದೆ. ಮಾನ್ಯ ದೇವೆಗೌಡರು ಬಹಳ ಒಳ್ಳೆಯವರು, ಮಾತಿನಲ್ಲಿ ಬಹಳ ಮೃದುವಾದವರು. ನನ್ನನ್ನಂತೂ ಯಾರು ಹೊಗಳಬೇಕೆಂಬ ಆಶೆ ನನಗೆ ಇಲ್ಲ. ನನ್ನನ್ನು ಯಾರು ಹೊಗಳಲಿ, ಅಥವಾ ತೆಗಳಲಿ, ಆದರೆ ನನ್ನ ಮನೋಭಾವ ಮಾತ್ರ 10—15 ವರ್ಷಗಳಿಂದ ಬದಲಾವಣೆಯಾಗಿಲ್ಲ. ನಾನು 10—15 ವರ್ಷಗಳಿಂದ ಹಿಂದೆ ಏನು ಅಭಿಪ್ರಾಯ ಮತ್ತು ನೀತಿ ನಿಯಮಗಳನ್ನು ಇಟ್ಟುಕೊಂಡಿದ್ದೇನೋ, ಅವುಗಳನ್ನೇ ಇವತ್ತು ಕೂಡ ಇಟ್ಟುಕೊಂಡಿದ್ದೇನೆ. ಅದರಲ್ಲಿ ತಪ್ಪು ಅಥವಾ ಲೋಪದೋಷಗಳು ಇರಬಹುದು ; ಇರ ತಕ್ಕಂತಹ ಸಂಗತಿಯನ್ನು ಇದ್ದಂತೆ ಹೇಳುತ್ತಿದ್ದೇನೆ. ಅವರು ನನಗೆ ''ಸಸ್ಪೆನ್‌ಶನ್ ಮಿನಿಸ್ಟರ್'' ಎಂದು ಕೂಡ ಹೆಸರು ಇಟ್ಟು ಕರೆದರು. ಒಂದು ವೇಳೆ ಅದು ಅವರಿಗೆ ಆಪ್ಯಾಯಮಾನವಾಗಿ ಕಂಡು ಬರುವುದಾದರೆ, ನಾನು ಸಸ್ಪೆನ್‌ಶನ್ ಮಿನಿಸ್ಟರ್ ಎಂದು ಹೇಳಿಸಿಕೊಳ್ಳುವುದಕ್ಕೆ ಏನೂ ಅಭ್ಯಂತರ ವಿಲ್ಲ. ಅವರೆ ಎಲ್ಲಿ ತಪ್ಪು ಮಾಡುತ್ತಾರೆ ಅವರ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳುವುದರಲ್ಲಿ ನಾನೇನೂ ಹಿಂದು ಮುಂದು ನೋಡುವುದಿಲ್ಲ. ಅವರ ಬಗ್ಗೆ ಒಬ್ಬೊಬ್ಬರು ಒಂದೊಂದು ರೀತಿಯ ವ್ಯಾಖ್ಯಾನವನ್ನು ಮಾಡಿದ್ದು ನೋಡಿ ನನ್ನ ಮನಸ್ಸಿಗೆ ಬಹಳ ನೋವು ಉಂಟಾಯಿತು. ರಾಜ್ಯದಲ್ಲಿ ಹೆಸರು, ಕುಲ ಕೋಮು ವಂಗಡ—ಇವುಗಳನ್ನು ಕಣ್ಣಲ್ಲಿ ನೋಡದೆಯೂ, ಕಿವಿಯಾರೆ ಕೇಳದೆಯೂ ಕೆಲಸ ಮಾಡತಕ್ಕಂತವರಲ್ಲಿ ನಾನೂ ಒಬ್ಬ. ಅವನ್ನು ಬಹುಶಃ ನಮ್ಮ ಸ್ನೇಹಿತರು ಕೂಡ ಚೆನ್ನಾಗಿ ತಿಳಿದುಕೊಂಡಿದ್ದಾರೆಂದು ನಾನಂದುಕೊಂಡಿದ್ದೇನೆ. ಈ ವಿಷಯದಲ್ಲಿ ಬಹುಶಃ ಯಾರದೂ ಭಿನ್ನಾಭಿಪ್ರಾಯವಿರಲಾರದೆಂದು ಭಾವಿಸುತ್ತೇನೆ. ಯಾರೋ ಒಬ್ಬ ಆಫೀಸರ್ ಮೇಲೆ ಅಪಾದನೆ ಬಂದವು. ಆಗ ಅದರ ಮೇಲೆ ವಿಧಿನಿಯಮಗಳಿಗನುಸಾರವಾಗಿ ಕ್ರಮ ತೆಗೆದುಕೊಂಡಾಗ, ಇವರು ಇಂಥ ಜಾತಿಯವರು, ಹೀಗೆ ಏಕೆ ಮಾಡಿದಿರಿ ಎಂದು ಕೇಳಿದರೆ ಈ ದೇಶದಲ್ಲಿ ಎಲ್ಲಾ ಕೆಲಸ ಕಾರ್ಯಗಳನ್ನು ಸುಗಮವಾಗಿ ಮಾಡಿಕೊಂಡು ಹೋಗುವುದಕ್ಕೆ ಹೇಗೆ ತಾನೆ ಸಾಧ್ಯ? ನಾನು ಇಷ್ಟು ಮಾತ್ರ ಹೇಳಬಲ್ಲೆ. ಈ ಅಧಿಕಾರಿಗಳು ಏನಿದ್ದಾರೆ, ಇವರೆಲ್ಲರೂ ನಮ್ಮ ದೇಶಕ್ಕೋಸ್ಕರ ಇರತಕ್ಕವರೇ ಹೊರತು ದೇಶವು ಅಧಿಕಾರಿಗಳಿಗೋಸ್ಕರ ಇರುವುದಲ್ಲ. ನಮ್ಮ ಇಡೀ ದೇಶದ ಆಡಳಿತವನ್ನು ನಡೆಸುವುದಕ್ಕೋಸ್ಕರ ಅವರು ಇರುವುದು. ಆದ್ದರಿಂದ ದೇಶಕ್ಕನುಗುಣವಾಗಿ, ದೇಶದ ಬೆಳವಣಿಗೆಗಾಗಿ ವಿಧಿನಿಯಮಗಳಿಗನುಸಾರವಾಗಿ ಕೆಲಸ ಮಾಡತಕ್ಕವರಿಗೆ ಪ್ರೋತ್ಸಾಹ ಕೊಡ ಬೇಕು ಮತ್ತು ಯಾರು ಅದಕ್ಕೆ ವಿರುದ್ಧವಾಗಿ ಹೋಗುತ್ತಾರೆ, ಅವರ ಮೇಲೆ ವಿಧಿ ನಿಯಮಗಳಿಗನುಸಾರವಾಗಿ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಒಂದು ವಿಷಯ ಹೇಳುವು ದಾದರೆ ಮಾನ್ಯ ಸದಸ್ಯರನೇಕರು ಯಾರನ್ನು ಕುರಿತು ಇವತ್ತು ಮಾತನಾಡುತ್ತಿದ್ದಾರೆ ಅದರಲ್ಲಿ ನಾನೇನೂ ಇವತ್ತು ಹೊಸದಾಗಿ ತಪು ಕಂಡಿದ್ದವನಲ್ಲ. ಅದು ನಡೆದಿರತಕ್ಕಂಥದ್ದು 196[illegible]ನೇ

(ಶ್ರೀ ಎಚ್. ಎಂ. ಚನ್ನಬಸಪ್ಪ)

ಇಸವಿಯಲ್ಲಿ. ಅದು ಅಲ್ಲಿಂದ ಶುರುವಾಗಿ ನಾವು ಬರುವ ಹೊತ್ತಿಗೆ ಅದರ ಫೈಲು ನಮ್ಮ ಹತ್ತಿರ ಬಂತು. ಒಂದು ಲಕ್ಷ 32 ಸಾವಿರ ಚಿಲ್ಲರೆ ರೂಪಾಯಿ ಕಾನೂನಿಗೆ ಮತ್ತು ವಿಧಿನಿಯಮಗಳಿಗೆ ವಿರುದ್ಧವಾಗಿ ಸರ್ಕಾರಕ್ಕೆ ಲೋಪ ಬರತಕ್ಕಂತಹ ರೀತಿಯಲ್ಲಿ ವ್ಯಯವಾಗಿದೆ. ವಿಜಿಲೆನ್ಸ್ ಕಮಿಷನ್ನಿನವರು ಕೂಡ ಇದರ ಮೇಲೆ ಉಗ್ರವಾದ ಕ್ರಮ ತೆಗೆದುಕೊಳ್ಳತಕ್ಕಂತಹ ಕೇಸು ಇದೆ ಎಂದು ಶಿಫಾರಸು ಮಾಡಿದ್ದಾರಲ್ಲದೆ, ಆ ಒಂದು ಲಕ್ಷ 32 ಸಾವಿರ ರೂಪಾಯಿಯನ್ನು ಸಂಬಂಧಪಟ್ಟವರಿಂದ ವಸೂಲು ಮಾಡಬೇಕೆಂದು ಕೂಡ ಹೇಳಿದ್ದಾರೆ. ಒಂದು ವೇಳೆ ನಾನಲ್ಲದೆ ನೀವು ಯಾರಾದರೂ ಇದೇ ಸ್ಥಾನದಲ್ಲಿ ಇದ್ದಿದ್ದರೆ ಅಂಥವರ ಮೇಲೆ ಕ್ರಮ ತೆಗೆದುಕೊಳ್ಳುತ್ತಿದ್ದೀರೋ ಅಥವಾ ಹಾಗೆಯೇ ಸುಮ್ಮನೆ ಬಿಡುತ್ತಿದ್ದೀರೋ ? Let me know. ಯಾರಾದರೂ ಕೂಡ ಇಂತಹ ಕೇಸುಗಳ ಮೇಲೆ ಕ್ರಮ ತೆಗೆದುಕೊಳ್ಳದೆ ಬಿಡುತ್ತಿರಲಿಲ್ಲ. ನಾನು ಒಂದು ಮಾತ್ರ ಸರ್ಕಾರದ ಪರವಾಗಿ ತಮಗೆಲ್ಲರಿಗೂ ಆಶ್ವಾಸನೆಯನ್ನು ಕೊಡುವುದಕ್ಕೆ ಬಯಸುತ್ತೇನೆ. ಅಧಿಕಾರಿಯಾಗಲಿ, ಅನಧಿಕಾರಿಯಾಗಲಿ, ಅಥವಾ ಯಾರೇ ಆಗಲಿ, ದೇಶಕ್ಕೆ ವಿರುದ್ಧವಾದಂತಹ ರೀತಿಯಲ್ಲಿ ವಿಧಿನಿಯಮಗಳಿಗೆ ವಿರೋಧವಾದ ರೀತಿಯಲ್ಲಿ ನಡೆದುಕೊಂಡು ಬಂದ ಪಕ್ಷದಲ್ಲಿ, ಮತ್ತು ಅದು ಸರ್ಕಾರದ ಕಣ್ಣಿಗೆ ಬಿದ್ದರೆ ಅಥವಾ ಗಮನಕ್ಕೆ ಬಂದರೆ ಖಂಡಿತವಾಗಿಯೂ ಅಂಥವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರದವರು ಹಿಂಜರಿಯುವುದಿಲ್ಲವೆಂದು ಹೇಳುತ್ತೇನೆ. ಅನೇಕ ಮಾನ್ಯ ಸದಸ್ಯರು ಈ ವಿಷಯದಲ್ಲಿ ಬಹಳ ಉಗ್ರವಾಗಿ ಟೀಕೆ ಮಾಡಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.—ನಾವು ಯಾವ ಆಫೀಸರ ಹೆಸರನ್ನೂ ಇಲ್ಲ ನಮೂದಿಸಿ ಪ್ರಸ್ತಾಪಮಾಡಿಲ್ಲ. ನಾವು 23—30 ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದ ವಿಚಾರದಲ್ಲಿ ಪ್ರಸ್ತಾಪ ಮಾಡಿದ್ದೇವೆಯೇ ಹೊರತು ಯಾರನ್ನೂ ವೈಯಕ್ತಿಕವಾಗಿ ಇಂಥವರು, ಇಂಥ ಜಾತಿಗೆ ಸೇರಿದವರು ಎಂದು ಅಪಾದನೆ ಮಾಡಿಲ್ಲ. ಯಾವ ಅಧಿಕಾರಿ, ಎಷ್ಟು ಹಣವನ್ನು ದುರುಪಯೋಗ ಮಾಡಿದ್ದಾನೆ ಎಂಬುದನ್ನು ಪೂರ್ತಿಯಾಗಿ ಹೇಳಿ. ನೀವು ಪೂರ್ತಿ ಡೀಟೈಲ್ಸ್ ಕೊಡುವುದಾದರೆ ನಾವು 8-00 ಗಂಟೆಯವರೆಗೂ ಅದನ್ನು ಕೇಳಲು ಕೂತುಕೊಳ್ಳುತ್ತೇವೆ. ಅವರೆಲ್ಲರ ಹೆಸರನ್ನು ಸಹ ಹೇಳಿ.

Sri D. DEVARAJ URS.—When the Leader of the Opposition is prepared to say that the suspensions made by the Government are not good or in the interest of justice and administration and characterise the Public Works Minister as a Suspension Minister, he has a right to reply. Why is he perturbed about it ?

ಶ್ರೀ ಎಚ್. ಡಿ. ದೇವೇಗೌಡ.—ಯಾವ್ಯಾವ ಅಧಿಕಾರಿ ಎಷ್ಟೆಷ್ಟು ದುಡ್ಡು ತಿಂದಿದ್ದಾನೆ ? ಅದನ್ನೆಲ್ಲವನ್ನೂ ಹೇಳಿ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಒಬ್ಬರು ಸದಸ್ಯರು ಹೇಳಿದಾಗ ಅದಕ್ಕೆ ಉತ್ತರ ಹೇಳಬೇಕೇ ವಿನಹ ಇಲ್ಲದಿದ್ದರೆ ಇದನ್ನು ಹೇಳಬೇಕಾಗಿರಲಿಲ್ಲ. ಒಟ್ಟಿನಲ್ಲಿ ಒಂದು ಆಶ್ವಾಸನೆಯನ್ನು ಕೊಡುತ್ತೇನೆ. ಅಧಿಕಾರಿ ಯಾವ ಮಟ್ಟದವರೇ ಆಗಲಿ, ಹಾದಿ ತಪ್ಪಿ ಹೋದಂತಹವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ, ಸತ್ಯ ಶಾಂತಿಯನ್ನು ಸ್ಥಾಪನೆ ಮಾಡುವುದಕ್ಕೆ ಮತ್ತು ದಕ್ಷ ಸರ್ಕಾರ ಸ್ಥಾಪನೆ ಮಾಡುವುದಕ್ಕೆ ಯಾವ ಮಟ್ಟಕ್ಕೆ ಬೇಕಾದರೂ ವಿಧಿನಿಯಮಗಳಿಗೆ ಅನುಸಾರವಾಗಿ ಸರ್ಕಾರ ಹೋಗುವುದು ಎಂಬುದನ್ನು ಮಾತ್ರ ತಮಗೆ ಇಲ್ಲಿ ಹೇಳುತ್ತಿದ್ದೇನೆ. ಆದ್ದರಿಂದ ಇದರ ಬಗ್ಗೆ ನಾವು ಹೆಚ್ಚು ವ್ಯಾಖ್ಯಾನ ಮಾಡಬೇಕಾದುದು ಅನಾವಶ್ಯಕ. ನಮ್ಮದೂ ನಿಮ್ಮದೂ ಗುರಿ ಒಂದೇ. ಆದ್ದರಿಂದ ಅವರ ಬಗ್ಗೆ ನ್ನೂ ಹೆಚ್ಚಿಗೆ ಪ್ರಸ್ತಾಪಮಾಡುವುದು ಅನಾವಶ್ಯಕವೆಂದು ನಾನು ತಿಳಿದುಕೊಂಡಿದ್ದೇನೆ.

5-00 P.M.

ಇನ್ನು ಪ್ರೊಮೋಷನ್ಸ್ ವಿಷಯವಾಗಿ ಮಾತನಾಡುವಾಗ ಮಾನ್ಯ ಮಿತ್ರರಾದ ಶ್ರೀ ದೇವೇಗೌಡರು ಚನ್ನಬಸಪ್ಪನವರು ಬಹಳ ಕಟುಕರು ಎಂದು ತಿಳಿದುಕೊಂಡಿದ್ದೆ ಏಕೋ ಸಪ್ಪೆ ಆಗಿದ್ದಾರೆಂದು ಹೇಳಿದರು. ಪ್ರೊಮೋಷನ್ಸ್ ವಿಷಯದಲ್ಲಿ ಏಕೆ ಒಂದು ಆರ್ಡರು ತೀರ್ಮಾನಕ್ಕೆ ಬಂದಿಲ್ಲವಲ್ಲಾ ಎಂದು ಹೇಳಿದರು. ಅಸಿಸ್ಟೆಂಟ್ ಇಂಜನಿಯರ್ ಹುದ್ದೆಯಿಂದ ಎಗ್ಸಿಕ್ಯುಟಿವ್ ಇಂಜಿನಿಯರ್ ಹುದ್ದೆಗೆ, ಎಗ್ಸಿಕ್ಯುಟಿವ್ ಇಂಜನಿಯರ್ ಹುದ್ದೆಯಿಂದ ಸೂಪರಿಂಟೆಂಡಿಂಗ್ ಇಂಜನಿಯರ್ ಹುದ್ದೆಗೆ

ಪ್ರೊಮೋಷನ್ಸ್ ಕೊಡುವ ಕಾಲದಲ್ಲಿ ಹತ್ತಾರು ವರ್ಷಗಳಿಂದ ಇರತಕ್ಕ ನಿರ್ದಿಷ್ಟವಾದ ನಿಯಮಗಳನ್ನು ಅನುಸರಿಸುವುದಕ್ಕೆ ಇವರಿಗೆ ಏಕೋ ಆಗಲಿಲ್ಲವೆಂದು ಹೇಳಿದರು. ಕಾರಣ, ಒಂದೊಂದು ಕಾಲದಲ್ಲಿ ಒಂದೊಂದು ಹುಕುಂ. ಈಗ ಇದರ ಬಗ್ಗೆ 3—4 ಹುಕುಂಗಳಿವೆ. ಯಾವ ಹುಕುಂ ಬಿಡುವುದು, ಯಾವ ಹುಕುಂ ಜಾರಿ ಮಾಡುವುದು. ಆದ್ದರಿಂದ ಅವನ್ನೆಲ್ಲಾ ಪರಿಶೀಲನೆಮಾಡಿ ಒಂದು ಅಖೈರು ತೀರ್ಮಾನಕ್ಕೆ ಬರಬೇಕಾಗಿದೆ.

Sri H. D. DEVE GOWDA.—Have you not passed orders and those could not be implemented due to pressure?

ಶ್ರೀ ಎಚ್. ಎಂ. ಚನ್ನಬಸಪ್ಪ.—ಪೊಲಿಟಿಕಲ್ ಪ್ರೆಷರ್ ನನ್ನ ಡಿಕ್ಷನರಿಯಲ್ಲಿ ನಡೆಯುವುದಿಲ್ಲ. ಪೊಲಿಟಿಕಲ್ ಪ್ರೆಷರ್ ನನ್ನಲ್ಲಿ ನಡೆಯುವುದಿಲ್ಲವೆಂಬುದು ನಿಮಗೂ ಗೊತ್ತಿದೆ. ಈಗ ಇದರ ಬಗ್ಗೆ ಮೂರು ನಾಲ್ಕು ಆರ್ಡರ್‌ಗಳಿವೆ. ಏನೇನು ಕಾರಣಗಳಿಂದ ಅವನ್ನು ಮಾಡಿದ್ದಾರೆ, ಅವು ಸರಿಯೋ ತಪ್ಪೋ ಎಂಬುದನ್ನೂ ಸಹ ನೋಡಬೇಕು. ಅದರ ಬಗ್ಗೆ ನಾನು ಒಂದು ನಿಯಮವನ್ನು ಕೊಟ್ಟಿದ್ದೇನೆ. ಅವನ್ನು ಯಾವ ಮಾರ್ಗದಲ್ಲಿ ನಡೆಸಬೇಕೆಂಬ ಬಗ್ಗೆ. ಸರ್ಕಾರದ ತೀರ್ಮಾನಗಳು ಕ್ಯಾಬಿನೆಟ್ ತೀರ್ಮಾನಗಳು ಆಗಿರುವುದರಿಂದ ನನ್ನ ಸಲಹೆ ಮೇಲೆ ಇನ್ನೂ ಉತ್ತಮ ಸಲಹೆ ಮಾಡತಕ್ಕ ಶಕ್ತಿ ನನ್ನ ಮಿತ್ರರಿಗೆ ಇದೆ. ಮಾನ್ಯ ಮುಖ್ಯಮಂತ್ರಿಗಳಿಗೂ ಇದೆ. ಕ್ಯಾಬಿನೆಟ್ಟಿಗೂ ಇದೆ. ಮಂತ್ರಿಮಂಡಲದಲ್ಲಿಯೇ ಇದರ ಬಗ್ಗೆ ಒಂದು ಅಖೈರು ತೀರ್ಮಾನ ಮಾಡತಕ್ಕದ್ದು ಯೋಗ್ಯ. ಈಗ ಇದರ ಬಗ್ಗೆ ನಾಲ್ಕೈದು ಹುಕುಂಗಳೂ ಇರುವುದರಿಂದ ಹಿಂದಿನ ಕ್ಯಾಬಿನೆಟ್ಟುಗಳ ತೀರ್ಮಾನವನ್ನು ರದ್ದು ಮಾಡುವಾಗ ಯಾವ ರೀತಿ ನಡೆಯಬೇಕೆಂಬುದಕ್ಕೆ ಕೆಲವಾರು ವಿಧಿನಿಯಮಗಳಿವೆ. ಅವನ್ನು ಬಿಟ್ಟು ಹುಕುಂ ಮಾಡುವುದಕ್ಕಾಗುವುದಿಲ್ಲ. ಅದಕ್ಕನುಗುಣವಾಗಿ ಈ ಪ್ರೊಮೋಷನ್ಸ್ ವಿಚಾರವಾಗಿ ನಿರ್ಧಾರ ಆಗಬೇಕಾಗಿದೆ. ತಕ್ಷಣದಲ್ಲಿ ಆಗಬೇಕಾದುದೂ ಇದೆ.

ಮತ್ತೆ ಅಡ್ಮಿನಿಸ್ಟ್ರೇಷನ್ ವಿಷಯದಲ್ಲಿ ಅನೇಕರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಕೆಲವರು ಡಿ–ಸೆಂಟ್ರಲೈಜೇಷನ್ ಆಗಬೇಕೆಂದು ಸಲಹೆ ಕೊಟ್ಟಿದ್ದಾರೆ. ಅದನ್ನು ನಾನು ಸಂತೋಷದಿಂದ ಒಪ್ಪಿಕೊಳ್ಳುತ್ತೇನೆ. ಅಧಿಕಾರ ಡಿ-ಸೆಂಟ್ರಲೈಜ್ ಆಗಬೇಕು. ಡಿ-ಸೆಂಟ್ರಲೈಜ್ ಆದಂದಿನಿಂದ ಅಧಿಕಾರ ಸರಿಯಾದ ರೀತಿಯಲ್ಲಿ ವಿನಿಯೋಗ ಆಗಬೇಕು. ಅದಕ್ಕೆ ತಕ್ಕ ವ್ಯವಸ್ಥೆ ಮಾಡಬೇಕಾಗಿದೆ. ಅದರ ಬಗ್ಗೆ ಯಾರ್ಯಾರು ಏನೇನು ಸಲಹೆಗಳನ್ನು ಕೊಟ್ಟಿದ್ದಾರೆಯೋ ಅವೆಲ್ಲವನ್ನೂ ವಿಶ್ವಾಸಪೂರ್ವಕವಾಗಿ ಸ್ವೀಕರಿಸಿ ಯಾವ ರೀತಿ ನಿಮ್ಮ ಸಲಹೆಗಳನ್ನು ಕಾರ್ಯಗತ ಮಾಡಬಹುದೆಂಬ ಬಗ್ಗೆ ಹೆಚ್ಚಿನ ಆಸಕ್ತಿಯಿಂದ ಉಪಯೋಗ ಮಾಡಿಕೊಳ್ಳುತ್ತೇನೆ,

ಮತ್ತೆ ಶರಾವತಿ ವಿಷಯವಾಗಿ ಅನೇಕ ಸದಸ್ಯರು ಬಹಳವಾಗಿ ಪ್ರಸ್ತಾಪಮಾಡಿದ್ದಾರೆ. ಅದರ ಬಗ್ಗೆ ಸದಸ್ಯರು ಸ್ವಲ್ಪ ಕರಾರುವಾಕ್ಕಾದ ವಿಷಯಗಳನ್ನು ತಿಳಿದುಕೊಳ್ಳಬೇಕು. ಅದು ನನಗೂ ಆಶೆ ಇದೆ. ನನ್ನ ಬಗ್ಗೆ ಉಗ್ರವಾದ ಟೀಕೆಗಳನ್ನು ಮಾಡಿದ್ದಾರೆ. ಇದರಲ್ಲಿ ಟೀಕೆ ಮಾಡುವಂಥಾದ್ದು ಅವರಿಗೆ ಸಿಗಬಹುದು. ಆದರೆ ನನ್ನ ಬಗ್ಗೆ ಟೀಕೆಗಳು ಬಂದರೂ ಅವನ್ನು ನಾನು ಅವಿಶ್ವಾಸವಾಗಿ ನೋಡುವವನಲ್ಲ. ಎಲ್ಲಿ ತಪ್ಪು ಇದೆಯೋ ಅದನ್ನು ನಾನು ಸರಿಪಡಿಸುವುದು ನನ್ನ ಕರ್ತವ್ಯ ಇದೆ. ನನಗೆ ಮಾನ್ಯ ಶ್ರೀಮಾನ್ ಕೃಷ್ಣನ್ ಅವರು ಮಾತನಾಡಿದಾಗ ಬಹಳ ಆಶ್ಚರ್ಯವಾಯಿತು. ನಾನು ಮೊದಲು ಆ ಕಡೆ ಇದ್ದವನೇ. 1960-61ನೇ ಇಸವಿಯಿಂದ ಶರಾವತಿ ವಿಷಯದ ಬಗ್ಗೆ ಮೂಲಭೂತವಾಗಿ ತಪ್ಪು ನಡೆವಳಿಕೆಗಳು ನಡೆಯುತ್ತಿವೆ ಅವನ್ನು ಸರಿಪಡಿಸಬೇಕೆಂದು ಹೇಳಿ ಮೊಟ್ಟಮೊದಲು ಅದರ ಬಗ್ಗೆ ವ್ಯಾಖ್ಯಾನ ಮಾಡುವುದಕ್ಕೆ ಹತ್ತಿದವನೇ ನಾನು. ಅವತ್ತಿನ ದಿವಸ ನನ್ನ ಅಭಿಪ್ರಾಯ ಏನಿತ್ತೋ ಈ ಘಳಿಗೆವರೆಗೆ ಅದರ ವಿಷಯದಲ್ಲಿ ಯಾವ ಬದಲಾವಣೆಯೂ ಇರುವುದಕ್ಕೆ ಕಾರಣ ಕಂಡುಬಂದಿಲ್ಲ. ಆ ಬಗ್ಗೆ ನಾನು ಸ್ಪಷ್ಟಪಡಿಸುತ್ತಿದ್ದೇನೆ. ನನ್ನ ಮೇಲೆ ಹಗಲು ರಾತ್ರಿ ಏನೇನೋ ಹೇಳಿದ್ದಾರೆ. ಇದು ಖಂಡಿತ ಹೊಸದಲ್ಲ. 1961–62ನೇ ಇಸವಿಯಲ್ಲಿ ಏನೋ ಹೊಸದಾಗಿ ಕಾಂಟ್ರಾಕ್ಟ್ ಕರೆದಂತಿದೆಯೆಂದು ಹೇಳಿದರು. ಎರಡನೆಯದು ಆರ್ಬಿಟ್ರೇಷನ್ ಕ್ಲಾಜು ಯಾವತ್ತಿದ್ದರೂ ಸರ್ಕಾರ ಜವಾಬ್ದಾರರು. ಒಂದೊಂದು ವಿಷಯವನ್ನೂ ತಾವು ತಿಳಿದುಕೊಳ್ಳಬೇಕು. ಶರಾವತಿ ಒಂದು ದೊಡ್ಡ ಯೋಜನೆ.

Sri H. D. DEVE GOWDA.—ಶರಾವತಿ ಬಗ್ಗೆ ನಾನು ಮಾತನಾಡಿಲ್ಲ. You have already said that a day or two will be allotted for the discussion of the factual report in this House in consultation with the Speaker. If that is so, there is no need to elaborate particularly on that point.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಇರಬಹುದು. ಆದರೂ ಕೆಲವು ವಿಷಯಗಳು ತಿಳಿದಿರಬೇಕು ಅದರ ಬಗ್ಗೆ ಅನೇಕ ಸ್ನೇಹಿತರು ಉಗ್ರವಾಗಿ ಟೀಕೆ ಮಾಡಿದ್ದಾರೆ. ಅಂತಹ ಉಗ್ರವಾದ ಟೀಕೆಗೂ ಉತ್ತರ ಕೊಡುವುದು ನನ್ನ ಕರ್ತವ್ಯವಾಗಿದೆ. ಶರಾವತಿ ಯೋಜನೆಯನ್ನು ಕಾರ್ಯಗತಮಾಡುವುದಕ್ಕೆ ಇಂತಹ ಒಂದು ಬೃಹತ್ ಯೋಜನೆಯಲ್ಲಿ ಕೆಲಸವನ್ನು ಪ್ರಾರಂಭಮಾಡುವುದಕ್ಕೆ ಹೈಡ್ರೊ ಎಲೆಕ್ಟ್ರಿಕ್ ಕನ್‌ಸ್ಟ್ರಕ್ಷನ್ ಪ್ರಾಜೆಕ್ಟ್ ಬೋರ್ಡಿಗೆ ಈ ಪ್ರಾಜೆಕ್ಟಿನ ಬಗ್ಗೆ ಉನ್ನತ ಅಧಿಕಾರವಿರುವ ಹಾಗೆ ಮಾಡಿ, ಅದಕ್ಕೆ ಎಲ್ಲಾ ಅಧಿಕಾರವನ್ನು ಕೊಟ್ಟಿತ್ತು. ಟೆಂಡರ್ ಕಾಲ್‌ಫಾರ್ ಮಾಡುವುದಕ್ಕೆ ಬದಲು ಎಸ್ಟಿಮೇಟ್ ಮಾಡುವುದು, ಎಸ್ಟಿಮೇಟ್‌ಗಳ ಬಗ್ಗೆ ಟೆಕ್ನಿಕಲ್ಲಾಗಿ ಸರಿಪಡಿಸುವುದು, ಟೆಂಡರ್ ಕಾಲ್‌ಫಾರ್ ಮಾಡುವುದು, ಹಣಕಾಸನ್ನು ಮಂಜೂರು ಮಾಡುವುದು, ಟೆಂಡರ್ ಅಂಗೀಕಾರ ಮಾಡತಕ್ಕದ್ದು ಇಷ್ಟು ಅಧಿಕಾರವಿತ್ತು. ಇದಕ್ಕೆ ಒಟ್ಟು 12 ಜನರಿದ್ದಂಥ ಒಂದು ಬೋರ್ಡ್. ಅದರಲ್ಲಿ 8 ಜನರು ಇಂಜನಿಯರ್ಸ್, ರಿಟೈರ್ಡ್ ಇಂಜನಿಯರ್ಸ್ ಒಬ್ಬಿಬ್ಬರು ಇರಬಹುದು. ಆಮೇಲೆ ಹಣಕಾಸಿನ ಸೆಕ್ರೆಟರಿಗಳು, ಪಿ. ಡಬ್ಲ್ಯು. ಡಿ. ಸೆಕ್ರೆಟರಿಗಳು ಮತ್ತು ಇತರರನ್ನು ಒಳಗೊಂಡಂತೆ 12 ಜನರಿದ್ದರು. ಅವರು ಯಾರ್‍ಯಾರು ಅನ್ನುವುದು ಈ ಪುಸ್ತಕದಲ್ಲಿದೆ. ಅವೆಲ್ಲವನ್ನೂ ಇಲ್ಲಿ ಹೇಳುವುದಕ್ಕಾಗುವುದಿಲ್ಲ. ಈ ಒಂದು ಬೋರ್ಡಿಗೆ ಎಲ್ಲಾ ವಿಧವಾದ ಅಧಿಕಾರವನ್ನು ವಹಿಸಿತ್ತು. ಇದರಲ್ಲಿ ಬಹಳ ತಾಂತ್ರಿಕವಾದ ವಿಷಯಗಳಿವೆ. ಹಣಕಾಸಿನ ವಿಷಯವೂ ಇದೆ. ಇದರ ಬಗ್ಗೆ ಕೋಟಿಗಟ್ಟಲೆ ಹಣವನ್ನು ವ್ಯಯಮಾಡಬೇಕಾಗಿದೆ. ಆದ್ದರಿಂದ ಯಾವ ವಿಷಯ ಇದರ ಬಗ್ಗೆ ಬಂದರೂ ಕೂಡ ಈ ಸಂಸ್ಥೆ ವ್ಯವಹಾರ ಮಾಡತಕ್ಕದ್ದು ಎಂದು ಅದಕ್ಕೇ ವ್ಯವಸ್ಥೆಮಾಡಿತ್ತು.

ಆ ಬೋರ್ಡಿನವರು ಯಾವುದು ಬೇಕು ಯಾವುದು ಬೇಡ ಎಂಬುದನ್ನೆಲ್ಲಾ ವಿಮರ್ಶೆಮಾಡಿ ಒಂದು ತೀರ್ಮಾನಕ್ಕೆ ಬರುತ್ತಾರೆ. ಹಾಗೆ ಅವರೇನು ಒಂದು ತೀರ್ಮಾನಕ್ಕೆ ಬರುತ್ತಾರೋ ಅದಕ್ಕನುಸಾರವಾಗಿ ಅವರು ಸರ್ಕಾರಕ್ಕೆ ಒಂದು ಶಿಫಾರಸ್ಸನ್ನು ಕಳುಹಿಸುತ್ತಾರೆ. ಅವರ ಶಿಫಾರಸ್ಸನ್ನು ಸಂಬಂಧಪಟ್ಟ ಮಂತ್ರಿಯವರು ಕ್ಯಾಬಿನೆಟ್ ಮುಂದಿಟ್ಟು ಅದಕ್ಕೆ ಒಂದು ತೀರ್ಮಾನ ತೆಗೆದುಕೊಳ್ಳುತ್ತಾರೆ. ಇದು ಒಂದು ಸಾಮಾನ್ಯವಾಗಿ ಆಗ ನಡೆದುಕೊಂಡು ಬಂದಿರುವಂಥ ಒಂದು ಪದ್ಧತಿ. ಅದಾದ ಬಳಿಕ ಅಲ್ಲಿ ನಡೆಯತಕ್ಕ ಕೆಲಸ ಕಾರ್ಯಗಳ ಬಗ್ಗೆ ಅವುಗಳನ್ನೇನು ಕಾಂಟ್ರಾಕ್ಟ್ ಕೊಡಬೇಕೇ ಅಥವಾ ಇಲಾಖೆಯವರೇ ನಡೆಸಬೇಕೇ ಅನ್ನುವ ವಿಷಯದಲ್ಲಿ ಕೂಡ ಚರ್ಚೆ ನಡೆದು ಯಾವುದು ಅಗತ್ಯ ಎಂದು ಆ ಸಭೆ ತೀರ್ಮಾನ ಮಾಡುತ್ತದೋ ಆ ತೀರ್ಮಾನದ ಪ್ರಕಾರ ಅವರು ಸರ್ಕಾರಕ್ಕೆ ಶಿಫಾರಸ್ ಮಾಡುತ್ತಾರೆ. ಅಂಥ ಶಿಫಾರಸ್‌ನ್ನು ಸರ್ಕಾರ ಒಪ್ಪಿಕೊಳ್ಳುತ್ತದೆ.

ಇನ್ನು ಟೆಂಡರನ್ನು ಕರೆಯತಕ್ಕ ವಿಚಾರದಲ್ಲಿ ಎರಡು ವಿಭಾಗಗಳಿವೆ—ಒಂದು ಎಲೆಕ್ಟ್ರಿಸಿಟಿಗೆ ಸಂಬಂಧಪಟ್ಟಿದ್ದು, ಇನ್ನೊಂದು ಸಿವಿಲ್ ವಿಭಾಗಕ್ಕೆ ಸಂಬಂಧಪಟ್ಟಿದು. ಈ ಒಂದೊಂದಕ್ಕೂ ಒಂದೊಂದು ಕಮಿಟಿಯಿದೆ. ಈ ಉಭಯ ಕಮಿಟಿಯವರೂ ಸೇರಿ ಚರ್ಚೆ ಮಾಡಿ ಯಾವ ಒಂದು ನಿರ್ಧಾರಕ್ಕೆ ಬರುತ್ತಾರೋ ಅದನ್ನು ಸರ್ಕಾರ ಒಪ್ಪಿಕೊಳ್ಳುವುದು ಆಗಿನ ಒಂದು ಪದ್ಧತಿ ಆಗಿತ್ತು. ಅದರ ಪ್ರಕಾರ ಕೆಲಸ ಕಾರ್ಯಗಳು ನಡೆಯುತ್ತಿದ್ದವು. ಅಲ್ಲಿ ನಡೆಯುತ್ತಿದ್ದ ಕೆಲಸ ಕಾರ್ಯಗಳು ಹೀಗೆ ನಡೆಯುತ್ತಿದೆ ಎಂದಾಗ ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು ಆ ಕೆಲಸಗಳ ಜವಾಬ್ದಾರಿಯನ್ನು ಯಾವ ಒಬ್ಬ ಸಚಿವರ ಮೇಲೂ ಹೇರುವುದಕ್ಕೆ ಸಾಧ್ಯವಿಲ್ಲ ಎಂಬುದನ್ನು.

ಇನ್ನು ಆರ್ಬಿಟ್ರೇಷನ್ ಕ್ಲಾಜಿನ ವಿಚಾರಕ್ಕೆ ಬಂದರೆ ಇದರ ಮೇಲೆ ಬಹಳ ವ್ಯಾಖ್ಯಾನಗಳು ನಡೆದಿವೆ. ಆದರೆ ಇದೇನೂ ಮೈಸೂರು ರಾಜ್ಯ ಒಂದಕ್ಕೇ ಸೀಮಿತವಾದುದೇನೂ ಅಲ್ಲ. ಮದ್ರಾಸ್ ಹೈದ್ರಾಬಾದ್ ಇತ್ಯಾದಿ ಕೇವಲ ಕೆಲವೊಂದು ರಾಜ್ಯಗಳಿಗೆ ಮಾತ್ರವೇ ಸೀಮಿತವಾದುವೇನು ಅಲ್ಲ. ಅಥವಾ ಇದು ಕೇವಲ ನಮ್ಮ ಇಂಡಿಯಾ ದೇಶ ಒಂದಕ್ಕೇ ಸೀಮಿತವಾದುದೇನೂ ಅಲ್ಲ. ಇದು ಎಲ್ಲೆಲ್ಲಿ ಭಾರಿ ಭಾರಿ ಪ್ರಮಾಣದ ಯೋಜನೆಗಳು ನಡೆಯುತ್ತಿರುತ್ತವೋ ಅಂಥ ಕಡೆಗಳಲ್ಲೆಲ್ಲಾ ಈ ಆರ್ಬಿಟ್ರೇಷನ್ ಕ್ಲಾಜ್ ಇದ್ದೇ ಇರುತ್ತದೆ. ಈ ವಿಚಾರದಲ್ಲಿ ಮಾನ್ಯ ಸದಸ್ಯರುಗಳು ಇಂಡಿಯಾ ಸರ್ಕಾರದವರ ಇಂಥದೇ ಕಾಂಟ್ರಾಕ್ಟ್‌ಗಳ ಅಗ್ರಿಮೆಂಟನ್ನು ನೋಡಿದರೆ ಅವರಿಗೆ ವೇದ್ಯವಾಗುತ್ತದೆ. ಆದರೆ ಇಂಥ ಆರ್ಬಿಟ್ರೇಷನ್ ಕ್ಲಾಜುಗಳನ್ನು ಕೇವಲ ಆರು ತಿಂಗಳಲ್ಲಿ ಅಥವಾ ಮೂರು ತಿಂಗಳಲ್ಲಿ ಮುಗಿಯತಕ್ಕ ಕಾಂಟ್ರಾಕ್ಟ್ ಕೆಲಸಗಳಿಗೆ ಅನ್ವಯಿಸುವುದಿಲ್ಲ. ಈ ಕ್ಲಾಜ್ ಏನಿದ್ದರೂ ಎಲ್ಲಿ ಕಾಮಗಾರಿಗಳು 4-5 ವರ್ಷಗಳಿಗೆ ಮೇಲ್ಪಟ್ಟು ಕೆಲಸ ನಡೆಯುತ್ತದೋ ಅಂಥ ಕಡೆಗಳಲ್ಲಿ ಸರ್ಕಾರಕ್ಕೂ ಮತ್ತು ಕಂಟ್ರಾಕ್ಟರಿಗೂ ಮಧ್ಯೆ ಆ ದೀರ್ಘಾವಧಿ ಕೆಲಸಗಳು ನಡೆಯತಕ್ಕ ಸಂದರ್ಭದಲ್ಲಿ ವಾದವಿವಾದಗಳು ಏಳುವುದು ಸ್ವಾಭಾವಿಕ, ಆದ್ದರಿಂದ ಅಂಥ ಕಡೆಗಳಲ್ಲಿ ಸಾಮಾನ್ಯ ಹೈಕೋರ್ಟಿನ ವ್ಯಾಪ್ತಿಯಲ್ಲಿ ಆ ವಿವಾದಗಳು ಮುಗಿಯುವುದಕ್ಕೆ ಹೆಚ್ಚಿನ ಕಾಲಾವಕಾಶವನ್ನು ತೆಗೆದುಕೊಳ್ಳುವುದರಿಂದಲೂ ಮತ್ತು ಹೆಚ್ಚು ಹಣವನ್ನು ಸ್ಟಾಂಪ್

ಡ್ಯೂಟಿ ಬಗ್ಗೆ ಕೊಡಬೇಕಾಗಿ ಬರುವುದರಿಂದಲೂ ಅಂಥ ಖರ್ಚು ವೆಚ್ಚಗಳನ್ನು ತಪ್ಪಿಸುವುದಕ್ಕೂ ಈ ಕ್ಲಾಜನ್ನು ಹಾಕತಕ್ಕದ್ದು ಒಂದು ರೂಢಿಯಲ್ಲದೆ. ಹಾಗೆ ಈ ಒಂದು ಕ್ಲಾಜ್ ನಿರ್ಮಾಣವಾಗಿದೆಯೇ ವಿನಾ ಚನ್ನಬಸಪ್ಪನವರಿಗೇನೂ ಇದು ಸ್ಪೆಷಲ್ಲಾಗಿ ಆಕಾಶದಿಂದ ಇಳಿಯಲಿಲ್ಲ, ಆದ್ದರಿಂದ ಇದೇನೂ ಚನ್ನಬಸಪ್ಪನವರ ನಿರ್ಮಾಣವೂ ಅಲ್ಲ ಮತ್ತು ಇದು ಕೇವಲ ಮೈಸೂರಿಗೇ ಸೀಮಿತವಾದದ್ದೂ ಅಲ್ಲ.

ಆದರೆ ಇದೇ ವಿಚಾರದಲ್ಲಿ ಮೊದಲು ಶ್ರೀ ನಿಜಲಿಂಗಪ್ಪನವರೂ ಏನು ಹೇಳಿದ್ದಾರೆ? ಈ ಆರ್ಬಿಟ್ರೇಷನ್ ಕ್ಲಾಜನ್ನು ಚನ್ನಬಸಪ್ಪನವರು ಯಾವ ಒಂದು ದುರುದ್ದೇಶದಿಂದಲೂ ಹಾಕಿದ್ದಲ್ಲ. ಎಲ್ಲೆಲ್ಲಿ ದೊಡ್ಡ ದೊಡ್ಡ ಕಂಟ್ರಾಕ್ಟ್‌ಗಳು ನಡೆಯುತ್ತಿವೆಯೋ ಅಲ್ಲೆಲ್ಲಾ ಈ ಕ್ಲಾಜಿರುತ್ತದೆ. ಇದು ಇಂಟರ್‌ನ್ಯಾಷನಲ್ ಕಾಂಟ್ರಾಕ್ಟ್ ಕ್ಲಾಜ್ ಇದು ಇರಬೇಕು ಎಂಬುದಾಗಿ ಹೇಳಿದ್ದಾರೆ. ಅನಂತರ ಅದೇ ಶ್ರೀಮಾನ್ ನಿಜಲಿಂಗಪ್ಪನವರು 1962ರಲ್ಲಿ ಮುಖ್ಯ ಮಂತ್ರಿಗಳಾಗಿದ್ದಾಗ ಮತ್ತೊಂದಾವರ್ತಿ ಏನು ಹೇಳಿದ್ದಾರೆಂದರೆ :

"Categorical replies cannot be given. It depends upon the nature of work undertaken. In exceptional cases it has to go to arbitration. It is so not only in Mysore Government but in many other Governments. Possibly my friend is not aware. This is not new."

ನಾನು ಈಗ ಈ ವಿಚಾರಗಳನ್ನೆಲ್ಲಾ ಏತಕ್ಕಾಗಿ ಹೇಳುತ್ತಿದ್ದೇನೆಂದರೆ ನನ್ನ ಕೆಲವು ಮಾನ್ಯ ಮಿತ್ರರು ಇದನ್ನು ಚನ್ನಬಸಪ್ಪನವರೇ ನೇರವಾಗಿ ಕೈಲಾಸದಿಂದ ಇಳಿಸಿಕೊಂಡು ಬಂದರೋ ಏನೋ ಎನ್ನುವಂತೆ ಮಾತನಾಡಿದ್ದಾರೆ. ಹಾಗೆ ಹೇಳುವುದು ಸರಿಯಲ್ಲ ಎಂಬುದನ್ನು ತೋರಿಸಲು ಈ ವಿಷಯಗಳನ್ನೆಲ್ಲಾ ನಾನು ಹೇಳಬೇಕಾಯಿತು. ಮೊದಲು ಶ್ರೀ ನಿಜಲಿಂಗಪ್ಪನವರು ಈ ಆರ್ಬಿಟ್ರೇಷನ್ ಕ್ಲಾಜ್ ಸರಿಯಾಗಿದೆ ಎಂದು ಹೇಳಿದ್ದವರು ಅವರೇ ಮತ್ತೆ ತಿರುಗಾ ಮುರುಗಾ ಆಗಿದ್ದಾರೆ. ಚನ್ನಬಸಪ್ಪನವರೇ ಇಂಥ ಒಬ್ಬ ದೊಡ್ಡ ಕಾಂಟ್ರಾಕ್ಟರನ್ನೂ ತಂದು ಬಿಟ್ಟರು ಎಂಬುದಾಗಿ ಭಾವನೆ ಇದೆ. ಶ್ರೀ ನಿಜಲಿಂಗಪ್ಪನವರು 1962 ನೇ ಸೆಪ್ಟೆಂಬರ್ 27ನೇ ತಾರೀಖಿನಲ್ಲಿ ಹೀಗೆ ಹೇಳಿದ್ದಾರೆ :—

"We want to finish the Project as early as possible. It is because of this necessity to finish the project as early as possible we have decided to see that instead of having the old method of contract, the Government thought it fit to bring more powerful contractors, richer contractors who had more resources than we have and we have given them contract."

ಇದನ್ನೆಲ್ಲಾ ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ಮೊದಲು ಶ್ರೀ ನಿಜಲಿಂಗಪ್ಪನವರು ತಮ್ಮ ಬಾಯಿನಲ್ಲಿ ಏನೊಂದು ಮಾತನ್ನು ಹೇಳಿದ್ದರೋ ಅದೇ ಬಾಯಿನಲ್ಲಿ ಅದಕ್ಕೆ ತದ್ವಿರುದ್ಧವಾದ ಮಾತನ್ನು ಹೇಳಿದ್ದಾರೆ. ಹಾಗೇಕೆ ಅವರು ಹೇಳಿದರು ? 1962ರಲ್ಲಿ ಇನ್ನೂ ಆಗತಾನೆ ಶ್ರೀ ನಿಜಲಿಂಗಪ್ಪನವರು ಹೊಸದಾಗಿ ಮುಖ್ಯ ಮಂತ್ರಿಗಳಾಗಿದ್ದರು. ಆ ಬಗ್ಗೆ ಚನ್ನಬಸಪ್ಪ ಈ ಶರಾವತಿ ಕರ್ಮಕಾಂಡವನ್ನು ಇನ್ನೂ ಹೊರಗೆಡವಿರಲಿಲ್ಲ. ಆಗ ಅವರು ಈ ಚನ್ನಬಸಪ್ಪನನ್ನು ಹಿಡಿದು ಹೇಗಾದರೂ ಮಾಡಿ ನನ್ನ ಹಿಂದೆ ಮುಂದೆ ಸ್ವಲ್ಪ ಎಕ್ಸರ್‌ಸೈಜ್ ಮಾಡಿಸೋಣ ಎಂದು ಅವರ ಭಾವನೆಯಿತ್ತು. ಆದರೆ ಚನ್ನಬಸಪ್ಪ ಅಂಥ ಕೆಲಸ ಮಾಡುವುದಕ್ಕೆ ಎಂದೂ ಒಪ್ಪತಕ್ಕವನಲ್ಲ, ಅವನಿಂದ ಸಾಧ್ಯವೂ ಇಲ್ಲ. ಆದುದರಿಂದ ಈ ಕಂಟ್ರಾಕ್ಟರುಗಳ ವಿಷಯದಲ್ಲಿ ಮತ್ತು ಆರ್ಬಿಟ್ರೇಷನ್ ವಿಷಯದಲ್ಲಿ ಇವನ್ನು ಆ ಚನ್ನಬಸಪ್ಪನೇ ಎಲ್ಲಿಂದಲೋ ಹಿಡಿದು ತಂದಿದ್ದಾನೆ ಎಂಬ ಭಾವನೆಗಳು ತಮ್ಮಲ್ಲಿ ಯಾರ ಮನಸ್ಸಿನಲ್ಲಾದರೂ ಇದ್ದರೆ ಅದನ್ನು ದಯವಿಟ್ಟು ತಾವುಗಳೆಲ್ಲರೂ ಇಂದೇ ಕಿತ್ತೊಗೆಯಿರಿ.

ಇನ್ನು ಆ ಶರಾವತಿ ವ್ಯಾಲಿಯ ಅನೇಕ ವಿಷಯಗಳನ್ನು ನಾನು ಅನೇಕಾವರ್ತಿ, ಅನೇಕ ವೇದಿಕೆಗಳ ಮೇಲೆ ಪ್ರತಿಪಾದನೆ ಮಾಡಿದ್ದೇನೆ. ಆಗ ನಾನೇನು ಪ್ರತಿಪಾದನೆ ಮಾಡುತ್ತಿದ್ದೆ ಆ ಸಂದರ್ಭದಲ್ಲಿ ಶ್ರೀ ಎಂ. ಎಸ್. ಕೃಷ್ಣನ್‌ರವರು ನನ್ನಿಂದಲೇ ಅನೇಕ ವಿಷಯಗಳನ್ನು ಗ್ರಹಿಸಿದ್ದಾರೆ. ಆದರೆ ಈ ದಿವಸ ಅವರೇನು ಸಭೆಯಲ್ಲಿ ಹೇಳಿದ್ದಾರೆ ಅವುಗಳಿಗೆ ಯಾವ ಆಧಾರವೂ ಇಲ್ಲ.

(ಶ್ರೀ ಹೆಚ್. ಎಂ. ಚನ್ನಬಸಪ್ಪ)

ಅವರೇ ಆರ್ಬಿಟ್ರೇಷನ್ ತಂದರು, ಇದು ಮಾಡಿದರು, ಅದು ಮಾಡಿದರು ಎಂದು ಹೇಳಿದ್ದಾರೆ. ಹಿಂದೆ 5 ವರ್ಷ ನಾನು ಅಸೆಂಬ್ಲಿಯಲ್ಲಿರಲಿಲ್ಲ, ಕಾರಣ ಶ್ರೀ ನಿಜಲಿಂಗಪ್ಪನವರ ಔದಾರ್ಯ. ಚನ್ನಬಸಪ್ಪ ಎಂಬ ಭೂತ ಬಂದರೆ ಕಷ್ಟ, ಅದನ್ನು ತೆಗೆದುಬಿಡೋಣ ಅಂದರು. ಅದೊಂದು ಕಥೆ. ಇಲ್ಲಿ ಅಪ್ರಕೃತ ಅದು. ಅದನ್ನೆಲ್ಲಾ ನೋಡಿದ ಮೇಲೆ ಆಗಿನ ಮುಖ್ಯಮಂತ್ರಿ, ಅದರ ಹಿಂದಿನ ಮುಖ್ಯಮಂತ್ರಿಗಳು ಒಂದು ವಿಧವಾಗಿ ಹೇಳುವುದಕ್ಕೆ ಷುರು ಮಾಡಿದರು, ಆರ್ಬಿಟ್ರೇಷನ್ ಕ್ಲಾಜನ್ನು ತಂದವರು ಅವರೇ ಎಂದು ಹೇಳುವುದಕ್ಕೆ ಪ್ರಾರಂಭಿಸಿದರು. ಆಗ 5 ಛಾರ್ಜ್‌ಸ್ ಫ್ರೇಂ ಮಾಡಿ ಸರಕಾರದ ಮುಂದಿಟ್ಟೆ. ಆಗ ಶ್ರೀ ಅಮ್ಸರ್ಗಂರವರು ಕುಳಿತಿರುವ ಕಡೆ ನಾನು ಕುಳಿತ್ತಿದ್ದೆ. ಅದರಲ್ಲಿ ಮೊದಲನೆಯ ಛಾರ್ಜ್ ಈರೀತಿಯಿದೆ; ಆಗ ನಾನು ಹೇಳಿದ್ದು,

I hereby frame the following specific charges :—

"(1) This Government is guilty of not appointing a Judicial Commission to go into the alleged misdeeds, if any, of the previous Minister for Public Works, that is, myself, H. M. Channabasappa, in regard to Sharavathy Project, as alleged on the floor of this House.

(2) This Government is guilty of not directing Messrs. Tarapore and Company to carry out the work under Clauses 27 and 28 of the Contract Agreement, rates being fixed by the Chief Engineer and according to the provisions of the agreement in case of disagreement.

(3) This Government is guilty of obtaining a conditional letter of consent from Messrs. Tarapore Co. in gross violation of the terms of the contract agreement and proceeded to call for tenders for rockfill work, being fully aware of the facts that the letter of consent was not absolute but conditional and being fully aware that calling for tenders winking at these conditions would involve legal and financial implications and claims and give a handle to claim a compensation of Rs. 42 lakhs ; and being fully aware that they would be charges of this guilt.

(4) This Government is guilty of adopting spurious procedures in considering these seven tenders for rockfill work in gross violation of all rules of procedures and standards prescribed under the rules, some of which are : that while the 7 tenders were still with Government pending decision, directing the Chief Engineer to send up proposals of distribution among three favourite contractors...

(5) This Government is guilty of avoiding the Hydro-electric Construction Project Board by a sudden postponement of the meeting of the Board summoned for the purpose of consideration of the tenders with an ulterior motive of taking fanciful decisions behind its back and to confer financial benefits to pet contractors. They were fully aware of the functions of the Board. They were aware that the comparative statement of tenders were with them on 12th May 1962 and that the HECP

Board was to meet on 19th May 1962, *i.e.*, six days later, and had to discuss and decide the matter. Suddenly they postponed the meeting. For what purpose ? These people are guilty of that charge with a view to avoid the HECP Board and make their own agents.

Therefore, I charge this Government with five serious charges.'' The first charge is if you feel I am guilty of anything in the Sharavathi Project you should have immediately appointed the Commission of Enquiry and the charge I made against the Government was that you are not able to do it because you have no case. That is one of the aspects. If a Judicial Commission is appointed so many other things might crop up because there are so many loopholes Therefore I submit to this House that having kept quiet at a time when an offer was made that a Commission should be appointed to go into the guilt committed by Mr. Channabasappa you have not done it when you were in power. Now you think that people will belive you if you come forward with a theory that Mr. Channabasappa has started all this. No, it is not going to happen.

SRI M. S. KRISHNAN.—Don't you think that you are now on a more firm ground to conduct the same judicial enquiry and get yourselves absolved of those charges ?

SRI H. M. CHANNABASAPPA.—That is a separate matter altogether. I have absolutely no quarrel with hon. Member Sri Krishnan because both of us worked together. I have respect for your intentions as also to that of my hon. friend Sri Deve Gowda. I will quote him also when occasion comes. He is with me and I know his heart is with me. None of you know it

SRI M. S. KRISHNAN.—Might be that he might join you tomorrow.

SRI H. M. CHANNABASAPPA.—That is quite possible. That is not a thing which I rule out ನನ್ನ ಮೇಲೆ ದೊಡ್ಡ ಅಪಾದನೆ ಇದೆ, ಚನ್ನಬಸಪ್ಪನವರು ಹೀಗೆ ಮಾಡಿದರು, ಹಾಗೆ ಮಾಡಿದರು ಎಂದು ಹೇಳುವುದಕ್ಕೆ ಬದಲಾಗಿ ಏನು ತಪ್ಪು ಮಾಡಿದ್ದಾರೆಂಬುದನ್ನು ತಿಳಿಸಬಹುದು, ಇದಕ್ಕೆ ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡಿ ಎಂದು ನಾನು ಮೊದಲೇ ಹೇಳಿದೆ. ಜೊತೆಗೆ ಹಿಂದೆ ಈ ವಿಷಯದಲ್ಲಿ ಚರ್ಚೆಯಾಗಿದೆ. ನಾನು ಐದಾರು ಛಾರ್ಜುಗಳನ್ನು ಕೂಡ ಸಭೆ ಮುಂದೆ ಮಂಡಿಸಿದೆ. ಹಿಂದೆ ಅದನ್ನು ಮಂಡಿಸಿದಾಗ ಈಗಿರುವ ಕೆಲವು ಮಾನ್ಯ ಸದಸ್ಯರು ಆಗಲೂ ಈ ಸಭೆಯಲ್ಲಿದ್ದರು. ಸುಮ್ಮನೆ ಚನ್ನಬಸಪ್ಪನವರಿಂದ ಹೀಗಾಯಿತು ಎಂದು ಕಥೆ ಕಟ್ಟುವುದಕ್ಕೆ ಬದಲಾಗಿ ಹಿಂದೆ ನಾನು ಹೇಳಿದಾಗ ವಿಚಾರಣೆ ಮಾಡಬಹುದಾಗಿತ್ತು. ಶ್ರೀ ಕೋಣಂದೂರು ಲಿಂಗಪ್ಪನವರಿಗೆ ಉತ್ಸಾಹವಿದೆ, ನಾನು ವಿಷಯ ತಿಳಿಸುತ್ತಿದ್ದೇನೆ. ಇದರ ಮೇಲೆ ಯಾವ ಅಭಿಪ್ರಾಯಕ್ಕೆ ಬೇಕಾದರೂ ಬರಬಹುದು.

I want to tell this House that until the rules are changed, the rule of the country is that all works must be given by tenders. That is the rule of the country. The rule says, if I may quote it—Rule 167 of the P.W.D. Code :

> "All works shall be given out by tenders except those which are less than Rs. 10,000."

Until this rule is changed, this rule is 'vedavakya'.

5-30 P.M.

Sri H. D. DEVE GOWDA.—When was that rule framed ?

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಈ ರೂಲ್ ಇರುವವರೆಗೆ ನಾನೂ ರೆಸ್ಪೆಕ್ಟ್ ಮಾಡಬೇಕು, ನೀವೂ ರೆಸ್ಪೆಕ್ಟ್ ಮಾಡಬೇಕು. Granting it was done 50 years ago, so long as the rule is in force, you and I are bound by it, and if I go against it you will be the first man to oppose and say that I am going against it. ಆದುದರಿಂದ ಈ ರೂಲ್ ಇರುವವರೆಗೆ ಅಧಿಕಾರಿಗಳು ಈ ಕೋಡನ್ನು ಅನುಸರಿಸಿ ಕೆಲಸ ಮಾಡಬೇಕು. ನಿಯಮಗಳನ್ನು ಮೀರಿ ನಡೆದರೆ ಹದ್ದುಮೀರಿ ಮಾಡಿದಂತಾಗುತ್ತದೆ. ಎಕ್ಸೆಪ್ಷನ್ ಮಾಡ ಬಹುದು. ಯಾವುದಾದರೂ ಒಂದು ಮಹತ್‌ಕಾರ್ಯವನ್ನು ಡಿಪಾರ್ಟ್‌ಮೆಂಟಿನವರು ಮಾಡ ಬಹುದು ಎಂದರೆ ಸರಕಾರ ಹುಕುಂ ಮಾಡಬೇಕು. ಇಂತಹ ಕಾರ್ಯಕ್ಕೋಸ್ಕರ ಇದ್ದ ನಿಯಮ ವನ್ನು ಒತ್ತೊಟ್ಟಿಗೆ ಇಟ್ಟು ನಾವು ಅದನ್ನು ಮಾಡಬೇಕು. ಆದುದರಿಂದ ಗ್ಲೋಬಲ್ ಟೆಂಡರ್ ಕರೆದು ಕಾಂಟ್ರಾಕ್ಟ್ ಫಿಕ್ಸ್ ಮಾಡತಕ್ಕದ್ದು ವಿಧಿನಿಯಮಗಳಿಗೆ ಅನುಗುಣವಾಗಿ ನಡಿದಿದೆಯೇ, ವಿಧಿನಿಯಮಗಳಿಗೆ ವಿರುದ್ಧವಾಗಿ ನಡೆದಿಲ್ಲವೇ ಎಂದು ಇವರು ತಿಳಿಯಬೇಕು. ಹಾಗೆ ಮಾಡದಿದ್ದರೆ ಅದು ತಪ್ಪು. ನಿಜಲಿಂಗಪ್ಪನವರು ಹೇಳಿರುವುದು ಸರಿ. ಹೆಚ್.ಇ.ಸಿ.ಪಿ. ಬೋರ್ಡಿನವರು ಈ ವಿಷಯ ಚರ್ಚೆ ಮಾಡಿ ಏನು ಕಾರಣ ಕೊಟ್ಟರು ಎನ್ನುವುದು ಸ್ಟೇಟ್‌ಮೆಂಟ್ ಇನಿದೆ ಇದರಲ್ಲಿ ಎಲ್ಲಾ ವಿವರಗಳು ಇದೆ. ಆದುದರಿಂದ ಹೆಚ್ಚಿನ ಕಾಲ ತೆಗೆದುಕೊಳ್ಳಬೇಕಾದುದು ಅನಗತ್ಯ. ಮತ್ತೆ ನಾನು ಒಂದು ಮಾತು ಹೇಳತಕ್ಕದ್ದು 1964 67ನೇ ಇಸವಿಯಲ್ಲಿ ಮಾನ್ಯ ಸಭೆಯ ಮುಂದೆ ಹೇಳಿದ್ದೆ. ಚನ್ನಬಸಪ್ಪನವರು ಏನಾದರೂ ಹೆಚ್ಚು ಕಡಿಮೆ ಮಾಡಿದ್ದರೆ ದುರ್ಬೀನು ಹಾಕಿ ನೋಡಿ ಎಂದು ಹೇಳಿದ್ದಕ್ಕೆ ಎಲ್ಲಿಯಾದರೂ ಯತ್‌ಕಿಂಚಿತ್ ಲೋಪದೋಷ ಇದೆ ಎಂದರೆ ಅವರ ಮೇಲೆ ಚಾರ್ಜ್ ಮಾಡಿ ಎಂದು ಹೇಳಿದ್ದಕ್ಕೆ ಅದಕ್ಕೆ ಉತ್ತರವನ್ನು ಕೊಡದೆ ಈಗ ಮೇಲಿಂದ ಮೇಲಕ್ಕೆ ಚನ್ನಬಸಪ್ಪನವರು ಆರ್ಬಿಟ್ರೇಷನ್ ಮಾಡಿದವರು ಎಂದು ಮುಂತಾಗಿ ಹೇಳುತ್ತಿದ್ದೀರಿ. ನಿಮ್ಮ ಮಾತನ್ನು ಯಾರು ನಂಬುತ್ತಾರೆ ಎಂದು ಕೇಳುತ್ತೇನೆ. What did you do then ? Why did you not do it ? You were afraid of doing it. ಈಗ ನೀವು ಯಾಕೆ ಮಾಡು ವುದಿಲ್ಲ ಎಂದು ಕೇಳಿದ್ದಕ್ಕೆ ಮುಖ್ಯ ಮಂತ್ರಿಗಳು ಅದನ್ನು ಹೇಳಿ ವಿಷದೀಕರಿಸುತ್ತಾರೆ. "at appropriate time appropriate action will be taken" in order to establish the truth in this country ಎಂದು ಹೇಳಿದ್ದಾರೆ. 1963ನೇ ಇಸವಿಯಲ್ಲಿ ಶರಾವತಿ ಪ್ರಕರಣ ದಲ್ಲಿ ನಮ್ಮ ಮುಖ್ಯ ಮಂತ್ರಿಗಳಾದ ನಿಜಲಿಂಗಪ್ಪನವರು ಹೇಳಿದರು ಶರಾವತಿಯೊಳಗೆ ಕೋಟ್ಯಾನು ಕೋಟಿ ರೂಪಾಯಿ ಹೋಗಿಬಿಟ್ಟಿದೆ ಎಂದು ಹೇಳುತ್ತಾರೆ, ಅಲ್ಲಿ ಬಹಳ ಹಣ ದುರುಪಯೋಗ ಮಾಡಿ ದ್ದಾರೆ. ಅಲ್ಲಿ ಆಗಿರತಕ್ಕ ಹಣದ ದುರುಪಯೋಗ ಲೆಕ್ಕ ಹಾಕಿದರೆ ಅದು 40 ಲಕ್ಷ ರೂಪಾಯಿ ಇದ್ದದ್ದು ಈಗ ಪ್ರಾಯಶಃ 5 ಲಕ್ಷ ರೂಪಾಯಿ ಆಗಿದೆ ಎಂದು ಇಟ್ಟುಕೊಳ್ಳಬಹುದು ಎಂದು ಮುಖ್ಯ ಮಂತ್ರಿಗಳಾದ ನಿಜಲಿಂಗಪ್ಪನವರು ಈ ರೀತಿ ಮಾನ್ಯ ಸಭೆಯಲ್ಲಿ ಹೇಳಿದ್ದಾರೆ. 50 ಲಕ್ಷ ರೂಪಾಯಿಗಳು ಅವರಮಟ್ಟಿಗೆ ಹೇಳುವುದಾದರೆ 5 ರೂಪಾಯಿ ಇರಬಹುದು. ಈ ದೇಶದ ಹಣ 50 ಲಕ್ಷ ರೂಪಾಯಿಗಳು ಹೋದದ್ದು ಹೇಗೆ ? "Chief Minister says 'No' to Sharavati probe". Chief Minister Sri Nijalingappa on Wednesday rejected the demand by the Legislative Assembly for a judicial enquiry into the Rs. 120 crore Sharavati Hydel Project.

And the next day, he says in the same Assembly 'No' for a Sharavati probe initiated by the Leader of the Opposition or members of the Opposition.

I am putting it to you friends, now you can judge with this background what exactly is the story of the 'Karmakanda' of Sharavati Project.

ಶ್ರೀ ಕೋಣಂದೂರು ಲಿಂಗಪ್ಪ.—ಅರಳು ಮರಳು ಇರಬಹುದು.

Sri H. M. CHANNABASAPPA.—But, I would not like to one with you in that, because at that time he was in full vigour.

ಶ್ರೀ ಎಂ. ಎಸ್. ಕೃಷ್ಣನ್.—ಚಕ್ರಬಿಂಬನ ಕೋಟೆ ತರಹ ಆಯಿತು.

ಶ್ರೀ ಡಿ. ದೇವರಾಜ ಅರಸ್.—ಅಭಿಮನ್ಯು ಹಾಗೆ ಹೋಗಿಬಿಟ್ಟಿದ್ದಾರೆ.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ವೀರೇಂದ್ರಪಾಟೀಲರು ಒಡೆದು ಹೋಗಿರತಕ್ಕದ್ದು ನನ್ನ ಗಮನಕ್ಕೆ ಬಂದಿಲ್ಲ ಎಂದು ಹೇಳಿದ್ದಾರೆ. ಅದರ ಬಗ್ಗೆ ಆಗಲೇ ನಾನು ನೋಟ್ ಕೊಟ್ಟಿದ್ದೇನೆ. 12ರ ಮಾರ್ಚ್ 1968ರಲ್ಲಿ ಈ ವಿಷಯ ಅವರಿಗೆ ಗೊತ್ತಾಯಿತು ಎಂದು ಆಯಿತು. ಕೆಲವು ದಿವಸದ ಹಿಂದೆ ವಾಟರ್ ಪ್ರೆಜರ್ ಜಾಸ್ತಿಯಾಗಿ ಎಲ್ಲೆಲ್ಲಿ ಪವರ್ ಚಾನಲ್ ಬ್ರೀಚ್ ಆಯಿತು ಎಂದು ಅವರಿಗೆ ಗೊತ್ತಿದೆ.

ಶ್ರೀ ಎಚ್. ಡಿ. ದೇವೇಗೌಡ.—1968ನೇ ಇಸವಿಯಲ್ಲಿ ಈ ಶರಾವತಿ ಪ್ರಕರಣ ಬೆಳಕಿಗೆ ಬಂತು ಎಂದು ಹೇಳಿದಿರಿ. ಅದಕ್ಕೂ ನಿಮ್ಮ ಹೇಳಿಕೆಗೂ ತದ್‌ವಿರುದ್ಧ ಆಗುವುದಿಲ್ಲವೇ ಎಂದು ಹೇಳುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅವರು ಕೇಳಿರಬಹುದು. But I will never change my word.

Sri D. DEVARAJ URS.—The hon. Member is fighting a very bad case.

Sri H. D. DEVE GOWDA.—I know that.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ನಾನು ಹೇಳತಕ್ಕಂಥಾ ಟನಲ್ ಯಾವುದು ಎಂದರೆ ವಡೆಯನಬೈಲ್ ಟನಲ್ ನಂಬರ್ 1. ಅದರ ವಿಷಯವನ್ನು ಪ್ರಸ್ತಾಪ ಮಾಡಿದ್ದಾಗ ಹೇಳಿದೆ. ಇದು ಪವರ್ ಚಾನಲ್. ಈ ಪವರ್ ಚಾನಲ್ ಒಡೆದು ಹೋಗಿದ್ದುದು ತಮಗೂ ಗೊತ್ತಿತ್ತು. ಶ್ರೀ ನಿಜಲಿಂಗಪ್ಪನವರು ಹೇಳಿರುವುದನ್ನು ಹೇಳುತ್ತೇನೆ. ಶ್ರೀಮಾನ್ ಶಿವಪ್ಪನವರು ಪವರ್ ಚಾನಲ್ ಒಡೆದು ಹೋಗಿದೆ ಎಂದು ಹೇಳಿದಾಗ ಅದು ಒಡೆದು ಹೋಗಿಲ್ಲ, ಸೀಳಿ ಹೋಗಿದೆ ಎಂದು ಹೇಳಿದರು. ಆದುದರಿಂದ ನಾನು ಅರಿಕೆ ಮಾಡತಕ್ಕದ್ದು, ಸ್ನೇಹಿತರೇ, ಈ ವಿಷಯ ಬಹಳ ಗಹನವಾದದು. ಯಾರದೇ ತಪ್ಪು ಇರಲಿ ಒಟ್ಟಿನಲ್ಲಿ ಕ್ರಮವರಿತು ಕೆಲಸ ನಡೆದಿಲ್ಲ. ಕಂಟ್ರಾಕ್ಟರುಗಳನ್ನು ವಜಾ ಮಾಡಿಬಿಡಿ ಎಂದು ನಿನ್ನೆ ಹೇಳಿದರು. ಒಪ್ಪಿಕೊಳ್ಳೋಣ. ಒಂದು ವೇಳೆ ಕಂಟ್ರಾಕ್ಟರುಗಳನ್ನು ವಜಾ ಮಾಡಿ ಬೇರೆ ವಿಧದಲ್ಲಿ ಮಾಡತಕ್ಕದು, ಅದರಿಂದ ದೇಶಕ್ಕೆ ಒಳ್ಳೆಯದಾಗುವುದಿದ್ದರೆ ನನ್ನ ಅಡ್ಡಿ ಇಲ್ಲ. ಆದರೆ ಸಾಧಕಬಾಧಕಗಳನ್ನು ವಿಚಾರ ಮಾಡಬೇಕಾಗಿದೆ. ಕೋಟ್ಯಾನು ಕೋಟಿ ರೂಪಾಯಿಗಳ ಕೆಲಸ ಮಾಡತಕ್ಕ ಕೆರೆಗಳ ಮತ್ತು ವಿದ್ಯುತ್ ಯೋಜನೆಗಳನ್ನು ನಡೆಸುತ್ತಿದ್ದೇವೆ. ಪ್ರಪಂಚದಲ್ಲಿ ಪ್ರಜಾಪ್ರಭುತ್ವ ಇರತಕ್ಕಂಥಾ ಎಲ್ಲಾ ದೇಶಗಳಲ್ಲೂ ಕೂಡ ಕಂಟ್ರಾಕ್ಟರುಗಳನ್ನು ವಜಾಮಾಡಿಬಿಟ್ಟು ಬರೀ ಡಿಪಾರ್ಟ್‌ಮೆಂಟಿನವರೇ ಮಾಡುತ್ತಾ ಇರುವುದು ನನ್ನ ಗಮನಕ್ಕೆ ಬಂದಿಲ್ಲ. ಕಮ್ಯೂನಿಸ್ಟ್ ಕಂಟ್ರಿಯಲ್ಲಿ ಆಗಬಹುದು. ಪ್ರಜಾಪ್ರಭುತ್ವದಲ್ಲಿ ನಡೆದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಆದರೆ ನಿಮ್ಮ ಉದ್ದೇಶ ಪ್ರಜಾಪ್ರಭುತ್ವದಲ್ಲಿ ಹೀಗೆಯೇ ಇರಬೇಕು, ನಾವು ಅದೇ ರೀತಿ ನಡೆದುಕೊಂಡು ಹೋಗಬೇಕು, ಕಂಟ್ರಾಕ್ಟರುಗಳನ್ನು ಕೇಳಿ ಹಿಡಿದುಕೊಂಡು ಹೋಗಬೇಕು, ಎಂದು ತಮ್ಮ ಅಭಿಪ್ರಾಯವೇ ?

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಒಂದು ವೇಳೆ ಕಂಟ್ರಾಕ್ಟರುಗಳನ್ನು ವಜಾ ಮಾಡಿ, ಸಿಬ್ಬಂದಿ ನೇಮಕ ಮಾಡಿ ಅವರ ಮುಖಾಂತರ ಕೆಲಸ ನಡೆಸುವುದು ದೇಶಕ್ಕೆ ಒಳ್ಳೆಯದಾಗುವುದಿದ್ದರೆ ನನ್ನ ಅಡ್ಡಿ ಇಲ್ಲ. ಈ ಎರಡನ್ನೂ ತೂಕ ಮಾಡಿ ಅದರ ಕಷ್ಟಸುಖಗಳನ್ನೂ, ಲೋಪದೋಷಗಳನ್ನೂ ಮನನ ಮಾಡಿ ಅದಕ್ಕಿಂತ ಇದು ಒಳ್ಳೆಯದಾಗಿದ್ದರೆ ನನ್ನ ಅಡ್ಡಿ ಇಲ್ಲ. ಒಟ್ಟಿನಲ್ಲಿ ದೇಶಕ್ಕೆ ಒಳ್ಳೆಯದಾಗಬೇಕು ಎನ್ನುವುದೇ ವಿನಃ ಅವರಿಂದಲೇ ಆಗಬೇಕು ಎನ್ನುವುದು ಮುಖ್ಯವಲ್ಲ. ಪೂರ್ವ ಕಾಲದಲ್ಲಿ ಭದ್ರಾ ಪ್ರಾಜೆಕ್ಟ್, ಕೆ. ಆರ್. ಸಾಗರ ಕೆಲಸ ಡಿಪಾರ್ಟ್‌ಮೆಂಟ್ ಮುಖಾಂತರ ನಡೆದವು, ಆಗಿನ ಕಾಲದ ಕೆಲಸಗಳಿಗೂ ಈಗಿನ ಪ್ರಮಾಣದ ಕೆಲಸಗಳೂ ಬಹಳ ವ್ಯತ್ಯಾಸ ಇದೆ. ಯಥೇಚ್ಛವಾಗಿ ಅ ಜನಗಳನ್ನು ನೇಮಕ ಮಾಡಿಕೊಂಡ ಮೇಲೆ ಅವರನ್ನು ಬೇರೆ ಕಡೆ ತಕ್ಷಣ ಕಳುಹಿಸಿ ಬಿಡುವುದಕ್ಕಾಗುವುದಿಲ್ಲ. ಮತ್ತು ನಾನಾ ತರಹ ಮಿಷಿನರಿಗಳನ್ನು ಕೊಂಡುಕೊಂಡು ಇಟ್ಟುಕೊಳ್ಳಬೇಕಾಗುತ್ತದೆ. ಅದರ ಮೇಲ್ವಿಚಾರಣೆಗೆ ತಾಂತ್ರಿಕ ಸಿಬ್ಬಂದಿ ನೇಮಕ ಮಾಡಿಕೊಳ್ಳಬೇಕಾಗುತ್ತದೆ. ಇದಕ್ಕೆ ಹೇರಳವಾಗಿ ಹಣವನ್ನು ಇಡಬೇಕಾಗುತ್ತದೆ. ಈ ಕೆಲಸ ತೀರಿದ ಕೂಡಲೇ ಮತ್ತೊಂದು ಅದೇ ಪ್ರಮಾಣದ ಕೆಲಸ ಸಿಕ್ಕುವುದಿಲ್ಲ. ನಾವು ಇನ್ನೊಂದು ದೇಶಕ್ಕೆ ಹೋಗಿ ಕಂಟ್ರಾಕ್ಟ್ ಮಾಡುವುದಕ್ಕಾಗುವುದಿಲ್ಲ. ಈ ಸಭೆಯಲ್ಲಿ ತೀರ್ಮಾನ ಮಾಡಿ, ಒಂದು ಕಮಿಟಿ ಮಾಡಿ, ಕೂಲಂಕಷವಾಗಿ

(ಶ್ರೀ ಎಚ್. ಎಂ. ಚನ್ನಬಸಪ್ಪ)

ಪರಿಶೀಲನೆ ಮಾಡಿ, ಅದರ ಸಾಧಕಬಾಧಕಗಳನ್ನು ಯೋಚನೆ ಮಾಡಿ, ಈ ರೀತಿ ಮಾಡುವುದು ಸರಿ ಎಂದು ಮತ್ತೊಂದು ಸಾರಿ ಯೋಚನೆ ಮಾಡಿ ಹೇಳುವುದಾದರೆ ನನ್ನದೇನೂ ಅಡ್ಡಿ ಇಲ್ಲ.

ಇನ್ನು ಹಲವು ಮಾನ್ಯ ಸದಸ್ಯರು ಹಲವು ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಿ ಸಲಹೆಗಳನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ರಸ್ತೆಗಳು, ಕೆರೆಕಟ್ಟೆಗಳ ನಿರ್ಮಾಣ ವಿಚಾರ, ವಿದ್ಯುಚ್ಛಕ್ತಿ ಬಡಾವಣೆ ಇದರ ಬಗ್ಗೆ ಬಹಳ ಪ್ರಸ್ತಾಪ ನಡೆದಿದೆ. ಈಗ ರಸ್ತೆಗಳ ವಿಷಯವಾಗಿ ಮೊಟ್ಟಮೊದಲು ಇಟ್ಟು ಕೊಳ್ಳುತ್ತೇನೆ.

Sri C. M. ARUMUGAM.—Hon'ble Minister is somehow the master of the subject.

Sri H. M. CHANNABASAPPA.—With all your blessings. ಮಾನ್ಯ ಸದಸ್ಯರನೇಕರು ಒಬ್ಬೊಬ್ಬರೂ ಪ್ರತಿಯೊಂದು ಕ್ಷೇತ್ರದಲ್ಲೂ ಕೂಡ ಹಳ್ಳಿಗಳಿಗೆ ರಸ್ತೆಗಳು ಆಗಬೇಕು, ಅವಕ್ಕೆ ಮೊಟ್ಟಮೊದಲು ಪ್ರಾಶಸ್ತ್ಯ ಕೊಡಬೇಕು ಎನ್ನತಕ್ಕಂಥಾದ್ದಕ್ಕೆ ನಾನೂ ನಿಮ್ಮೊಡನೆ ಧ್ವನಿ ಗೂಡಿಸುತ್ತೇನೆ. ರಸ್ತೆಗಳು ಯಾವ ಊರಿಗೆ ಇಲ್ಲವೋ ಯಾವ ಊರು ಪ್ರಗತಿ ಆಗಿಲ್ಲವೋ ಅದನ್ನು ನಂಬಿರುವವರಲ್ಲಿ ನಾನೂ ಒಬ್ಬ. ಏನೇ ಕಷ್ಟ ಬರಲಿ ಪ್ರತಿಯೊಂದು ಊರಿನಲ್ಲೂ ಕೂಡ ಸಾಮಾನ್ಯ ರಸ್ತೆ ಇರಬೇಕು. ಅದನ್ನು ಮಾಡಲೇ ಬೇಕು ಎಂದು ನಮ್ಮ ಸರ್ಕಾರ ಪಣತೊಟ್ಟಿದೆ, ಇಷ್ಟು ಮಾತ್ರ ಹೇಳುತ್ತೇನೆ.

ಇನ್ನು ರಸ್ತೆಗಳ ವಿಷಯದಲ್ಲಿ 4 ಭಾಗಗಳಾಗಿ ವಿಂಗಡಿಸಿದ್ದೇವೆ. ಏನೆಂದರೆ ಈ ರಸ್ತೆಗಳು ಅನೇಕರಿಗೆ ತಮ್ಮ ತಮ್ಮ ಜಿಲ್ಲೆಯಲ್ಲಿ ರಸ್ತೆಗಳ ಪ್ರಮಾಣ ಹೇಗಿದೆ ಎನ್ನತಕ್ಕದ್ದು ಗೊತ್ತಿಲ್ಲ. ಸರ್ಕಾರದ ಉದ್ದೇಶ ರಸ್ತೆಗಳ ಪ್ರಮಾಣದಲ್ಲಿ ಇಂಬ್ಯಾಲೆನ್ಸ್ ಏನು ಇದೆ ಅವನ್ನೆಲ್ಲಾ ಸರಿಪಡಿಸ ಬೇಕು. ಪ್ರೆಷರ್ ಮತ್ತು ಪುಲ್ ಬಂದ ಕಡೆ ಹೆಚ್ಚಿಗೆ ರಸ್ತೆ ಮಾಡಿಬಿಡುವುದು, ಪ್ರೆಷರ್ ಇಲ್ಲದೇ ಇರುವ ಕಡೆ ಮಾಡದೇ ಬಿಟ್ಟುಬಿಡುವುದು ಆ ರೀತಿ ಆಗಬಾರದು. ನನ್ನ ಹತ್ತಿರ ಇರತಕ್ಕ ಏರಿಯಾ ವೈಸ್ ಸ್ಟ್ಯಾಟಿಸ್‌ಟಿಕ್ಸ್ ಪ್ರಕಾರ ಒಂದು ಸ್ಕ್ವೇರ್ ಕಿಲೋಮೀಟರ್‌ಗೆ ಎಲ್ಲಕ್ಕಿಂತಲೂ ಬಹಳ ಹೆಚ್ಚಿನ ರಸ್ತೆ ಇರತಕ್ಕಂಥಾದ್ದು ಮಂಡ್ಯ ಜಿಲ್ಲೆಯಲ್ಲಿ, ಬಹಳ ಕಡಿಮೆ ಇರತಕ್ಕಂಥಾದ್ದು ಗುಲ್ಬರ್ಗ ಮತ್ತು ರಾಯಚೂರು ಜಿಲ್ಲೆಯಲ್ಲಿ. ಮಂಡ್ಯ ಜಿಲ್ಲೆಯಲ್ಲಿ ಒಂದು ಸ್ಕ್ವೇರ್ ಕಿಲೋ ಮೀಟರ್‌ನಲ್ಲಿ 1.07 ಕಿಲೋ ಮೀಟರ್ ರಸ್ತೆ ಇದೆ. ಗುಲ್ಬರ್ಗ ಮತ್ತು ರಾಯಚೂರಿನಲ್ಲಿ 0.19 ಇದೆ. ಬಾಕಿ ಯದು ಇವೆರಡರ ಮಧ್ಯೆ ಬರುತ್ತದೆ. ಎಂದಮೇಲೆ ಅವುಗಳನ್ನು ಇಂಬ್ಯಾಲೆನ್ಸ್ ಏನು ಇದೆ ಅದು ಹೋಗುವ ರೀತಿಯಲ್ಲಿ ಎಲ್ಲಾ ಹಳ್ಳಿಗಳಲ್ಲೂ ಕೂಡ ಎಲ್ಲರಿಗೂ ಅನುಕೂಲವಾಗುವ ರೀತಿಯಲ್ಲಿ ವ್ಯವಸ್ಥೆ ಮಾಡತಕ್ಕದ್ದು ಧರ್ಮ ಮತ್ತು ನ್ಯಾಯ ಇದೆ. ಅದಕ್ಕೆ ಅನೇಕ ಸ್ನೇಹಿತರು ಎಲ್ಲೋ ಸ್ವಲ್ಪ ಹಣವನ್ನು ರೂರಲ್ ಕಮ್ಯೂನಿಕೇಷನ್‌ನಲ್ಲಿ ಒದಗಿಸಿದ್ದಾರೆ ಅಂತ ಪ್ರಶ್ನೆ ಮಾಡಿದರು. ನಿಜ. ರೂರಲ್ ಕಮ್ಯೂನಿಕೇಷನ್‌ನ್ನು 4 ಭಾಗಗಳಾಗಿ ವಿಂಗಡಿಸಿದ್ದೇವೆ. ಒಂದನೇದು ಮಿಸ್ಸಿಂಗ್ ಲಿಂಕ್ಸ್. ಆ ಕಡೆ ರಸ್ತೆ ಆಗಿದೆ, ಈ ಕಡೆ ರಸ್ತೆ ಆಗಿದೆ ಮಧ್ಯೆ ಒಂದು ಮೈಲಿ ರಸ್ತೆ ಇಲ್ಲದೆ ಅಪ್ರಯೋಜಕವಾಗಿದೆ. ಅಂತಹ ಮಿಸ್‌ಲಿಂಕ್ಸ್‌ನ್ನು ಕನ್‌ಸ್ಟ್ರಕ್ಟ್ ಮಾಡುವುದು. ಎರಡ ನೇದು ಹಿಂದೆ ಮಾಡಿದ ರಸ್ತೆ ಕೊರೆದು ಹೋಗಿ ಅಪ್ರಯೋಜಕವಾಗಿದೆ. ಮೂರನೆಯದು ರಸ್ತೆ ಮಾಡಿ ಅದನ್ನು ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್‌ಗೆ ಸೇರಿಸಿಕೊಳ್ಳಬೇಕು ಇಲ್ಲದೇ ಹೋದರೆ ಕೆಟ್ಟುಹೋಗುತ್ತದೆ. ನಾಲ್ಕನೆಯದು ಪ್ರತಿಯೊಂದು ಹಳ್ಳಿಗೂ ಕೂಡ ಮುಖ್ಯ ಮಾರ್ಗಗಳಿಂದ ಹಳ್ಳಿಗೂ ಕೂಡ ಅಪ್ರೋಚ್ ರಸ್ತೆ ಆಗಬೇಕು. ಹೀಗೆ ನಾಲ್ಕು ಭಾಗಗಳಾಗಿ ವಿಂಗಡಣೆ ಮಾಡಿ ದ್ದೇವೆ. ಎಲ್ಲಾ ತಾಲ್ಲೂಕುಗಳ ಮಾಹಿತಿಯನ್ನು ತರಿಸುತ್ತೇನೆ. ಈಗ 100 ತಾಲ್ಲೂಕಿನದು ಬಂದಿದೆ. ಇನ್ನು 60—70 ತಾಲ್ಲೂಕಿನಿಂದ ಇಷ್ಟರಲ್ಲೇ ಬರುತ್ತದೆ. ಪ್ರತಿ ತಾಲ್ಲೂಕಿನಲ್ಲಿಯೂ ಎಷ್ಟೆಷ್ಟು ಮೈಲಿ ರಸ್ತೆಯನ್ನು ಪಿ.ಡಬ್ಲ್ಯು.ಡಿ. ರಸ್ತೆಗಳನ್ನಾಗಿ ತೆಗೆದುಕೊಳ್ಳುವುದಕ್ಕೆ ಯೋಗ್ಯವಾಗಿದೆ ಎಂದು ಲೆಕ್ಕ ಹಾಕಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಯಾವ ಆಧಾರದ ಮೇಲೆ ತೆಗೆದುಕೊಳ್ಳುತ್ತೀರಿ? ಆಯಾ ಕ್ಷೇತ್ರದ ವಿಧಾನ ಸಭಾ ಸದಸ್ಯರನ್ನು ವಿಚಾರ ಮಾಡುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆಯಾ ತಾಲ್ಲೂಕಿನಲ್ಲಿ ಆಯಾ ಅಸಿಸ್ಟೆಂಟ್ ಇಂಜನಿಯರ್ ತಾಲ್ಲೂಕು ಮ್ಯಾಪನ್ನು ಬರೆದು, ಅದರಲ್ಲಿ ಎಲ್ಲ ಗುರುತು ಹಾಕಿ ನಮಗೆ ಕಳುಹಿಸಿಕೊಡುತ್ತಾರೆ. ಎಲ್ಲ ಮಾಹಿತಿ ಬಂದ ಮೇಲೆ ಆ ಮಾಹಿತಿಯನ್ನು ಆಯಾ ಕ್ಷೇತ್ರಕ್ಕೆ ಸಂಬಂಧಪಟ್ಟ ಎಂ.ಎಲ್.ಎ.

ಎಂ.ಎಲ್.ಸಿ. ಯಾರಿದ್ದಾರೆ ಅವರಿಗೆ ಒದಗಿಸುತ್ತೇವೆ. ಅದರಲ್ಲಿ ಎಷ್ಟು ವರ್ಷಗಳಲ್ಲಿ ಆ ರಸ್ತೆಗಳನ್ನೆಲ್ಲ ತೆಗೆದುಕೊಳ್ಳಬೇಕು ಎನ್ನುವ ನಿರ್ಧಾರ ಮಾಡಿ, ಈ ವರ್ಷ ಎಷ್ಟಾಗಬಹುದು, ಮುಂದಿನ ವರ್ಷ ಎಷ್ಟಾಗಬಹುದು ಎನ್ನುವುಧನ್ನು ತಿಳಿಸುತ್ತೇವೆ. ಆಯಾ ತಾಲ್ಲೂಕಿನ ಸದಸ್ಯರಿಗೆ ಅಲ್ಲಿ ಹೆಚ್ಚು ಪರಿಚಯವಿರುವುದರಿಂದ ಅವರ ಸಲಹೆಯನ್ನು ಪಡೆದು ಸಮಗ್ರವಾದ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಯೋಚನೆ ಮಾಡಿದೆ. 50 ಮೈಲಿಯಷ್ಟು ರಸ್ತೆಯನ್ನು ಈ ವರ್ಷದ ಮಟ್ಟಿಗೆ ತೆಗೆದುಕೊಳ್ಳಬೇಕೆಂಬ ಅಭಿಪ್ರಾಯ ಸರ್ಕಾರಕ್ಕೆ ಇದೆ ಎನ್ನುವುದನ್ನು ನಾನು ಅನೇಕ ವೇಳೆ ಹೊರಗೆಡವಿದ್ದೇನೆ. ಅದೇ ಅಭಿಪ್ರಾಯ ಈ ಹೊತ್ತು ಈ ಸಭೆಯಲ್ಲಿ ತಮ್ಮ ಮುಂದೆ ತಿಳಿಸುತ್ತಿದ್ದೇನೆ. ಈ 50 ಮೈಲಿಯಲ್ಲಿ ಯಾವ ಯಾವದು ಹೇಗೆ ಹೇಗೆ ಇರಬೇಕು ಎನ್ನುವ ವಿವರಗಳು ಈಗ ಅನಾವಶ್ಯಕವೆಂದು ಭಾವಿಸುತ್ತೇನೆ. ಇಷ್ಟು ಪ್ರಮಾಣದಲ್ಲಿ ಮಾಡಿದರೆ ನಮ್ಮ ಹಳ್ಳಿಯವರು ಪುನೀತರಾಗುತ್ತಾರೆ. ಇನ್ನು ಎರಡು ಮೂರು ವರ್ಷಗಳಲ್ಲಿ ಅದನ್ನೆಲ್ಲ ಪೂರೈಸಬೇಕು ಎನ್ನುವ ಆಸೆಯನ್ನು ಇಟ್ಟುಕೊಂಡಿದ್ದೇನೆ. ಅದಕ್ಕೆ ನಿಮ್ಮೆಲ್ಲರ ಸಹಕಾರ ತೆಗೆದುಕೊಂಡು ಎಲ್ಲ ವಿಷಯಗಳನ್ನೂ ಪರಿಶೀಲನೆಮಾಡಿ ಮುಂದಿನ ಕ್ರಮ ತೆಗೆದುಕೊಳ್ಳುತ್ತೇನೆ. ಇದರಿಂದ ಎಲ್ಲ ಸದಸ್ಯರಿಗೂ ಸಮಾಧಾನವಾಗುತ್ತದೆಂದು ನಂಬಿದ್ದೇನೆ. ರಸ್ತೆಗಳ ವಿಷಯದಲ್ಲಿ ಏನೇನು ಹೇಳಿದ್ದರು ಅವುಗಳೆಲ್ಲಕ್ಕೂ ಈ ಒಂದು ಉತ್ತರ ಸರಿ ಹೋಗುತ್ತದೆ ಎಂದು ತಿಳಿದುಕೊಂಡಿದ್ದೇನೆ.

ವಿದ್ಯುಚ್ಛಕ್ತಿಯ ವಿಷಯವಾಗಿ ಹೋದ ಸಾಲಿನಲ್ಲಿ 2750 ಹಳ್ಳಿಗಳಿಗೆ ವಿದ್ಯುತ್ತನ್ನು ಕೊಟ್ಟಿದ್ದೇವೆ. ಈಗ ಮಾನ್ಯ ಸದಸ್ಯರು ನನ್ನ ಗಮನವನ್ನು ಸೆಳೆದು ಎಲೆಕ್ಟ್ರಿಸಿಟಿ ಬೋರ್ಡ್ ಚೀಫ್ ಇಂಜಿನಿಯರವರು ಕೆಲಸವನ್ನು ನಿಲ್ಲಿಸಬೇಕೆಂದು ಆಜ್ಞೆ ಕೊಟ್ಟಿದ್ದಾರೆಂದು ಹೇಳಿದರು. ಆ ಆಜ್ಞೆಯನ್ನು ಬದಲಾಯಿಸುವಂತೆ ತಿಳಿಸಿದ್ದೇನೆ. ಹೆಚ್ಚು ಮಾಡುವುದಕ್ಕೆ ಸಾಧ್ಯವಾದರೆ ಮಾಡುತ್ತೇನೆ. ಕೊನೇ ಪಕ್ಷ 2750 ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡುವುದಷ್ಟೇ ಅಲ್ಲ, ಅದೇ ಪ್ರಮಾಣದಲ್ಲಿ ವಿದ್ಯುಚ್ಛಕ್ತಿಯನ್ನು ಕೊಡತಕ್ಕ ಕಾರ್ಯಕ್ರಮವೇನಿದೆ ಅದರ ವೇಗವನ್ನು ಕಡಮೆ ಮಾಡದೆ ಕೆಲಸ ಮಾಡಿಕೊಂಡು ಹೋಗುತ್ತೇವೆನ್ನುವ ಭರವಸೆಯನ್ನೂ ಕೊಡುತ್ತೇನೆ. ಎನರ್ಜೈಸಿಂಗ್ ಪಂಪ್ ಸೆಟ್ಟು ಸಹ ಅದರ ಹಿಂದೆಯೇ ಹೋಗುತ್ತದೆ.

ತೆಂಗಿನ ತೋಟಗಳಿಗೆ ನೀರು ಕೊಡತಕ್ಕ ವ್ಯವಸ್ಥೆಯನ್ನು ಸೇರಿಸಿಕೊಳ್ಳಬೇಕೆಂದು ಮಾನ್ಯ ತಿಪಟೂರಿನ ಸದಸ್ಯರು ಹೇಳಿದರು. ಅದು ನೀರಾವರಿಯಲ್ಲಿ ಬರುತ್ತದೆ. ತೆಂಗಿನ ತೋಟಕ್ಕೆ ಆಗಿಂದಾಗ್ಗೆ ನೀರು ಕೊಡದೆ ಹೋದರೆ ಫಸಲು ಚೆನ್ನಾಗಿ ಬರುವುದಿಲ್ಲ. ಮಾನ್ಯ ಸದಸ್ಯರು ಹೇಳಿರುವುದನ್ನು ನಾನು ಬರೆದುಕೊಂಡಿದ್ದೇನೆ. ಪ್ರತಿಯೊಬ್ಬ ಸದಸ್ಯರೂ ಹೇಳಿರುವುದನ್ನು ನಾನು ಬರೆದುಕೊಂಡಿದ್ದೇನೆ. ಆದಷ್ಟು ಬೇಗ ಸೂಕ್ತ ರೀತಿಯಲ್ಲಿ ಅದಕ್ಕೆಲ್ಲ ಗಮನವನ್ನು ವಿಶ್ವಾಸಪೂರ್ವಕವಾಗಿ ಕೊಡುತ್ತೇನೆಂದು ಇಷ್ಟು ಮಾತ್ರ ಹೇಳುತ್ತೇನೆ.

ನೀರಾವರಿ ವಿಷಯದಲ್ಲಿ ಅನೇಕ ಕೆಲಸಕಾರ್ಯಗಳು ಬಜೆಟ್ಟಿನಲ್ಲಿ ಸೇರಿದ್ದು ನಿಂತು ಹೋಗಿವೆ ಎರಡು ಮೂರು ವರ್ಷಗಳಲ್ಲಿ ಸೇರಿದ್ದೂ ನಿಂತು ಹೋಗಿವೆ ಎನ್ನುವ ಟೀಕೆಗಳು ಬಂದಿವೆ. ಎಕಾನಾಮಿ ಮೆಷರ್ ಆಜ್ಞೆ ಇತ್ತು. ಆ ಆಜ್ಞೆಯನ್ನು ರದ್ದು ಮಾಡಿ ಅದನ್ನು ತಪ್ಪಿಸಲು ಯಾವ ರೀತಿಯ ಸೂಚನೆಗಳನ್ನು ಕೊಡಬೇಕೋ ಅದನ್ನು ಕೊಡುತ್ತೇನೆಂದು ಮಾತ್ರ ಭರವಸೆ ಕೊಡುತ್ತೇನೆ.

ಬಂದರುಗಳ ವಿಷಯದಲ್ಲಿ ಏನು ಕಾರ್ಯಕ್ರಮ ನಮ್ಮ ರಾಜ್ಯದ ಹಿತದೃಷ್ಟಿಯಿಂದ ಆಗಬೇಕೋ ಅಷ್ಟನ್ನು ಮಾಡುತ್ತೇನೆ. ಅದರಲ್ಲಿ ಅಡ್ಡಿ ಇಲ್ಲ. ಸಲಹೆಗಳನ್ನು ಗುರುತು ಹಾಕಿಕೊಂಡಿದ್ದೇನೆ. ಎಲ್ಲಕ್ಕೂ ಉತ್ತರ ಕೊಡುವುದು ತಕ್ಷಣ ಸರ್ಕಾರಕ್ಕೆ ಕಷ್ಟವಾಗುತ್ತದೆ. ಇಷ್ಟು ಮಾತ್ರ ನಿವೇದನೆ ಮಾಡಿಕೊಳ್ಳುತ್ತೇನೆ.

ಕೆರೆಗಳಲ್ಲಿನ ಹೂಳು ತೆಗೆಸುವ ಬಗ್ಗೆ ಹೇಳಿದ್ದಾರೆ. ಅದು ಮಾಡುವುದಕ್ಕೆ ಸಾಧ್ಯವಿಲ್ಲದ ಕೆಲಸ ಎನ್ನುವುದನ್ನು ನಾನು ನಿಮಗೆ ಒತ್ತಿ ಒತ್ತಿ ಹೇಳುತ್ತೇನೆ. ಹೂಳು ತೆಗೆಸುವ ಬಗ್ಗೆ ಕೇಳಬೇಡಿ. ಕೆರೆಗಳಲ್ಲಿನ ಹೂಳು ತೆಗೆದು ನೀರು ನಿಲ್ಲಿಸಬೇಕು ಎಂದರೆ ಒಂದು ಎಕರೆಗೆ 10-15 ಸಾವಿರ ರೂಪಾಯಿಗಳವರೆಗೂ ಖರ್ಚಾಗುತ್ತದೆ. ಅದು ಎಕನಾಮಿಕಲ್ ಆಗಿ ಆಗುವುದಿಲ್ಲ ಎಂದೇ ಹೊರತು ಪ್ರಯೋಜಕವೆಂದು ಹೇಳುತ್ತಿಲ್ಲ. ಹಣಕಾಸು ನಮಗೆ ಎಷ್ಟು ಸಿಕ್ಕುತ್ತದೆ ಅದರಿಂದ ಎಷ್ಟು ಹೆಚ್ಚಿನ ಅಪ್ರಮಾಣದಲ್ಲಿ ಹೆಚ್ಚಿನ ಪ್ರಯೋಜನ ಹೆಚ್ಚಿನ ಜನಗಳಿಗೆ ಆಗುವಂತೆ ವ್ಯವಸ್ಥೆ ಮಾಡತಕ್ಕ ರೀತಿಯಿಂದ ನಾವೂ ನೀವೂ ಉಭಯತ್ರರೂ ಕೂಡಿ ಕೆಲಸ ಮಾಡೋಣ ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಕಟ್ಟೆಯನ್ನು ಎತ್ತರ ಮಾಡಿ ಸ್ಟೋರೇಜ್ ಹೆಚ್ಚು ಮಾಡುವುದರಲ್ಲಿಯೂ ಕೆಲವು ಕಷ್ಟಗಳಿವೆ. ಕೆಲವು ಕಡೆ ಹೆಚ್ಚಾಗಿ ಜಮೀನು ಮುಳುಗಡೆಯಾಗುತ್ತದೆ. ಮುಳುಗಡೆ ಹೆಚ್ಚಾಗದೆ ಇರುವ ಕಡೆ ಸ್ಟೋರೇಜ್ ಹೆಚ್ಚು ಮಾಡುವುದರಲ್ಲಿ ಅಭ್ಯಂತರವಿಲ್ಲ.

(ಶ್ರೀ ಎಚ್. ಎಂ. ಚನ್ನಬಸಪ್ಪ)

ಮೈನರ್ ಇರಿಗೇಷನ್ ವಿಷಯದಲ್ಲಿ ನಮ್ಮದು ಸೇರಿಲ್ಲ, ಸೇರಿದ್ದರೂ ಹಣ ಕೊಟ್ಟಿಲ್ಲ, ಕೆಲಸ ವಾಗಿಲ್ಲ ಎನ್ನುವ ಟೀಕೆ ಮಾಡಿದ್ದಾರೆ. ಆ ವಿಷಯದಲ್ಲಿ ನನ್ನ ಸಹಾನುಭೂತಿ ತಮ್ಮೊಡನೆ ಸಂಪೂರ್ಣ ವಾಗಿದೆ ಎಂದು ಮಾತ್ರ ನಾನು ಒತ್ತಿ ಒತ್ತಿ ಅರಿಕೆ ಮಾಡುತ್ತೇನೆ.

ಶ್ರೀ ಕೆ. ಎಚ್. ಹನುಮೇಗೌಡ.—ಕೆರೆ ರಿಪೇರಿ ಕೆಲಸ ಬೇಗ ಆಗುವ ಬಗ್ಗೆ ಏನು ವ್ಯವಸ್ಥೆ ಮಾಡಲಾಗಿದೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಒಂದು ಆಜ್ಞೆ ಮಾಡಿದ್ದೇವೆ, ಅದರಿಂದ ಮಾನ್ಯ ಸದಸ್ಯರಿಗೆ ಸಂತೋಷವಾಗಬಹುದು. ಇನ್ನು ಮುಂದೆ ಪ್ರತಿಯೊಂದು ಕೆರೆಯೂ ಸರ್ಕಾರದ ಸ್ವತ್ತು ಎನ್ನುವ ಅರಿವು ಸ್ಥಳೀಯ ಜೂನಿಯರ್ ಇಂಜಿನಿಯರ್, ಅಸಿಸ್ಟೆಂಟ್ ಇಂಜಿನಿಯರ್, ಎಕ್ಸಿಕ್ಯೂಟಿವ್ ಇಂಜಿನಿಯರ್ ಅವರುಗಳಿಗೆ ಇರಬೇಕು. ಯಾವುದಾದರೂ ಕೆರೆ ರಿಪೇರಿಯಾಗಬೇಕಾಗಿದ್ದು ಅದನ್ನು ತಕ್ಷಣ ಸರಿಪಡಿಸದೆ ಇದ್ದರೆ ಕ್ರಮ ತೆಗೆದುಕೊಳ್ಳುತ್ತೇನೆಂದು ಆಜ್ಞೆ ಮಾಡಿದ್ದೇನೆ. ತೂಬುಗಳು ಶಿಥಿಲ ವಾಗಿರಲಿ, ದನಕರುಗಳು ಓಡಾಡಿ ಕೆರೆಗಳ ದಂಡೆಗಳು ಕಡಿಮೆಯಾಗಿ ಕೆರೆಗೆ ಅಪಾಯ ಒದಗುವಂಥ ಪರಿಸ್ಥಿತಿ ಇರಲಿ, ಇಂಥ ಸಣ್ಣಪುಟ್ಟ ಕಾಮಗಾರಿಗಳೇನಿವೆ ಅವುಗಳನ್ನು ಎಕ್ಸಿಕ್ಯೂಟಿವ್ ಇಂಜಿನಿಯರ್ ಅಥವಾ ಸೂಪರಿಂಟೆಂಡಿಂಗ್ ಇಂಜಿನಿಯರ್ ಹೋದಾಗ ವಿಚಾರಿಸಿ ತಕ್ಷಣ ಆ ಆಸ್ತಿಯನ್ನು ಸರಿಪಡಿಸಿಟ್ಟುಕೊಳ್ಳುವಂಥದು ಅವಶ್ಯಕ. ಆ ರೀತಿ ಮಾಡದೆ ಹೋದರೆ ಉಗ್ರ ಕ್ರಮ ತೆಗೆದುಕೊಳ್ಳುತ್ತೇವೆಂದು ಅವರಿಗೆಲ್ಲ ಆಜ್ಞೆ ಕೊಟ್ಟಿದ್ದೇನೆ. ತಾವುಗಳು ಯಾರಾದರೂ ಸ್ಥಳೀಯ ಇಂಜಿನಿಯರುಗಳಿಗೆ ತಿಳಿಸಿದರೆ ತಕ್ಷಣ ರಿಪೇರಿ ಕೆಲಸವನ್ನು ಅವರು ಮಾಡತಕ್ಕವರಾಗಿದ್ದಾರೆ.

ಶ್ರೀ ಟಿ. ಎಂ. ಮಂಜುನಾಥ್ (ತಿಪಟೂರು).—ನಾನು ಸವಡಿಗಳ ವಿಚಾರ ಪ್ರಸ್ತಾಪ ಮಾಡಿದ್ದೆ ಅದರ ಬಗ್ಗೆ ಏನು ಹೇಳುತ್ತೀರಿ?

ಶ್ರೀ ಎಚ್. ಎಂ ಚೆನ್ನಬಸಪ್ಪ.—ಸವಡಿಗಳು ಮೇಜರ್ ಕೆರೆಗಳಲ್ಲಿರುತ್ತಾರೆ. ಮೇಜರ್ ಟ್ಯಾಂಕ್ಸ್ ಬಗ್ಗೆ ಯಾವ ರೀತಿ ಮಾಡಬೇಕು ಎನ್ನುವ ವಿಚಾರದ ಬಗ್ಗೆ ತೀವ್ರವಾದ ಗಮನವನ್ನು ಹರಿಸುತ್ತಿದ್ದೇವೆ. ತಮ್ಮ ಸಲಹೆಗಳು ಏನಾದರೂ ಇದ್ದರೆ ಇಲ್ಲಿಯೇ ಕೊಡಬೇಕಾದ್ದಿಲ್ಲ. ಯಾವ ಗಳಿಗೆಯಲ್ಲಿ ಬೇಕಾದರೂ ಸಲಹೆಗಳನ್ನು ಕೊಡಿ. ಅವನ್ನು ವಿಶ್ವಾಸಪೂರ್ವಕವಾಗಿ ತೆಗೆದುಕೊಂಡು ಈ ವಿಷಯದಲ್ಲಿ ನಮ್ಮ ದೇಶದ ಕಲ್ಯಾಣಕ್ಕೋಸ್ಕರವಾಗಿ ಮತ್ತು ಈ ನಮ್ಮ ರಚನಾತ್ಮಕ ಕಾರ್ಯ ವಿದ್ಯುದ್ಯೋಗದಲ್ಲಿ ನಡೆದು ದೇಶವೆಲ್ಲ ಎಲ್ಲಿಗೂ ಸಮರ್ಪಕವಾದ ನ್ಯಾಯ ದೊರಕುವಂತೆ ಮಾಡುವುದರಲ್ಲಿ ನಾನೂ, ನೀವೂ ಎಲ್ಲರೂ ಸಹಕರಿಸಿ ಕೆಲಸ ಮಾಡೋಣ.

"ಜೈ ಹಿಂದ್"

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ದೇವೇಗೌಡರು ವಾಟರ್ ರಿಸೋರ್ಸಸ್ ಚೀಫ್ ಇಂಜಿನಿಯರ್ ಅವರ ವರ್ಗಾವಣೆ ಭಾರಿ ನೀರಾವರಿ ಯೋಜನೆಗಳ ಮಂಡಳಿಯಿಂದ ಅವರ ಸದಸ್ಯತ್ವವನ್ನು ತೆಗೆಯುವ ಉದ್ದೇಶದಿಂದ ಮಾಡಿರಬಹುದು ಎನ್ನುವ ಅನುಮಾನವನ್ನು ವ್ಯಕ್ತಪಡಿಸಿದರು ಆ ಅನುಮಾನಕ್ಕೆ ಕಾರಣವಿಲ್ಲ. ಅವರಿಗೆ ಸರಿಯಾದ ವರ್ತಮಾನ ಗೊತ್ತಿಲ್ಲದೆ ಹಾಗೆ ಹೇಳಿರಬಹುದು. ಈ ಮಂಡಳಿಯನ್ನು ಪುನರ್ರಚನೆ ಮಾಡಿ 23-6-1972 ರಂದು ಆರ್ಡರಾಗಿದೆ. ಅದರಲ್ಲಿ ಅವರೂ ಸದಸ್ಯರಾಗಿದ್ದಾರೆ. ಇದರಲ್ಲಿ ಯಾರೋ ಏನೋ ಮಾಡಿದ್ದಾರೆ ಎಂದು ತಮಗೆ ಅನುಮಾನ ಇದ್ದರೆ ಅದನ್ನು ದೂರ ಮಾಡಿಕೊಳ್ಳಲಿಕ್ಕೆ ಇದನ್ನು ತಮ್ಮ ಮುಂದೆ ಇಡುತ್ತೇನೆ. ಹಿಂದೆ ಚೀಫ್ ಇಂಜನಿಯರ್ ಇದ್ದವರನ್ನು ಆತುರಾತುರವಾಗಿ ಕಳುಹಿಸಬೇಕು, ಬೇರೆಯವರನ್ನು ತರಬೇಕು ಎನ್ನುವ ಯೋಚನೆ ಮಾಡಿದ್ದಾರೆ ಎನ್ನುವುದು ಸರಿಯಲ್ಲ ಎನ್ನುವ ಸ್ಪಷ್ಟವಾದ ಮಾತನ್ನು ಹೇಳುತ್ತೇನೆ. ಅವರನ್ನು ಹಾಕಿ ಎಂದು ಹೇಳಿದವನು ನಾನಲ್ಲ. ಅನಾರೋಗ್ಯದ ನಿಮಿತ್ತ ರಜ ಹಾಕಿದಾಗ ಬೇರೆಯವರನ್ನು ಹಾಕಬೇಕಾಗುತ್ತದೆ, ರಜ ತೆಗೆದುಕೊಂಡು ಹೋಗಬೇಕು ಎಂದು ನಾನು ಯಾರನ್ನೂ ಹಿಂಸೆ ಮಾಡಿ, ಒತ್ತಾಯಮಾಡಿ ಬೇರೆ ಯಾರನ್ನೋ ತರಬೇಕು ಎಂದು ಉದ್ದೇಶದಿಂದ ಮಾಡುತ್ತಿಲ್ಲ. ತಮಗೆ ತಿಳುವಳಿಕೆ ಇದ್ದರೆ, ಅದನ್ನು ಬಿಡಬೇಕು ಎಂದು ಒತ್ತಾಯ ಮಾಡಿ ಹೇಳುತ್ತೇನೆ.

6-00 P.M.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಚೆನ್ನಬಸಪ್ಪನವರು ಶರಾವತಿಯ ಬಗ್ಗೆ ಪ್ರಸ್ತಾಪ ಮಾಡಿದರು. ಸಂತೋಷ ಮುಖ್ಯಮಂತ್ರಿಗಳು You are arguing a bad case ಎಂದು ಹೇಳಿದರು ನನಗೆ ಸ್ವಲ್ಪ ವಿವರಣೆ ಬೇಕು. 1959ರಿಂದ 1962ರವರೆಗೆ ಯಾವ ಯಾವ ಕಂಟ್ರಾಕ್ಟನ್ನು ನೀವು ಕೊಟ್ಟಿದ್ದೀರಿ, ಯಾವ ಯಾವ ಬಾಬಿನಲ್ಲಿ ಎಷ್ಟು ಪ್ರೋಗ್ರೆಸ್ ನಡೆದಿದೆ ಎನ್ನುವುದನ್ನು ಈ ಸಭೆಗೆ ತಿಳಿಸಬೇಕು.

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಮಾನ್ಯ ವಿರೋಧಪಕ್ಷದ ನಾಯಕರು ಅವಕ್ಕೆ ಪ್ರತ್ಯೇಕ ಪ್ರಶ್ನೆಯನ್ನು ಕೇಳಿದರೆ ಉತ್ತರ ಕೊಡುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಶ್ರೀ ಚೆನ್ನಬಸಪ್ಪನವರ ಕಾಲದ 1962ರಲ್ಲಿ ಮುಕ್ತಾಯವಾಯಿತು. ಶ್ರೀ ನಿಜಲಿಂಗಪ್ಪನವರದ್ದು 1962ರಿಂದ ಪ್ರಾರಂಭವಾಯಿತು. 1959ರಿಂದ 1962 ರವರೆಗೆ ವೀರಣ್ಣಗೌಡರನ್ನು ಸೇರಿಸಿ ಬಿಡೋಣ ಕೆಲಸ ಪ್ರಾರಂಭವಾದ ದಿವಸದಿಂದ 1962ರವರೆಗೆ, ಎಷ್ಟು ಪ್ರೋಗ್ರೆಸ್ ಯಾವ ಯಾವ ಬಾಬಿನಲ್ಲಿ ನಡೆದಿದೆ ಎನ್ನುವುದನ್ನು ಮಾನ್ಯ ಚೆನ್ನಬಸಪ್ಪನವರು ಈ ಸಭೆಗೆ ತಿಳಿಸುತ್ತೇನೆ ಎಂದು ಆಶ್ವಾಸನೆ ಕೊಟ್ಟಿದ್ದಾರೆ. ಇದು ಚರ್ಚೆ ಆಗಬೇಕು ಎನ್ನುವ ಸದುದ್ದೇಶದಿಂದ ಫ್ಯಾಕ್ಚುಯಲ್ ಸ್ಟೇಟ್‌ಮೆಂಟ್ ಇಡುತ್ತೇನೆ ಎಂದು ಹೇಳಿದರು. ಇದರ ಬಗ್ಗೆ ಚರ್ಚೆ ಆಗತಕ್ಕ ಕಾಲದಲ್ಲಿ ಈ ಇನ್‌ಫರ್ಮೇಷನ್ ಕೊಟ್ಟರೆ ಒಳ್ಳೆಯದು ಮತ್ತು 1962ರಿಂದ 1964ರ ವರೆಗೆ ನಿಜಲಿಂಗಪ್ಪನವರ ಕಾಲದಲ್ಲಿ ಎಷ್ಟೆಷ್ಟು ಕೆಲಸವಾಗಿದೆ 1964ರಿಂದ ಶ್ರೀ ವೀರೇಂದ್ರಪಾಟೀಲರ ಕಾಲದಲ್ಲಿ ಎಷ್ಟೆಷ್ಟು ಕೆಲಸವಾಗಿದೆ ಎನ್ನುವುದನ್ನು ತಿಳಿಸಬೇಕು. ತಾವು ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿರತಕ್ಕದ್ದರ ಬಗ್ಗೆ ಹೇಳಿದ್ದೀರಿ, ಸಂತೋಷ, ನಾವು ಯಾರೂ ಬಂದು ಸಸ್ಪೆನ್‌ಷನ್ ವೆಕೇಟ್ ಮಾಡಿ ಎಂದು ಪ್ರೆಷರ್ ಹಾಕಿಲ್ಲ. ಯಾರಾದರೂ ಬಂದು ನೀವು ಮಾಡಿರುವುದು ತಪ್ಪು ಎಂದು ಭ್ರಷ್ಟಾಚಾರ ಅಧಿಕಾರಿಗಳ ಬಗ್ಗೆ ಹೇಳಿದರೆ; ಆ ರೀತಿ ಹೇಳಿ ನಾನು ಅಲಿಗೇಷನ್ ಮಾಡಿದ ಕೆಲವು ಸಂದರ್ಭಗಳಲ್ಲಿ ಎನ್‌ಕ್ವಯರಿ ಆರ್ಡರ್ ಮಾಡಿದ್ದೀರಿ, ಆದರೆ ಅವರನ್ನು ಸಸ್ಪೆಂಡ್ ಮಾಡಿಲ್ಲ. ಮೂರು ಜನ ಸೂಪರಿಂಟೆಂಡಿಂಗ್ ಇಂಜನಿಯರುಗಳ ವಿಚಾರಣೆ ನಡೆಯಬೇಕೆಂದು ಹುಕುಂ ಮಾಡಿದ್ದೀರಿ. ಹುಕುಂ ಮಾಡಿರತಕ್ಕ ಕಾಲದಲ್ಲಿ ಅವರನ್ನು ಸಸ್ಪೆಂಡ್ ಮಾಡಿಲ್ಲ. ಅದಕ್ಕೆ ಕಾರಣ ಏನು ? ತಾವು ಯಾವ ಧೋರಣೆಯಿಂದ ಸಸ್ಪೆನ್‌ಷನ್ ಆರ್ಡರನ್ನು ಜಾರಿಗೆ ಕೊಟ್ಟಿದ್ದೀರಿ ? ಈ ವಿಚಾರಣೆಗೆ ಅನುಕೂಲವಾಗಲೀ ಎಂದು ಸಸ್ಪೆಂಡ್ ಮಾಡಿದ್ದೀರಿ. ಅಂದೇ ಶ್ರೀಮಾನ್ ಜವಳಿ ಮತ್ತು ಇತರ ಎರಡು ಜನ ಸೂಪರಿಂಟೆಂಡಿಂಗ್ ಇಂಜನಿಯರುಗಳ ಮೇಲೆ ಸಸ್‌ಪೆನ್‌ಷನ್ ಆರ್ಡರ್ ಮಾಡಿರತಕ್ಕ ಕಾಲದಲ್ಲಿ ಎನ್‌ಕ್ವಯರಿ ನಡೆಯುತಕ್ಕ ಕಾಲದಲ್ಲಿ ಅವರನ್ನು ಏತಕ್ಕೆ ಸಸ್ಪೆಂಡ್ ಮಾಡಲಿಲ್ಲ ? ತಾವು ಇದರ ಬಗ್ಗೆ ವಿವರಣೆ ಕೊಡಬೇಕು.

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಮಾನ್ಯಸಭೆಗೆ ತಾವು ಏನು ಇನ್‌ಫರ್ಮೇಷನ್ ಯಾವ ಕಾಲದಲ್ಲಿ ಬೇಕು ಎಂದು ಹೇಳಿದರೂ ಒದಗಿಸಿಕೊಡತಕ್ಕಂಥವನಿದ್ದೇನೆ. ಮಾನ್ಯ ಸದಸ್ಯರು ಏನು ಅಪೇಕ್ಷೆ ಮಾಡುತ್ತಾರೋ ಅದನ್ನು ಒದಗಿಸಿ ಕೊಡಲಿಕ್ಕೆ ತೀವ್ರ ಪ್ರಯತ್ನ ಮಾಡುತ್ತೇನೆ. ಸಕ್ರೆಟರಿಯೇಟ್‌ನಲ್ಲಿ ಇನ್‌ಫರ್ಮೇಷನ್ ಇಲ್ಲದಿದ್ದರೆ, ಚೀಫ್ ಇಂಜನಿಯರ್ ಲೆವೆಲ್‌ನಲ್ಲಿ ಇನ್‌ಫರ್ಮೇಷನ್ ತರಿಸಬೇಕಾದರೆ ಅದನ್ನು ತರಿಸಿಕೊಡುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಏನೇನು ಪ್ರೋಗ್ರೆಸ್ ಆಗಿದೆ ಎನ್ನುವುದನ್ನು ತರಿಸಿಕೊಡಬೇಕು.

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಮಾನ್ಯ ಸದಸ್ಯರಿಗೆ ತರಿಸಿಕೊಡುತ್ತೇನೆ.

MADAM SPEAKER.—I will put the Demands to the Vote of the House. The question is:

> "That the respective sums not exceeding the amounts mentioned including the sums granted on account, be granted to the Government to defray the charges which will come in course of payment during the financial year for the period ending 31st day of March 1973, in respect of Demand Nos. 6, 31, 31A, 30B, 32, 47, 48 and 50."

The motion was adopted and the Demands were granted.

(MADAM SPEAKER

As ordered by the Chair the motion for Demands adopted by the Chair are reproduced below :

DEMAND NO. 6—(13) *Other Taxes and Duties*

"That a sum not exceeding Rs. 21,50,000 inclusive of the sum granted 'on account' be granted to the Government to defray the charges which will come in course of payment during the financial year for the period ending 31st day of March 1973, in respect of Demand No. 6,—Other Taxes and Duties."

DEMAND NO. 31—(50) *Public Works*

"That a sum not exceeding Rs. 43,40,92,000 inclusive of the sum granted 'on account' be granted to the Government to defray the charges which will come in course of payment during the financial year for the period ending 31st day of March 1973, in respect of Demand No. 31, 'Public Works' ".

DEMAND NO. 31A—(52) *Capital Outlay on Public Works.*

"That a sum not exceeding Rs. 4,71,67,000 inclusive of the sum granted 'on account' be granted to the Government to defray the charges which will come in course of payment during the financial year for the period ending 31st day of March 1973 in respect of Demand No. 31A, 'Capital Outlay on Public Works'."

DEMAND NO. 30B—(48) *Capital Outlay on Irrigation, Navigation, Embankment and Drainage Works.*

"That a sum not exceeding Rs. 1,81,00,000 inclusive of the sum granted 'on account' be granted to the Government to defray the charges which will come in course of payment during the financial year for the period ending 31st day of March 1973, in respect of Demand No. 30B 'Capital Outlay on Irrigation, Navigation, Embankment and Drainage Works.' "

DEMAND No. 32—(53) *Ports and Pilotage*

"That a sum not exceeding Rs. 18,22,000 inclusive of the sum granted 'on account', be granted to the Government to defray the charges which will come in course of payment during the financial year for the period ending 31st day of March 1973, in respect of Demand No. 32, 'Ports and Pilotage.' "

DEMAND No. 47—(101)—*Capital Outlay on Electricity Schemes.*

"That a sum not exceeding Rs. 42,00,000 inclusive of the sum granted 'on account', be granted to the Government to defray the charges which will come in course of payment during the financial year for the period ending 31st day of March 1973, in respect of Demand No. 47, 'Capital Outlay on Electricity Schemes'."

DEMAND No. 48—(103) *Capital Outlay on Public Works.*

" That a sum not exceeding Rs. 4,00,71,000 inclusive of the sum granted 'on account', be granted to the Government to defray the charges which will come in course of payment during the financial year for the period ending 31st day of March 1973, in respect of Demand No. 48–'Capital Outlay on Public Works."

DEMAND No. 50—(110). *Capital Outlay on Ports.*

" That a sum not exceeding Rs. 35,00,000 inclusive of the sum granted 'on account', be granted to the Government to defray the charges which will come in course of payment during the financial year for the period ending 31st day of March 1973 in respect of Demand No. 50, Capital Outlay on Ports."

Calling Attention Notice to Matters of Urgent Public Importance.

(*i*) *re*: Police firing in Shahu Park, near Raibag.

Sri B. B. SAYANAK (Belgaum).—I call the attention of the Hon'ble Chief Minister to the Police firing at Shahu Park, near Raibag, Belgaum District.

Sri D. DEVARAJ URS (Chief Minister).—I State as follows :—

It is reported that on 24th June 1972 at 20.00 hours, two Excise Sub-Inspectors contacted the Circle Police Inspector, Athani, camping at Raibag and the Police Sub-Inspector, Raibag and requested for assistane